ಉಳ್ಳಾಲ ವಾಣಿ
ವಾರ್ಷಿಕ ಚಂದಾದಾರಾಗಿರಿ
ಒಂದು ವರ್ಷ ಪೂರ್ತಿ ಪತ್ರಿಕೆ ಮನೆಗೆ ತಲುಪಿಸಲು
₹250 ಪಾವತಿಸಿ

ಮಂಗಳೂರು ಏಪ್ರಿಲ್ 05–ಏಪ್ರಿಲ್ 23: 2026 ಸಂಪುಟ 2, ಸಂಚಿಕೆ 16, ಪುಟಗಳು–8 RNI:KNKAN/26/A0422 www.ullalavani.com ullalavani@gmail.com ₹10

# ಉಳ್ಳಾಲ ವಾಣಿ

ಕನ್ನಡ ಪತ್ರಿಕೆ
ಕಡಲ ಮಗಳ್

ಸುದ್ದಿ, ಪತ್ರಿಕೆ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿರಿ
ಉಳ್ಳಾಲ ವಾಣಿ
ಅಪ್ಪಟ್ಟ ಕಾಂಪ್ಲೆಕ್ಸ್, ಯೆನೆಪೋಯ ಆಸ್ಪತ್ರೆ ಹತ್ತಿರ, ಕುತ್ತಾರುಪದವು
9972528110

ಪುಟ 2 .ತೊಕ್ಕೊಟ್ಟು ವ್ಯಾಯಾಮ ಶಾಲೆ ಹನುಮಾಮೃತ ಸಂಪನ್ನ
ಪುಟ 3 ಕಣಚೂರು ರೂ.1 ಕೋಟಿ ವಿದ್ಯಾರ್ಥಿ ವೇತನಕ್ಕೆ ಅರ್ಹತಾ ಪರೀಕ್ಷೆ
ಪುಟ 4 ಮೇ.9 ಶ್ರೀ ಆದಿಬ್ರಹ್ಮ ಮೊಗೇರ ಕಳ, ನಾರ್ಯ ಬ್ರಹ್ಮಕಲಶೋತ್ಸವ
ಪುಟ 7 ಮಂಜನಾಡಿ ಅಶ್ವಿನಿ ಪ್ರಕರಣ: ಎನ್ಐಟಿಕೆ ವರದಿ ಜಿಲ್ಲಾಡಳಿತಕ್ಕೆ ಸಲ್ಲಿಕೆ, ಕ್ರಮ ಯಾವಾಗ?

### ಕೊಲ್ಯ ಕನೀರುತೋಟ ನಿವಾಸಿ ಮೋಹನ್ ರಾಜ್ ಸಾಧನೆಗೆ ಪ್ರಶಂಸೆ

## ಮಗನೊಂದಿಗೆ ಪಿಯುಸಿ ತೇರ್ಗಡೆಗೊಂಡ ತಂದೆ

**ಕೊಲ್ಯ:** ಇಲ್ಲಿನ ಕನೀರುತೋಟ ನಿವಾಸಿ ಉದ್ಯಮಿ, ಪುತ್ರನ ಜೊತೆಗೆ ದ್ವಿತೀಯ ಪಿಯುಸಿ ಪರೀಕ್ಷೆ ಬರೆದು ಮೊದಲ ಪ್ರಯತ್ನದಲ್ಲೇ ಕಲಾ ವಿಭಾಗದ ಆರು ವಿಷಯಗಳಲ್ಲಿ 324 ಅಂಕ ಪಡೆದು ದ್ವಿತೀಯ ದರ್ಜೆ ಶ್ರೇಣಿಯಲ್ಲಿ ತೇರ್ಗಡೆಗೊಂಡು, ಮಗನ ಪಿಯುಸಿ ಫಲಿತಾಂಶದೊಂದಿಗೆ ತಾನೂ ಸಂಭ್ರಮಿಸಿದ್ದಾರೆ.

ಬೆಳದುನಿಂತ ಮಕ್ಕಳಿದ್ದರೂ ಪಿಯುಸಿ ಪಾಸಾಗದ ಕೊರಗು ಕೊಲ್ಯ ಕನೀರುತೋಟ ನಿವಾಸಿ ಮೋಹನ್ ರಾಜ್ ಅಮೀನ್ ಅವರಿಗಿತ್ತು.

ಮೋಹನ್ ರಾಜ್ ಅವರು ಕೊಲ್ಯದ ಆನಂದಾಶ್ರಮ ಪ್ರೌಢಶಾಲೆಯಲ್ಲಿ ಹೈಸ್ಕೂಲ್ ಶಿಕ್ಷಣ ಮುಗಿಸಿ,1984 ರಲ್ಲಿ ಉಳ್ಳಾಲದ ಮದನಿ ಕಾಲೇಜಲ್ಲಿ ಪ್ರಥಮ ಪಿಯುಸಿ ಶಿಕ್ಷಣ ಪಡೆದಿದ್ದರು.ದ್ವಿತೀಯ ಪಿಯುಸಿ ಶಿಕ್ಷಣಗಳಿಸಲು ಅಂದಿನ ದಿನಗಳಲ್ಲಿ ಮೋಹನ್ ರಾಜ್ ಅವರಿಗೆ ಪೂರಕ ವಾತಾವರಣ ಲಭಿಸಿರಲಿಲ್ಲ.ಬಡತನ,ಕುಟುಂಬ ನಿರ್ವಹಣೆಯ ಜವಬ್ದಾರಿಯು ಅವರ ಹೆಗಲ ಮೇಲೇರಿದ ಪರಿಣಾಮ ಅವರು ಕೆಲಸಕ್ಕೆ ತೆರಳುವ ಅನಿವಾರ್ಯತೆ ಬಂದೊದಗಿತ್ತು.ನಂತರದ ದಿನದಲ್ಲಿ ಮದುವೆಯಾಗಿ ಮಕ್ಕಳು ಜನಿಸಿ ಕಷ್ಟ ಪಟ್ಟು ವ್ಯವಹಾರದಲ್ಲಿ ಯಶಸ್ಸು ಪಡೆದರೂ ಸಹ ಪಿಯು ಶಿಕ್ಷಣ ಸಂಪೂರ್ಣಗೊಳಿಸಲಂತೂ ಸಾಧ್ಯವೇ ಆಗಿರಲಿಲ್ಲ.ಹಾಗಂತ ಮೋಹನ್ ರಾಜ್ ಅವರು ತನ್ನ ಮಕ್ಕಳನ್ನು ಶಿಕ್ಷಣದಿಂದ ವಂಚಿತಗೊಳಿಸಿರಲಿಲ್ಲ. ಅವರ ಹಿರಿಯ ಮಗಳು ಪೃಥ್ವಿರೇಖ ಅವರು ಬಿಎಸ್ಸಿ ಪದವೀಧರೆಯಾಗಿದ್ದು ಖಾಸಗಿ ಉದ್ಯೋಗದಲ್ಲಿದ್ದಾರೆ. ಎರಡನೇ ಮಗಳು ಪ್ರಕೃತಿ ಕೂಡಾ ಡಿಪ್ಲೋಮ ವ್ಯಾಸಂಗ ಮುಗಿಸಿ ಖಾಸಗಿ ಉದ್ಯೋಗದಲ್ಲಿದ್ದಾರೆ. ಮೋಹನ್ ರಾಜ್ ಅವರ ಕಿರಿಯ ಮಗ ಕ್ಷಿತಿಜ್ ರಾಜ್ ಅವರು ಈ ಭಾರಿ ದ್ವಿತೀಯ ಪಿಯುಸಿ ಪರೀಕ್ಷೆ ಬರೆದಿದ್ದು ವಾಣಿಜ್ಯ ವಿಭಾಗದಲ್ಲಿ ಪ್ರಥಮ ದರ್ಜೆಯ ಶ್ರೇಣಿಯಲ್ಲಿ ತೇರ್ಗಡೆಗೊಂಡಿದ್ದಾರೆ. ತನ್ನ ಮಧ್ಯ ವಯಸ್ಸಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆ ಬರೆದು ಪಾಸಾಗುವ ಮೂಲಕ, ಸಾಧಿಸುವ ಛಲವೊಂದಿದ್ದರೆ ಅದಕ್ಕೆ ಬಡತನ ,ವಯಸ್ಸು ಎಂದಿಗೂ ಅಡ್ಡಿ ಬರಲಾರದು ಎಂಬುದಕ್ಕೆ ಇಂದಿನ ಯುವ ಪೀಳಿಗೆಗೆ ಮೋಹನ್ ರಾಜ್ ಅವರು ಸಂದೇಶ ಸಾರಿ ನಿದರ್ಶನರಾಗಿದ್ದಾರೆ.



> ಮಕ್ಕಳು ಶಿಕ್ಷಣ ಪಡೆಯಲು ಅದಕ್ಕೆ ತಕ್ಕ ಪೂರಕ ವಾತಾವರಣ ನಿರ್ಮಿಸಿ ಕೊಡುವುದು ಪೋಷಕರ ಜವಬ್ದಾರಿಯಾಗಿದೆ.ಇಂತಿಷ್ಟು ಅಂಕಗಳನ್ನ ಗಳಿಸಲೇ ಬೇಕೆಂಬ ಟಾರ್ಗೆಟನ್ನೂ ಪೋಷಕರು ಮಕ್ಕಳಿಗೆ ಕೊಡಬಾರದು. ಹಾಗಾದಲ್ಲಿ ಶಿಕ್ಷಣ ಎಂಬುದು ಮಕ್ಕಳಿಗೆ ಸರೆಮನೆಯಂತಾಗುತ್ತದೆ.
> ■ ಮೋಹನ್ ರಾಜ್ ಅಮೀನ್.

ಮೋಹನ್ ರಾಜ್ ಅವರು ಮುಡಿಪುವಿನ ಸರಕಾರಿ ಕಾಲೇಜಿನಲ್ಲಿ ಪರೀಕ್ಷೆ ಬರೆದಿದ್ದು,ಅವರು ಪರೀಕ್ಷಾ ಕೇಂದ್ರಕ್ಕೆ ಪರೀಕ್ಷೆ ಬರೆಯಲು ತೆರಳಿದಾಗ ಅಲ್ಲಿ ಪರೀಕ್ಷಾ ನಿಯಂತ್ರಣಕ್ಕೆ ನಿಯೋಜನೆಗೊಂಡ ಶಿಕ್ಷಕರು ಮತ್ತು ಪರೀಕ್ಷೆ ಬರೆಯಲು ಬಂದಿದ್ದ ವಿದ್ಯಾರ್ಥಿಗಳು ಒಮ್ಮೆ ಅವಕ್ಕಾಗಿದ್ದರಂತೆ.ಬಳಿಕ ಮೋಹನ್ ರಾಜ್ ಅವರೇ ತಾನು ಪರೀಕ್ಷೆ ಬರೆಯಲು ಬಂದಿರುವುದಾಗಿ ↘ 5ನೇ ಪುಟಕ್ಕೆ

# ಆಟೋ ಚಾಲಕರ ಸಂಕಷ್ಟ ಬೀದಿಗಿಳಿದು ಹೋರಾಟ

**ತೊಕ್ಕೊಟ್ಟು:** ನಗರ ಮತ್ತು ಗ್ರಾಮಾಂತರ ಭಾಗಗಳಲ್ಲಿ ಸಂಚಾರಕ್ಕೆಪ್ರತ್ಯೇಕ ನಿಯಮಗಳು ಜಾರಿಯಲ್ಲಿರುವುದರಿಂದ ಚಾಲಕರು ಸಂಕಷ್ಟ ಅನುಭವಿಸುತ್ತಿದ್ದಾರೆ. ಒಂದು ಜಿಲ್ಲೆ ಒಂದು ಪರವಾನಗಿ ವ್ಯವಸ್ಥೆ ಜಾರಿಗೊಂಡರೆ ಎಲ್ಲೆಡೆ ಸುಗಮವಾಗಿ ಸಂಚರಿಸಲು ಸಾಧ್ಯವಾಗುತ್ತದೆ. ಇಂಧನ ದರ ಏರಿಕೆಗೆ ತಕ್ಕಂತೆ ದರ ಪರಿಷ್ಕರಣೆ ಮಾಡದಿರುವುದರಿಂದ ಚಾಲಕರ ಆದಾಯದ ಮೇಲೆ ಗಂಭೀರ ಪರಿಣಾಮ ಬೀರುತ್ತಿದೆ. ಈ ರೀತಿಯ ಹಲವು ಬೇಡಿಕೆಗಳನ್ನು ಮುಂದಿರಿಸಿಕೊಂಡು ರಿಕ್ಷಾ ಚಾಲಕರು ಬೀದಿಗೆ ಇಳಿದಿದ್ದಾರೆ.

ಜಿಲ್ಲಾದ್ಯಾಂತ ಏಕರೂಪದ ಸಂಚಾರ ಪರವಾನಗಿ ಜಾರಿಗೊಳಿಸುವುದು ಹಾಗೂ ಇಂಧನ ದರ ಏರಿಕೆಗೆ ಅನುಗುಣವಾಗಿ ಪ್ರಯಾಣ ದರ ಪರಿಷ್ಕರಣೆ ಮಾಡಲಾಗುತ್ತಿದೆ. ಚಾಲಕರಿಗೆ ಸಾಮಾಜಿಕ ಭದ್ರತೆ ಒದಗಿಸುವ ಕಲ್ಯಾಣ ಯೋಜನೆಗಳನ್ನು ಸರ್ಕಾರ ಜಾರಿಗೊಳಿಸಬೇಕು. ತುರ್ತು ಸಂದರ್ಭಗಳಲ್ಲಿ ಕುಟುಂಬ ಸದಸ್ಯರನ್ನು ಅಥವಾ ರೋಗಿಗಳನ್ನು ಆಸ್ಪತ್ರೆಗೆ ಕರೆದೊಯ್ಯುವಾಗ ಪೊಲೀಸರು ಆಟೋಗಳನ್ನು ತಡೆದು ರೂ.10,000ವರೆಗೆ ದಂಡ ವಿಧಿಸುವುದು ನ್ಯಾಯಸಮ್ಮತವಲ್ಲ. ಗ್ರಾಮಾಂತರ ಪಾಸ್ ಹೊಂದಿರುವ ವಾಹನಗಳಿಗೆ ಅಪಘಾತ ಸಂಭವಿಸಿದರೆ ಇನ್ಸುರನ್ಸ್ ಸಮಸ್ಯೆಗಳು ಎದುರಾಗುವ ಸಾಧ್ಯತೆ ಇದೆ. ನಿಯಮಿತವಾಗಿ ತೆರಿಗೆ ಕಟ್ಟಿದರೂ ಚಾಲಕ ರಿಗೆ ಅಗತ್ಯ ಸೌಲಭ್ಯಗಳು ಸಿಗುತ್ತಿಲ್ಲ. ಗ್ಯಾಸ್ ಭರ್ತಿಯಲ್ಲಿಯೂ ಚಾಲಕರು ಸಂಕಷ್ಟ ಅನುಭವಿಸುತ್ತಿದ್ದು, ಕೆಲವು ಪಂಪ್‌ಗಳಲ್ಲಿ ಆಟೋಗಳಿಗೆ ಗ್ಯಾಸ್ ನೀಡುತ್ತಿಲ್ಲ. ಪಂಪ್ ಮಾಲೀಕರು ಸಾರ್ವಜನಿಕರಿಗೆ ತೊಂದರೆ ಉಂಟುಮಾಡುವ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದಾರೆ. ಮಂಗಳೂರು ಗ್ರಾಮಾಂತರ ವಾಹನಗಳಿಗೆ ನಗರ ಪ್ರವೇಶಕ್ಕೆ ನಿರ್ಬಂಧವಿದ್ದರೂ ನಗರ ವಾಹನಗಳು ಗ್ರಾಮಾಂತರ ಭಾಗಗಳಿಗೆ ಸಂಚರಿಸುತ್ತಿರುವುದಕ್ಕೆ ಯಾವುದೇ ದಂಡ ವಿಧಿಸಲಾಗುತ್ತಿಲ್ಲ.ತುರ್ತು ಸಂದರ್ಭಗಳಲ್ಲಿ ಸಹ ಸಾಕ್ಷ್ಯ ಕೇಳುವ ನಿಯಮ ಚಾಲಕರಿಗೆ ತೊಂದರೆಯಾಗುತ್ತಿದೆ. ಮಂಗಳೂರು ಗ್ರಾಮಾಂತರ, ಬಂಟ್ವಾಳ, ಪುತ್ತೂರು ಸೇರಿದಂತೆ ವಿವಿಧ ಪ್ರದೇಶಗಳಲ್ಲಿ ಕೆಎ–19 ನೋಂದಣಿ ಹೊಂದಿರುವ ಆಟೋ ಚಾಲಕರು ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾರೆ. ಸರ್ಕಾರ ಶೀಘ್ರ ಕ್ರಮ ಕೈಗೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಲಾಗುತ್ತಿದೆ ಅನ್ನುವ ಎಚ್ಚರಿಕೆಯನ್ನು ನೀಡಿದ್ದಾರೆ.





### ಏ.13 ರಂದು ಬೃಹತ್ ಪ್ರತಿಭಟನೆ

ಜಿಲ್ಲೆಯ ಆಟೋ ರಿಕ್ಷಾ ಚಾಲಕರ ವಿವಿಧ ಸಮಸ್ಯೆಗಳು ದಿನೇದಿನೇ ತೀವ್ರವಾಗುತ್ತಿರುವ ಹಿನ್ನೆಲೆ, ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಏಪ್ರಿಲ್ 13ರಂದು ಬೃಹತ್ ಪ್ರತಿಭಟನೆ ಸಮಾವೇಶ ಹಮ್ಮಿಕೊಳ್ಳಲಾಗಿದೆ.ಆಟೋ ರಾಜಾ ಕನ್ಮಾರ್ ಯೂನಿಯನ್ ದಕ್ಷಿಣ ಕನ್ನಡ ಅಧ್ಯಕ್ಷ ಅಬ್ದುಲ್ ಜಲೀಲ್ ಕೆ. ತೊಕ್ಕೊಟ್ಟು ಪ್ರೆಸ್ ಕ್ಲಬ್ ನಲ್ಲಿ ಮಾಹಿತಿ ನೀಡಿದರು. ಪತ್ರಿಕಾಗೋಷ್ಠಿಯಲ್ಲಿ ಹೋರಾಟ ಸಮಿತಿ ಸಂಚಾಲಕ ಸಿದ್ದೀಕ್ ಕೊಡಕ್ಕಲ್, ಕರಾವಳಿ ಆಟೋ ಪಾರ್ಕ್ ಮುಡಿಪು ಅಧ್ಯಕ್ಷ ಹರೀಶ್ ಗಿಂಡೆಪೇರ್, ಯೂನಿಯನ್ ಉಪಾಧ್ಯಕ್ಷ ಮನ್ಸೂರ್ ಮಲಾರ್, ಜೊತೆ ಕಾರ್ಯದರ್ಶಿ ಶಬೀಕ್ ಸಾಲೆತ್ತೂರು ಸೇರಿದಂತೆ ಹಲವರು ಉಪಸ್ಥಿತರಿದ್ದರು.

**'ಇನ್ನೂ ಹಲವು ಸಮಸ್ಯೆಗಳಿವೆ'**

ಆಟೋ ರಿಕ್ಷಾ ಚಾಲಕರ ಸಮಸ್ಯೆಗಳು ಕೇವಲ ಪರವಾನಗಿ ಅಥವಾ ದರ ಪರಿಷ್ಕರಣೆಯಲ್ಲಿಯೇ ಸೀಮಿತವಾಗಿಲ್ಲ. ದಿನನಿತ್ಯದ ಜೀವನದಲ್ಲಿ ಅವರು ಎದುರಿಸುತ್ತಿರುವ ಇನ್ನೂ ಹಲವಾರು ಅಡಚಣೆಗಳು ಗಮನಾರ್ಹವಾಗಿವೆ. ಮೊದಲನೆಯದಾಗಿ, ಪಾರ್ಕಿಂಗ್ ಸೌಲಭ್ಯಗಳ ಕೊರತೆ ದೊಡ್ಡ ಸಮಸ್ಯೆಯಾಗಿದೆ. ನಗರ ಪ್ರದೇಶಗಳಲ್ಲಿ ಸೂಕ್ತವಾದ ಆಟೋ ನಿಲ್ದಾಣಗಳು (ಸ್ಟ್ಯಾಂಡ್‌ಗಳು) ಇಲ್ಲದ ಕಾರಣ ಚಾಲಕರು ರಸ್ತೆ ಬದಿಯಲ್ಲಿ ವಾಹನ ನಿಲ್ಲಿಸಲು ಪರದಾಡುತ್ತಿದ್ದಾರೆ. ಇದರಿಂದ ಟ್ರಾಫಿಕ್ ಸಮಸ್ಯೆಗಳು ↘ 5ನೇ ಪುಟಕ್ಕೆ

## 3ನೇ ಬ್ಯಾರಿ ಸಾಹಿತ್ಯ ಸಮ್ಮೇನದ ಅಧ್ಯಕ್ಷರಾಗಿ ಕವಿ, ಹಾಡುಗಾರ ಬಶೀರ್ ಅಹ್ಮದ್ ಕಿನ್ಯಾ ಆಯ್ಕೆ

**ಮಂಗಳೂರು:** ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡಮಿಯು ದೇರಳಕಟ್ಟೆಯ ಮೇಲ್ತೆನೆ ಸಂಘಟನೆಯ ಸಹಯೋಗದೊಂದಿಗೆ ಮೇ 5ರಂದು ಉಳ್ಳಾಲ ತಾಲೂಕಿನ ಮುಡಿಪು ಬಳಿಯ ಹೂಹಾಕುವ ಕಲ್ಲು ಎಸ್.ಕೆ. ಮಲ್ಟಿಪರ್ಪಸ್ ಹಾಲ್‌ನಲ್ಲಿ ಹಮ್ಮಿಕೊಂಡಿರುವ ಉಳ್ಳಾಲ ತಾಲೂಕು 3ನೇ ಬ್ಯಾರಿ ಸಾಹಿತ್ಯ ಸಮ್ಮೇನದ ಅಧ್ಯಕ್ಷರಾಗಿ ಕವಿ, ಹಾಡುಗಾರ ಬಶೀರ್ ಅಹ್ಮದ್ ಕಿನ್ಯಾ ಆಯ್ಕೆಯಾಗಿದ್ದಾರೆ.

ಸುಮಾರು 28 ವರ್ಷಗಳಿಂದ ಬ್ಯಾರಿ ಗಾಯಕರಾಗಿರುವ ಬಶೀರ್ ಅಹ್ಮದ್ ಕಿನ್ಯಾ ಬಹುಭಾಷಾ ಕವಿಯಾಗಿ, ಪತ್ರಕರ್ತರಾಗಿ ಗುರುತಿಸಿಕೊಂಡಿದ್ದಾರೆ. ಬಶೀರ್ ಕಿನ್ಯರೊ ಪಾಟ್, ಕೊತ್ತಿಪ್ಪೂ, ನಲ್ಮಾಲೆ ಮತ್ತು ಮೀಲಾದ್ ಪಾಟ್ ಇವು ಬಶೀರ್ ಅಹ್ಮದ್ ಕಿನ್ಯಾರ ಪ್ರಕಟಿತ ಬ್ಯಾರಿ ಕೃತಿಗಳು. ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡಮಿಯು ಹೊರ ತಂದಿರುವ ನೂರು ಕವಿಮಾರೊ ಕಾವ್ಯ ಸಂಕಲನ ಕೃತಿಗೆ ಇವರು ಸಂಪಾದಕರಾಗಿದ್ದರು.



ಇವರ ಮೊದಲ ಬ್ಯಾರಿ ಹಾಡುಗಳ ಧ್ವನಿಸುರುಳಿ 'ಮಸ್ಕತ್ತ್‌ಗೂರು ಕಲ್ಲಾಸ್' ಕೇವಲ ನಾಲ್ಕೈದು ದಿನಗಳಲ್ಲಿ ಮಾರಾಟ ಗೊಂಡು ದಾಖಲೆ ನಿರ್ಮಿಸಿತ್ತು. ಆ ಬಳಿಕ ಅಲಿಕಾತ್, ಉರುಮಾಲ್, ಬಂಗಾರ್, ಮಹರ್, ಮರ್ಹಬ, ಸುಲ್ತಾನ ಮುಂತಾದ ಧ್ವನಿಸುರುಳಿಗಳೂ ಭಾರೀ ಮಟ್ಟದಲ್ಲಿ ಮಾರಾಟಗೊಂಡು ಸುದ್ದಿ ಮಾಡಿದ್ದವು. 2002ರಲ್ಲಿ ಹೊರ ಬಂದ ಇವರ ಬ್ಯಾರಿ ಬೈಲಾ ಧ್ವನಿಸುರುಳಿಯು ಸುಮಾರು 22,000 ಪ್ರತಿಗಳು ಮಾರಾಟವಾಗಿ ದಾಖಲೆಯನ್ನೇ ನಿರ್ಮಿಸಿದೆ. ಬ್ಯಾರಿ ಮಸಾಲೆ ಮತ್ತು ಚೆಡಿಲ್ ಇವರು ಸಾಹಿತ್ಯ ರಚಿಸಿ, ಹಾಡಿರುವ ಇತರ ಧ್ವನಿ ಸುರುಳಿಗಳು. ಬ್ಯಾರಿ ಮತ್ತು ಕನ್ನಡದಲ್ಲಿ ಧಫ್ ಹಾಡುಗಳನ್ನು ರಚಿಸಿರುವ ಬಶೀರ್ ಅಹ್ಮದ್ ಕಿನ್ಯಾ ಸುಮಾರು 150ಕ್ಕಿಂತಲೂ ಹೆಚ್ಚು ಬ್ಯಾರಿ, ಕನ್ನಡ, ಮಲಯಾಳಂ ಧ್ವನಿಸುರುಳಿಗಳಿಗೆ ಸಾಹಿತ್ಯ ರಚಿಸಿ ಹಾಡಿದ್ದಾರೆ. ರಾಜ್ಯ, ಹೊರ ರಾಜ್ಯ ಮತ್ತು ವಿದೇಶಗಳಲ್ಲೂ ಬ್ಯಾರಿ ಕವಿಗೋಷ್ಠಿ ಮತ್ತು ಬಹುಭಾಷಾ ಕವಿಗೋಷ್ಠಿಗಳಲ್ಲಿ ಭಾಗವಹಿಸಿದ್ದಾರೆ.

ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡಮಿಯ ಸದಸ್ಯರಾಗಿದ್ದ ಬಶೀರ್ ಅಹ್ಮದ್ ಕಿನ್ಯಾ ಅವರಿಗೆ ಅಕಾಡಮಿಯು ಗೌರವ ಪ್ರಶಸ್ತಿ ನೀಡಿದೆ. 2013ರಲ್ಲಿ ದುಬೈನಲ್ಲಿ ನಡೆದ ದ.ಕ. ಸುನ್ನಿ ಸೆಂಟರ್‌ನ ಮೀಲಾದ್ ಮೀಟ್ ಕಾರ್ಯಕ್ರಮದಲ್ಲಿ ಇವರನ್ನು ಬ್ಯಾರಿ ಕವಿಯೆಂಬ ನೆಲೆಯಲ್ಲಿ ಅಭಿನಂದಿಸಲಾಗಿದೆ. ಮಂಗಳೂರಿನ ಬ್ಯಾರಿ ಕಲಾರಂಗವು 2013ರಲ್ಲಿ ಬ್ಯಾರಿ ಕಲಾಶ್ರೀ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. 2015ರಲ್ಲಿ ಅಬುಧಾಬಿಯ ಬ್ಯಾರೀಸ್ ವೆಲ್ಫೇರ್ ಫೋರಂ ಮತ್ತು ಬ್ಯಾರಿ ಗೈಸ್ ಮತ್ತಿತರ ಸಂಘಟನೆಗಳು ಇವರನ್ನು ಅಭಿನಂದಿಸಿವೆ. ಬ್ಯಾರಿ ಬರಹಗಾರರು ಮತ್ತು ಕಲಾವಿದರ ಒಕ್ಕೂಟ, ಮೇಲ್ತೆನೆ ಸಂಘಟನೆಯ ಸ್ಥಾಪಕರಲ್ಲಿ ಒಬ್ಬರಾಗಿರುವ ಇವರು ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. ಕಿನ್ಯಾ ಅನ್ಸಾರುಲ್ ಮಸಾಕೀನ್ ಸಂಘಟನೆಯ ಕಾರ್ಯದರ್ಶಿಯಾಗಿ, ಅಖಿಲ ಭಾರತ ಬ್ಯಾರಿ ಪರಿಷತ್ ಮತ್ತು ಬ್ಯಾರಿ ಕಲಾರಂಗದಲ್ಲಿ ಸಕ್ರಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದರು.

## 11ರ ಬಾಲಕಿಯಿಂದ ಮತದಾನ ಜಾಗೃತಿ ಗಮನ ಸೆಳೆದ ವಿಶಿಷ್ಟ ಪ್ರಯತ್ನ




**ಬಂಟ್ವಾಳ:** ಸಾಮಾನ್ಯವಾಗಿ ಚುನಾವಣೆ ಸಮೀಪಿಸುತ್ತಿದ್ದರು ಮತದಾರರು ಮತಹಾಕುವಲ್ಲಿ ಹೆಚ್ಚಿನ ಆಸಕ್ತಿಯನ್ನು ತೋರುವುದಿಲ್ಲ. ಕೆಲವರು ಉತ್ಸಾಹದಿಂದ ಮತ ಹಾಕಿದರೆ ಇನ್ನು ಕೆಲವರು ಯಾರಪ್ಪ ಹೋಗುವುದು ಅಷ್ಟು ದೂರ ಎಂಬ ಭಾವನೆಯಿಂದ ಮನೆಯಲ್ಲಿಯೇ ಉಳಿದುಬಿಡುತ್ತಾರೆ. ಆದರೆ ಈ ಬಾಲಕಿಯೋರ್ವಳು ಮತದಾರರನ್ನು ಚುನಾವಣಾ ಪ್ರಕ್ರಿಯೆಯ ಭಾಗವಾಗಿಸಲು ವಿಶಿಷ್ಟ ಜಾಗೃತಿಯನ್ನು ಮೂಡಿಸುತ್ತಿದ್ದಾಳೆ. ಹೌದು, ಬಂಟ್ವಾಳ ತಾಲೂಕಿನ 11 ವರ್ಷದ ಈ ಪುಟ್ಟ ಹುಡುಗಿ ಚುನಾವಣೆಯ ಮಹತ್ವವನ್ನು ಜನಸಾಮಾನ್ಯರಿಗೆ ತಲುಪಿಸಲು ಮಂಜೇಶ್ವರ, ಕಾಸರಗೋಡು ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಂಚರಿಸಿದ್ದಾರೆ. ಐದು ಭಾಷೆಗಳನ್ನು ಕಲಿತಿರುವ ಸನ್ನಿಧಿ ಕಶೆಕೋಡಿ ದೆಹಲಿ, ಗೋವಾ, ಕೇರಳ , ಕರ್ನಾಟಕ ಮುಂತಾದ ರಾಜ್ಯಗಳ ಚುನಾವಣೆಗಳಿಗೂ ಇದೇ ರೀತಿಯ ಕಾರ್ಯದಿಂದ ಪ್ರಶಂಸೆ ಗಳಿಸಿದ್ದಾರೆ. ಕೇರಳ ಚುನಾವಣೆ ಹಿನ್ನಲೆ ಕಾಸರಗೋಡು ಜಿಲ್ಲಾ ಕಲೆಕ್ಟರ್ ಅವರನ್ನು ಭೇಟಿ ಮಾಡಿದ್ದಾರೆ. ಈ ಪುಟ್ಟ ಪೋರಿಯ ಕೆಲಸಕ್ಕೆ ಅವರು ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಲೋಕೇಶ್ ಗೌಡ ಕಶೆಕೋಡಿ ಹಾಗೂ ಶೀಲಾವತಿ ದಂಪತಿಯ ಪುತ್ರಿಯಾಗಿರುವ ಸನ್ನಿಧಿ ಕಶೆಕೋಡಿ ಪ್ರಸ್ತುತ ಬಾಲವಿಕಾಸ ಆಂಗ್ಲ ಮಾಧ್ಯಮ ಶಾಲೆ ಮಾಣಿಯಲ್ಲಿ ಶಿಕ್ಷಣ ಪಡೆಯುತ್ತಿದ್ದಾಳೆ. ಈ ಬಾಲಕಿಯ ಕಾರ್ಯಕ್ಕೆ ಸಾರ್ವಜನಿಕ ವಲಯಗಳಲ್ಲಿ ವ್ಯಾಪಕ ಪ್ರಶಂಸೆ ವ್ಯಕ್ತವಾಗಿದೆ.

## ಉಳ್ಳಾಲದ ಭರತನಾಟ್ಯ ಕಲಾವಿದ ವಿದ್ವಾನ್ ಶ್ರಾವಣ್ ಅನಾರೋಗ್ಯಕ್ಕೆ ಬಲಿ

**ಉಳ್ಳಾಲ:** ಭರತನಾಟ್ಯದಲ್ಲಿ ಅನೇಕ ಸಾಧನೆಗಳ ಸಾಧಿಸಿದ ಶಾಂತಲ ಪ್ರಶಸ್ತಿ ಪುರಸ್ಕೃತ ಉಳ್ಳಾಲ ಮೋಹನ್ ಕುಮಾರ್ ಅವರ ಶಿಷ್ಯ, ಮಂತ್ರನಾಟ್ಯಕಲಾ ಗುರುಕುಲದ ಸ್ಥಾಪಕ ವಿದ್ವಾನ್ ಶ್ರಾವಣ್ ಉಳ್ಳಾಲ ಇವರು ಹಳದಿ ಕಾಮಾಲೆ ರೋಗಕ್ಕೆ ತುತ್ತಾಗಿ ಚಿಕಿತ್ಸೆ ಫಲಕಾರಿಯಾಗದೆ ಆಸ್ಪತ್ರೆಯಲ್ಲಿ ಸಾವನ್ನಪ್ಪಿದ್ದಾರೆ.

> ■ ಶ್ರಾವಣ್ ಅವರು ಕಳೆದ 3 ತಿಂಗಳಿಂದ ಹಳದಿ ಕಾಮಾಲೆ ರೋಗದಿಂದ ಬಳಲುತ್ತಿದ್ದರು.

ಸಣ್ಣ ಹರೆಯದಲ್ಲೇ ಇವರ ಸಾವು ಭರತನಾಟ್ಯ ಕಲಾ ಕ್ಷೇತ್ರ ಕಲಾವಿದರು, ಶಿಷ್ಯರು, ಕುಟುಂಬಿಕರು ಹಾಗೂ ಅಭಿಮಾನಿಗಳಿಗೆ ಆಘಾತವನ್ನು ಉಂಟು ಮಾಡಿದೆ.



ಶ್ರಾವಣ್ ಅವರು ಕಳೆದ ಮೂರು ತಿಂಗಳುಗಳಿಂದ ಹಳದಿ ಕಾಮಾಲೆ ರೋಗದಿಂದ ಬಳಲುತ್ತಿದ್ದು, ಕಳೆದ ವಾರ ಅವರ ಆರೋಗ್ಯದಲ್ಲಿ ತೀವ್ರ ಏರು ಪೇರು ಕಂಡು ಬಂದ ಪರಿಣಾಮ ಮಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಶುಕ್ರವಾರ ಸಂಜೆ ಅವರು ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ಶಾಂತಲಾ ಪ್ರಶಸ್ತಿ ಪುರಸ್ಕೃತ ನಾಟ್ಯಾಚಾರ್ಯ ಉಳ್ಳಾಲ ಮೋಹನ್ ಕುಮಾರ್ ಹಾಗೂ ಸಂಸ್ಥೆಯ ಗೌರವಾಧ್ಯಕ್ಷೆ ಶಕೀಲಾ ಜನಾರ್ದನ ಅವರ ಮಾರ್ಗದರ್ಶನದಲ್ಲಿ ಸ್ಥಾಪಿತವಾದ ಮಂತ್ರ ನಾಟ್ಯಕಲಾ ಗುರುಕುಲವನ್ನು ಶ್ರಾವಣ್ ಉಳ್ಳಾಲ್ ಅವರು ಸಮರ್ಥವಾಗಿ ಮುನ್ನಡೆಸಿ ಅನೇಕ ವಿದ್ಯಾರ್ಥಿಗಳಿಗೆ ಭರತನಾಟ್ಯ ಶಿಕ್ಷಣವನ್ನು ಕಲಿಸಿದ್ದರು. ನೃತ್ಯದ ಜೊತೆಗೆ ಶಾರೀರಿಕ, ಬೌದ್ಧಿಕ,ಮಾನಸಿಕ, ನೈತಿಕ ಹಾಗೂ ಶೈಕ್ಷಣಿಕ ಮೌಲ್ಯಗಳ ಅರಿವು ಮೂಡಿಸುವ ಕಾರ್ಯದಲ್ಲಿ ಗುರುಕುಲವನ್ನು ಮುಂಚೂಣಿಗೆ ತಂದಿದ್ದರು. ಪಂದನಲ್ಲೂರು ಶೈಲಿಯ ಭರತನಾಟ್ಯವನ್ನು ದೇಶದ ವಿವಿಧ ರಾಜ್ಯಗಳಲ್ಲಿ ಪರಿಚಯಿಸಿ ಒರಿಸ್ಸಾ, ಪಶ್ಚಿಮ ಬಂಗಾಳ, ಕೇರಳ, ತಮಿಳುನಾಡು, ಮಹಾರಾಷ್ಟ್ರ, ಆಂಧ್ರ ಪ್ರದೇಶ, ತೆಲಂಗಾಣ, ಗುಜರಾತ್ ಸೇರಿದಂತೆ ಅನೇಕ ರಾಜ್ಯಗಳ ಧಾರ್ಮಿಕ ಹಾಗೂ ಸಾಂಸ್ಕೃತಿಕ ವೇದಿಕೆಗಳಲ್ಲಿ ನೃತ್ಯ ಪ್ರದರ್ಶನ ನೀಡಿದ್ದರು.

ದುಬೈ ಸೇರಿದಂತೆ ವಿದೇಶಗಳಲ್ಲಿ ಭರತನಾಟ್ಯ,ಕೂಚುಪುಡಿ,ಕಥಕ್ ,ಒಡಿಸ್ಸಿ ಹಾಗೂ ಯಕ್ಷಗಾನಗಳ ಸಮ್ಮಿಲನ ಪ್ರದರ್ಶನ ನೀಡಿ ಭಾರತವನ್ನು ಅವರು ಪ್ರತಿನಿಧಿಸಿದ್ದರು. 'ಮೋಕ್ಷಂ', 'ರುದ್ರ ವೀರಭದ್ರ', 'ಶ್ರೀ ಕೃಷ್ಣ ಲೀಲಾಮೃತಂ', 'ತ್ರಿಶಕ್ತಿ', 'ನೃಸಿಂಹ ಚಲತಂ', 'ದಶ ಹಲರೂಪಂ', 'ಶಕ್ತಿ' ಮೊದಲಾದ ನೃತ್ಯ ರೂಪಕಗಳ ಮೂಲಕ ಅಪಾರ ಜನಮನ್ನಣೆ ಪಡೆದಿದ್ದರು. ದೂರದರ್ಶನ ಗ್ರೇಡೆಡ್ ಕಲಾವಿದರಾಗಿದ್ದ ಶ್ರಾವಣ್ ಉಳ್ಳಾಲರು ಭರತನಾಟ್ಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದು,ವೀಣಾ ವಾದನದಲ್ಲೂ ↘ 5ನೇ ಪುಟಕ್ಕೆ

## ಕೆ. ಪಾಂಡ್ಯರಾಜ್ ಬಲ್ಲಾಳ್ ಪದವಿ ಪೂರ್ವ ಕಾಲೇಜು ವಾಣಿಜ್ಯ ವಿಭಾಗದಲ್ಲಿ 100% ಫಲಿತಾಂಶ

**ಉಳ್ಳಾಲ:** 2025–26ನೇ ಶೈಕ್ಷಣಿಕ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಕೆ. ಪಾಂಡ್ಯರಾಜ್ ಬಲ್ಲಾಳ್ ಪದವಿ ಪೂರ್ವ ಕಾಲೇಜು ಉತ್ತಮ ಫಲಿತಾಂಶ ದಾಖಲಿಸಿದೆ. ವಾಣಿಜ್ಯ ವಿಭಾಗದಲ್ಲಿ ಪರೀಕ್ಷೆಗೆ ಹಾಜರಾದ 90 ವಿದ್ಯಾರ್ಥಿಗಳಲ್ಲಿ ಎಲ್ಲಾ 90 ವಿದ್ಯಾರ್ಥಿಗಳು ಯಶಸ್ವಿಯಾಗಿ ತೇರ್ಗಡೆಯಾಗಿ 100% ಫಲಿತಾಂಶ ಸಾಧಿಸಿದ್ದಾರೆ. ವಿದ್ಯಾರ್ಥಿನಿ ಹಂಡಾಫಿಬಿಯಾಂಗ್ ಸುಚೆನ್ ಅವರು 580 (97%) ಅಂಕಗಳನ್ನು ಪಡೆದು ಪ್ರಥಮ ಸ್ಥಾನ ಪಡೆದಿದ್ದಾರೆ. ಸಾನಿಯಾ ತಾಜ್ ಹಾಗೂ ಆಸಿಯಾ ಶಮ್ನಾ ಅವರು ತಲಾ 555 (93%) ಅಂಕಗಳನ್ನು ಪಡೆದು ದ್ವಿತೀಯ ಸ್ಥಾನ ಪಡೆದಿದ್ದಾರೆ. ಪಿ. ಫಾತಿಮಾ ಅಫ್ರ ಅವರು 549 (92%) ಅಂಕಗಳನ್ನು ಪಡೆದು ತೃತೀಯ ಸ್ಥಾನ ಪಡೆದಿದ್ದಾರೆ. ವಾಣಿಜ್ಯ ವಿಭಾಗದಲ್ಲಿ 20 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿಯಲ್ಲಿ ಹಾಗೂ 66 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ವಿಜ್ಞಾನ ವಿಭಾಗದಲ್ಲಿ ವಿದಾರ್ಥಿನಿ ಫಾತಿಮಾ ನಿಧಾ ಅವರು 542 (90%) ಅಂಕಗಳನ್ನು ಪಡೆದು ಪ್ರಥಮ ಸ್ಥಾನ ಪಡೆದಿದ್ದಾರೆ . ಖದೀಜಾ ಅನ್ವಾರ್ ಅವರು 541 (90%) ಅಂಕಗಳನ್ನು ಪಡೆದು ದ್ವಿತೀಯ ಸ್ಥಾನ ಪಡೆದಿದ್ದಾರೆ. ವಿಜ್ಞಾನ ವಿಭಾಗದಲ್ಲಿ 7 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿಯಲ್ಲಿ ಹಾಗೂ 49 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಒಟ್ಟಾರೆ ಕಾಲೇಜು 98% ಫಲಿತಾಂಶ ದಾಖಲಿಸಿದ್ದು, ವಿದ್ಯಾರ್ಥಿಗಳ ಸಾಧನೆಗೆ ಆಡಳಿತ ಮಂಡಳಿ, ಪ್ರಾಂಶುಪಾಲರು, ಶಿಕ್ಷಕ–ಶಿಕ್ಷಕೇತರ ಸಿಬ್ಬಂದಿ ಹಾಗೂ ಪೋಷಕರು ಸಂತಸ ವ್ಯಕ್ತಪಡಿಸಿದ್ದಾರೆ.




> ■ ವಾಣಿಜ್ಯ ವಿಭಾಗದಲ್ಲಿ ಪರೀಕ್ಷೆಗೆ ಹಾಜರಾದ 90 ವಿದ್ಯಾರ್ಥಿಗಳಲ್ಲಿ ಎಲ್ಲಾ 90 ವಿದ್ಯಾರ್ಥಿಗಳು ಯಶಸ್ವಿಯಾಗಿ ತೇರ್ಗಡೆಯಾಗಿ 100% ಫಲಿತಾಂಶ ಸಾಧಿಸಿದ್ದಾರೆ.

## ಕಣಚೂರು ಮಹಿಳಾ ಪದವಿ ಪೂರ್ವ ಕಾಲೇಜು ವಿಜ್ಞಾನ ವಿಭಾಗದಲ್ಲಿ 99% ಫಲಿತಾಂಶ

**ನಾಟೆಕಲ್:** ಕಣಚೂರು ಮಹಿಳಾ ಪದವಿಪೂರ್ವ ಕಾಲೇಜು ದೇರಳಕಟ್ಟೆ ಇದರ 2025–26ನೇ ಸಾಲಿನ ಶೈಕ್ಷಣಿಕ ವರ್ಷದ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಶೇಕಡಾ 99 ಫಲಿತಾಂಶ ಲಭಿಸಿದ್ದು, ಪರೀಕ್ಷೆಗೆ ಹಾಜರಾದ ಒಟ್ಟು 218 ವಿದ್ಯಾರ್ಥಿನಿಯರಲ್ಲಿ 68 ವಿದ್ಯಾರ್ಥಿನಿಯರು ಅತ್ಯುತ್ತಮ ಶ್ರೇಣಿಯಲ್ಲಿ, 132 ವಿದ್ಯಾರ್ಥಿನಿಯರು ಉತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

ವಿಜ್ಞಾನ ವಿಭಾಗದಲ್ಲಿ (PCMB) 32 ವಿದ್ಯಾರ್ಥಿನಿಯರು ಅತ್ಯುತ್ತಮ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ಅನ್‌ಫ ಮರಿಯಮ್ ಕೆ.ಎ. 581 (96.83%), ಸಾರ ಸೈಮಾ 579 (96.5%), ಅಂಕಗಳನ್ನು ಗಳಿಸಿರುತ್ತಾರೆ. ವಾಣಿಜ್ಯ ವಿಭಾಗದ ಕಂಪ್ಯೂಟರ್ ಸೈನ್ಸ್ (ಗಣಕ ವಿಜ್ಞಾನ) ವಿಭಾಗದಲ್ಲಿ 30 ವಿದ್ಯಾರ್ಥಿನಿಯರು ಅತ್ಯುತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾಗಿರುತ್ತಾರೆ. ಅಲೀನ ಆಯಿಷಾ 588(98 %), ಶರೋನ್ ಸಲೋನಿ ಮಾಬೆನ್ 586 (97.66%) ಅಂಕ ಗಳಿಸಿರುತ್ತಾರೆ. ವಾಣಿಜ್ಯ ವಿಭಾಗದಲ್ಲಿ (HEBA) 01 ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾಗಿರುತ್ತಾರೆ. ಆಮಿನಾ ಹಸ್ನ ಅನೀಫ್ (87%) ಗಳಿಸಿರುತ್ತಾರೆ . ಕಲಾ ವಿಭಾಗದಲ್ಲಿ 05 ವಿದ್ಯಾರ್ಥಿನಿ ಉತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾಗಿರುತ್ತಾರೆ. ಹಲೀಮತ್ ರಮೀಝ 574 (95.66% ), ಹಿಬಾ ಜೈನಬ 548 (91.33%)ಅಂಕಗಳನ್ನು ಗಳಿಸಿರುತ್ತಾರೆ. ಉತ್ತಮ ಫಲಿತಾಂಶದೊಂದಿಗೆ ಉತ್ತೀರ್ಣರಾದ ಎಲ್ಲಾ ವಿದ್ಯಾರ್ಥಿನಿಯರಿಗೆ ಕಾಲೇಜಿನ ಆಡಳಿತ ಮಂಡಳಿ, ಪ್ರಾಂಶುಪಾಲರು ಹಾಗೂ ಬೋಧಕ ಬೋಧಕೇತರ ಸಿಬ್ಬಂದಿ ಅಭಿನಂದನೆ ಸಲ್ಲಿಸಿದೆ.



> ■ ಪರೀಕ್ಷೆಗೆ ಹಾಜರಾದ ಒಟ್ಟು 218 ವಿದ್ಯಾರ್ಥಿನಿಯರಲ್ಲಿ 68 ವಿದ್ಯಾರ್ಥಿನಿಯರು ಅತ್ಯುತ್ತಮ ಶ್ರೇಣಿಯಲ್ಲಿ, 132 ವಿದ್ಯಾರ್ಥಿನಿಯರು ಉತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

## ಸಂಪಾದಕೀಯ

# ಮದುವೆಯಾಗದ ಯುವಕರ ಸಂಘ ಸ್ಥಾಪನೆ: ಸಮಾಜದ ಕನ್ನಡಿ ಅಥವಾ ವ್ಯವಸ್ಥೆಯ ವೈಫಲ್ಯ?

ಇತ್ತೀಚಿನ ದಿನಗಳಲ್ಲಿ ಸಮಾಜದಲ್ಲಿ ಹೊಸ ಚಿಂತನೆಗೆ ದಾರಿ ಮಾಡಿಕೊಡುವ ಒಂದು ಮಹತ್ವದ ಬೆಳವಣಿಗೆ ಸ್ಪಷ್ಟವಾಗಿ ಗಮನ ಸೆಳೆಯುತ್ತಿದೆ. ಮದುವೆಯಾಗದ ಯುವಕರು ತಮ್ಮೊಳಗಿನ ಸಮಸ್ಯೆಗಳನ್ನು ಮೌನವಾಗಿ ಹೊತ್ತುಕೊಂಡು ಬದುಕುವುದನ್ನು ಬಿಟ್ಟು, ಅವುಗಳನ್ನು ತೆರೆದ ಮನಸ್ಸಿನಿಂದ ಚರ್ಚಿಸಿ ಪರಿಹಾರ ಕಂಡುಕೊಳ್ಳುವ ದಿಕ್ಕಿನಲ್ಲಿ ಹೆಜ್ಜೆ ಇಡುತ್ತಿರುವುದು ಒಂದು ಸಕಾರಾತ್ಮಕ ಸೂಚನೆ. ಈ ಹಿನ್ನೆಲೆಯಲ್ಲಿ "ಮದುವೆಯಾಗದ ಯುವಕರ ಸಂಘ"ವನ್ನು ರಚಿಸಲು ಕೈಗೊಂಡಿರುವ ನಿರ್ಧಾರ ಕೇವಲ ಸಂಘಟನೆಯ ಆರಂಭವಲ್ಲ; ಇದು ಬದಲಾಗುತ್ತಿರುವ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ವಾಸ್ತವ್ಯದ ಪ್ರತಿಬಿಂಬವಾಗಿದೆ.

ಈ ಸಂಘದ ಮೊದಲ ಸಭೆಯಲ್ಲಿ ಮೂಲಭೂತ ವ್ಯವಸ್ಥೆಯನ್ನು ರೂಪಿಸುವ ಕಾರ್ಯ ಗಂಭೀರವಾಗಿ ನಡೆಯಿತು. ಸಂಘದ ಕಾರ್ಯಚಟುವಟಿಕೆಗಳಿಗೆ ದೃಢವಾದ ದಿಕ್ಕು ನೀಡುವ ಉದ್ದೇಶದಿಂದ ಅಧ್ಯಕ್ಷ, ಖಜಾಂಚಿ ಹಾಗೂ ಕಾನೂನು ಸಲಹೆಗಾರರನ್ನು ನೇಮಕ ಮಾಡಲಾಗಿದೆ. ಇದು ಸಂಘದ ಕಾರ್ಯಪದ್ಧತಿಗೆ ಒಂದು ಸಂಘಟಿತ ರೂಪ ನೀಡುವುದರ ಜೊತೆಗೆ, ಯುವಕರ ಸಮಸ್ಯೆಗಳನ್ನು ಕಾನೂನುಬದ್ಧವಾಗಿ ಹಾಗೂ ವ್ಯವಸ್ಥಿತವಾಗಿ ಮುಂದಿರಿಸಲು ನೆರವಾಗುತ್ತದೆ. ಇಂತಹ ಸಂಘಟಿತ ಪ್ರಯತ್ನಗಳು ಯುವಕರಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸುವುದರ ಜೊತೆಗೆ, ಅವರ ಧ್ವನಿಯನ್ನು ಸಮಾಜ ಮತ್ತು ಆಡಳಿತದ ಮಟ್ಟದಲ್ಲಿ ಸ್ಪಷ್ಟವಾಗಿ ಕೇಳಿಸಿಕೊಳ್ಳಲು ಸಹಕಾರಿ ಆಗುತ್ತವೆ.

ಇದರ ಜೊತೆಗೆ, ಮದುವೆಯಾಗದ ಯುವಕರ ನಿಖರ ಸಂಖ್ಯೆಯನ್ನು ಸರಕಾರದ ಸಾಂಖ್ಯಿಕ ಇಲಾಖೆಯಿಂದ ಬಹಿರಂಗಗೊಳಿಸಲು ಕ್ರಮ ಕೈಗೊಳ್ಳಬೇಕು ಎಂಬ ನಿರ್ಧಾರವು ಅತ್ಯಂತ ಮಹತ್ವದ್ದಾಗಿದೆ. ಇದು ಕೇವಲ ಅಂಕಿಅಂಶಗಳ ಪ್ರಶ್ನೆಯಲ್ಲ; ಸಮಸ್ಯೆಯ ತೀವ್ರತೆಯನ್ನು ಅರ್ಥಮಾಡಿಕೊಳ್ಳಲು ಅಗತ್ಯವಾದ ಮೂಲಭೂತ ಹೆಜ್ಜೆ. ಈ ಸಂಬಂಧ ವಿಧಾನಸಭೆಯಲ್ಲಿ ಶಾಸಕರ ಮುಖಾಂತರ ಧ್ವನಿ ಎತ್ತಲು ಮನವಿ ಪತ್ರ ಸಲ್ಲಿಸಲು ತೀರ್ಮಾನಿಸಿರುವುದು ಸಂಘದ ಗಂಭೀರತೆ ಮತ್ತು ದಿಟ್ಟತನವನ್ನು ತೋರಿಸುತ್ತದೆ.

ಸಭೆಯಲ್ಲಿ ಚರ್ಚಿಸಲಾದ ಅಜೆಂಡಾಗಳು ಇಂದಿನ ಸಮಾಜದ ಆಳವಾದ ಸಮಸ್ಯೆಗಳನ್ನು ಬಯಲಿಗೆಳೆಯುತ್ತವೆ. "ಹೆಣ್ಣು ಸಿಗುತ್ತಿಲ್ಲ" ಎಂಬ ವಿಷಯವು ಕೇವಲ ವೈಯಕ್ತಿಕ ಕಳವಳವಲ್ಲ; ಇದು ಲಿಂಗ ಸಮತೋಲನದ ಕೊರತೆ, ಸಾಮಾಜಿಕ ಆದ್ಯತೆಗಳು ಮತ್ತು ಆರ್ಥಿಕ ಅಸಮಾನತೆಗಳ ಪ್ರತಿಫಲವಾಗಿದೆ. ಕೆಲವೊಂದು ಪ್ರದೇಶಗಳಲ್ಲಿ ಹೆಣ್ಣು–ಗಂಡು ಅನುಪಾತದ ವ್ಯತ್ಯಾಸವು ಮದುವೆಯ ಅವಕಾಶಗಳನ್ನು ಕುಗ್ಗಿಸುತ್ತಿರುವುದು ನಿಜವಾಗಿಯೂ ಚಿಂತಾಜನಕ ಸಂಗತಿ.

"ಸಾಲದಲ್ಲಿ ಇದ್ದೇವೆ" ಎಂಬುದು ಇನ್ನೊಂದು ಗಂಭೀರ ಅಂಶ. ಇಂದಿನ ಯುವಕರು ವಿದ್ಯಾಭ್ಯಾಸ, ಉದ್ಯೋಗ ಮತ್ತು ಜೀವನಶೈಲಿಯ ಅಗತ್ಯತೆಗಳ ನಡುವೆ ಸಿಲುಕಿಕೊಂಡು ಸಾಲದ ಭಾರವನ್ನು ಹೊರುತ್ತಿದ್ದಾರೆ. ಈ ಆರ್ಥಿಕ ಒತ್ತಡವು ಮದುವೆಯ ನಿರ್ಧಾರವನ್ನು ಇನ್ನಷ್ಟು ಸಂಕೀರ್ಣಗೊಳಿಸುತ್ತದೆ. ಆರ್ಥಿಕ ಸ್ಥಿರತೆ ಇಲ್ಲದೆ ಸಂಸಾರ ಆರಂಭಿಸುವುದು ಬಹಳ ಮಂದಿಗೆ ಭಯಕಾರಕವಾಗಿ ಕಾಣುತ್ತದೆ.

"ಕೆಲಸ ಇಲ್ಲ" ಎಂಬ ಅಂಶವು ಸಮಸ್ಯೆಯ ಕೇಂದ್ರಬಿಂದು ಎಂದು ಹೇಳಬಹುದು. ಉದ್ಯೋಗದ ಕೊರತೆ ಯುವಕರ ಭವಿಷ್ಯವನ್ನು ಅಸ್ಥಿರಗೊಳಿಸುತ್ತಿದ್ದು, ಅವರ ಆತ್ಮವಿಶ್ವಾಸವನ್ನೇ ಕುಗ್ಗಿಸುತ್ತಿದೆ. ನಿರುದ್ಯೋಗವು ಕೇವಲ ಆದಾಯದ ಸಮಸ್ಯೆಯಲ್ಲ; ಅದು ಜೀವನದ ದಿಕ್ಕನ್ನೇ ಮಸುಕಾಗಿಸುವ ಅಂಶವಾಗಿದೆ.

ಇದೇ ಸಂದರ್ಭದಲ್ಲಿ "ಮದುವೆಯಾದರೆ ಸಂಸಾರದ ಜವಾಬ್ದಾರಿಗಳನ್ನು ನಿಭಾಯಿಸಲು ಸಾಧ್ಯವೇ?" ಎಂಬ ಪ್ರಶ್ನೆ ಯುವಕರ ಮನಸ್ಸಿನ ಆಳದಲ್ಲಿರುವ ಆತಂಕವನ್ನು ಬಹಿರಂಗಪಡಿಸುತ್ತದೆ. ಮದುವೆ ಒಂದು ಸಾಮಾಜಿಕ ಆಚರಣೆ ಮಾತ್ರವಲ್ಲ; ಅದು ಆರ್ಥಿಕ, ಮಾನಸಿಕ ಮತ್ತು ಭಾವನಾತ್ಮಕ ಜವಾಬ್ದಾರಿಗಳ ಸಮೂಹ. ಇವುಗಳನ್ನು ನಿಭಾಯಿಸಲು ಸಿದ್ಧತೆ ಇಲ್ಲದಿದ್ದಾಗ, ಮದುವೆ ಒಂದು ಸಂತೋಷದ ಹಂತವಾಗುವುದಕ್ಕಿಂತ ಭಾರವಾಗಿ ಪರಿಣಮಿಸಬಹುದು ಎಂಬ ಭಯವು ಯುವಕರಲ್ಲಿ ಹೆಚ್ಚುತ್ತಿದೆ.

ಈ ಎಲ್ಲ ಅಂಶಗಳನ್ನು ಒಟ್ಟಾಗಿ ನೋಡಿದಾಗ "ಮದುವೆಯಾಗದ ಯುವಕರ ಸಂಘ"ದ ಸ್ಥಾಪನೆ ಒಂದು ಎಚ್ಚರಿಕೆಯ ಗಂಟೆಯಂತೆ ಕೇಳಿಸುತ್ತದೆ. ಇದು ಕೇವಲ ಕೆಲವರ ಸಮಸ್ಯೆಯಲ್ಲ; ಇದು ಸಮಗ್ರ ಸಮಾಜ ಮತ್ತು ಆಡಳಿತದ ಗಮನಕ್ಕೆ ತರಬೇಕಾದ ಒಂದು ಮಹತ್ವದ ವಿಚಾರ. ಯುವಕರ ಸಮಸ್ಯೆಗಳನ್ನು ಲಘುವಾಗಿ ತೆಗೆದುಕೊಳ್ಳುವುದರಿಂದ ಮುಂದಿನ ಪೀಳಿಗೆಯ ಭವಿಷ್ಯವೇ ಅಸ್ಪಷ್ಟವಾಗುವ ಅಪಾಯವಿದೆ. ಆದ್ದರಿಂದ, ಸರ್ಕಾರವು ಉದ್ಯೋಗ ಸೃಷ್ಟಿ, ಯುವಕರಿಗೆ ಆರ್ಥಿಕ ನೆರವು, ಸಾಲ ನಿಯಂತ್ರಣ ಮತ್ತು ಸಾಮಾಜಿಕ ಸಮತೋಲನವನ್ನು ಸಾಧಿಸುವ ದಿಕ್ಕಿನಲ್ಲಿ ಗಂಭೀರ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಜೊತೆಗೆ, ಸಮಾಜವೂ ತನ್ನ ಮನೋಭಾವದಲ್ಲಿ ಬದಲಾವಣೆ ತರಬೇಕಿದೆ. ಮದುವೆ ಕುರಿತ ನಿರೀಕ್ಷೆಗಳು, ಆರ್ಥಿಕ ಅಂಶಗಳು ಮತ್ತು ಸಾಮಾಜಿಕ ಒತ್ತಡಗಳು ಯುವಕರ ಜೀವನವನ್ನು ಕಷ್ಟಕರವಾಗಿಸದಂತೆ ನೋಡಿಕೊಳ್ಳುವುದು ಅವಶ್ಯಕ. "ಮದುವೆಯಾಗದ ಯುವಕರ ಸಂಘ"ವು ಕೇವಲ ಒಂದು ಸಂಘಟನೆಯಲ್ಲ; ಇದು ಒಂದು ಚಳವಳಿಯ ಆರಂಭವಾಗಬಹುದು. ಇದು ಯುವಕರ ಆತ್ಮಗೌರವ, ಅವರ ಹಕ್ಕುಗಳು.

**ಸಂಪಾದಕ**

# ತೊಕ್ಕೊಟ್ಟು ವ್ಯಾಯಾಮ ಶಾಲೆಯ 75ನೇ ಸಂವತ್ಸರ ಹನುಮಾಮೃತ ಕಾರ್ಯಕ್ರಮ ಸಂಪನ್ನ



**ಉಳ್ಳಾಲ:** ಶಾಲೆ ಎಂದರೆ ರಾಜಕೀಯ ಜಾಗೃತಿ, ಶೈಕ್ಷಣಿಕ ಮೇಲುಗೈ, ಕ್ರೀಡಾ ಚಟುವಟಿಕೆಗಳು ಎಲ್ಲವೂ ಸಮಾನವಾಗಿ ಬೆಳೆಸುವ ಕೇಂದ್ರವಾಗಿರಬೇಕು. ಅಂತಹ ಸಮಗ್ರ ಅಭಿವೃದ್ಧಿಗೆ ವೇದಿಕೆಯಾದ ತೊ–ಕ್ಕೊಟ್ಟು ವ್ಯಾಯಾಮ ಶಾಲೆಯ 75ನೇ ಸಂವತ್ಸರದ ಸಂಭ್ರಮಾಚರಣೆ ನಿಜಕ್ಕೂ ಅದ್ಭುತವಾಗಿ ನೆರವೇರಿದೆ ಎಂದು ಉಳ್ಳಾಲ ಉಳಿಯದ ಶ್ರೀ ಉಳ್ಳಾಲ್ತಿ ಧರ್ಮರಸರ ಕ್ಷೇತ್ರದ ಧರ್ಮದರ್ಶಿಗಳಾದ ದೇವು ಮೂಲ್ಯಣ್ಣ ಅಭಿಪ್ರಾಯಪಟ್ಟರು.

ತೊಕ್ಕೊಟ್ಟು ಭಟ್ನಗರದ ಶ್ರೀ ಜೈ ವೀರ ಮಾರುತಿ ವ್ಯಾಯಾಮ ಶಾಲೆ ಇದರ ಅಮೃತ ಮಹೋತ್ಸವದ ಪ್ರಯುಕ್ತ ಜರಗಿದ ಹನುಮಾಮೃತ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಚಾಲನೆ ನೀಡಿ, ನೂತನ ಗರಡಿ ಮನೆಯ ಉದ್ಘಾಟನೆ, ಹನುಮಾಮೃತ ಸ್ಮರಣ ಸಂಚಿಕೆ ಬಿಡುಗಡೆ, ಸ್ಥಳೀಯ ಸಂಘ ಸಂಸ್ಥೆಗಳಿಗೆ ಗೌರವಾರ್ಪಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಆಂಜನೇಯ ಸ್ವಾಮಿಗೆ ಪ್ರೀತಿಯ ದಿನವಾದ ಗುರುವಾರ ನಡೆದ ಈ ಕಾರ್ಯಕ್ರಮವು ಭಕ್ತಿಭಾವ ಮತ್ತು ಸಂಭ್ರಮವನ್ನು ಮತ್ತಷ್ಟು ಹೆಚ್ಚಿಸಿದೆ. ತೊಕ್ಕೊಟ್ಟು ವ್ಯಾಯಾಮ ಶಾಲೆ ಎಂದರೆ ಎಲ್ಲರಿಗೂ ಪರಿಚಿತವಾದ, ವಿಶ್ವಾಸಾರ್ಹ ಸಂಸ್ಥೆ. ಪ್ರತಿಯೊಂದು ಕ್ಷೇತ್ರದಲ್ಲಿಯೂ ಪ್ರತಿಭೆಗಳ ಹೊಳೆ ಇಲ್ಲಿಂದಲೇ ಹರಿದುಬರುತ್ತಿದೆ ಎಂಬುದು ಇದರ ವೈಶಿಷ್ಟ್ಯ.ಶಾಲೆಯ ಅಚ್ಚುಕಟ್ಟಾದ ವ್ಯವಸ್ಥೆ, ಶಿಸ್ತು ಮತ್ತು ಶ್ರದ್ಧೆ ಇದರ ಖ್ಯಾತಿಯನ್ನು ಇನ್ನಷ್ಟು ಎತ್ತಿಹಿಡಿದಿವೆ. ರಾಷ್ಟ್ರೀಯ ಮಟ್ಟದಲ್ಲಿಯೂ ಹೆಸರು ಮಾಡಿರುವ ಅನೇಕ ವಿದ್ಯಾರ್ಥಿಗಳು ಈ ಸಂಸ್ಥೆಯ ಹೆಮ್ಮೆಯ ಗುರುತುಗಳಾಗಿದ್ದಾರೆ. ಈ ಶಾಲೆ ಇಂದಿನ ಮಟ್ಟಕ್ಕೆ ಬೆಳೆಯಲು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲರನ್ನೂ ಸ್ಮರಿಸುವುದು ನಮ್ಮ ಕರ್ತವ್ಯ. ಅವರ ಸೇವೆ ಮತ್ತು ತ್ಯಾಗವೇ ಈ ಸಂಸ್ಥೆಯ ಬಲವಾದ ಅಡಿಗಲ್ಲುಗಳಾಗಿವೆ ಎಂದರು.

ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘಗಳ ಅಧ್ಯಕ್ಷ ಸಹಕಾರಿ ರತ್ನ ಪುರಸ್ಕೃತ ಚಿತ್ತರಂಜನ್ ಬೋಳಾರ್, ಉಳ್ಳಾಲ ಶ್ರೀ ಭಗವತಿ ಕ್ಷೇತ್ರದ ಅರ್ಚಕ ಮಂಜಪ್ಪ ಕಾರ್ನವರ್, ಉಳ್ಳಾಲ ವಲಯ ಬಂಟರ ಸಂಘದ ಅಧ್ಯಕ್ಷ, ನಿವೃತ್ತ ಮುಖ್ಯಶಿಕ್ಷಕ ರವೀಂದ್ರ ರೈ ಕಲ್ಲಿಮಾರು, ಬಿಜೆಪಿ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ, ದ.ಕ ಜಿಲ್ಲಾ ಅಮೆಚೂರ್ ಕುಸ್ತಿ ಫೆಡರೇಶನ್ ಅಧ್ಯಕ್ಷ ದಿಲ್ ರಾಜ್ ಆಳ್ವ, ಶ್ರೀ ಚೀರುಂಭ ಭಗವತಿ ಕ್ಷೇತ್ರದ ನಿಕಟಪೂರ್ವ ಅಧ್ಯಕ್ಷ ಚಂದ್ರಹಾಸ್ ಉಳ್ಳಾಲ್, ಬಿಜೆಪಿ ಮುಖಂಡ ಚಂದ್ರಶೇಖರ್ ಉಚ್ಚಿಲ್, ಬಂಡಿಕೊಟ್ಯ ಪುನ್ಕೆದಡಿ ಶ್ರೀ ಕೋರ್ದಬ್ಬು ದೈವಸ್ಥಾನದ ಆಡಳಿತ ಮೊಕ್ತೇಸರ ಸಂತೋಷ್ ಉಳ್ಳಾಲ್, ಕೊಲ್ಯ ಮಠ, ಶ್ರೀ ಮೂಕಾಂಬಿಕಾ ದೇವಸ್ಥಾನದ ಅಧ್ಯಕ್ಷ ಚಂದ್ರಹಾಸ್ ಪಂಡಿತ್ ಹೌಸ್, ಅಸ್ತ್ರ ಗ್ರೂಪ್ ನ ಲಾಂಚುಲಾಲ್ ಕೆ.ಎಸ್, ವಕೀಲ ರಾಮಚಂದ್ರ ಬಿ. ತೊಕ್ಕೊಟ್ಟು, ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಅನಿಲ್ ದಾಸ್, ಉದ್ಯಮಿ ಜಯಂತ್ ಕೊಂಡಾಣ, ಜಿಲ್ಲಾ ಬಿಜೆಪಿ ಕಾರ್ಯದರ್ಶಿ ಸುಜಿತ್ ಪ್ರತಾಪ್ ಉಪಸ್ಥಿತರಿದ್ದರು. ವ್ಯಾಯಾಮ ಶಾಲಾ ಶಿಕ್ಷಕ ಜಯಾನಂದ ಅಂಚನ್ ಉಪಸ್ಥಿತರಿದ್ದರು.

ಶಾಲೆಯ ಸ್ಥಾಪಕ ಸದಸ್ಯರುಗಳಾದ ಸುಂದರ್ ಅಮೀನ್ ಮತ್ತು ಭಾಸ್ಕರ್ ಶೆಟ್ಟಿ ಇವರಿಗೆ ಗೌರವಾರ್ಪಣೆ ಸಲ್ಲಿಸಲಾಯಿತು.

ರೋಹಿತ್ ಉಳ್ಳಾಲ್ ನಿರೂಪಿಸಿ ಸ್ವಾಗತಿಸಿದರು. ಶ್ರೀ ಜೈ ವೀರ ಮಾರುತಿ ವ್ಯಾಯಾಮ ಶಾಲಾ ಟ್ರಸ್ಟ್ ಅಧ್ಯಕ್ಷ ಪುರುಷೋತ್ತಮ್ ಗಟ್ಟಿ ವಂದಿಸಿದರು.

# ಉಳ್ಳಾಲದಲ್ಲಿ 25ನೇ ಹನುಮ ಜಯಂತಿ ಪೂಜೆ: ವಿವಿಧ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಆಚರಣೆ



**ಉಳ್ಳಾಲ:** ಮೊಗವೀರಪಟ್ಟದ ಚೆನ್ನಮರಕಾಲ ರಸ್ತೆಯ ಶ್ರೀ ವೀರಮಾರುತಿ ದೇವಾಲಯ ಮತ್ತು ವ್ಯಾಯಾಮ ಶಾಲೆ (ರಿ.) ವತಿಯಿಂದ 25ನೇ ಹನುಮ ಜಯಂತಿ ಪೂಜೆಯನ್ನು ವೈಭವದಿಂದ ಆಚರಿಸಲಾಯಿತು.

ತಂತ್ರಿವರ್ಯರಾದ ಶ್ರೀಕಾಂತ್ ಭಟ್ ಅವರ ನೇತೃತ್ವದಲ್ಲಿ ಪೂಜೆ ಕಾರ್ಯಕ್ರಮಗಳು ನೆರವೇರಿದವು. ಬೆಳಿಗ್ಗೆ 7:00 ಗಂಟೆಗೆ ಗಣಹೋಮ ಮಹಾಪೂಜೆ ನಡೆಯಿತು. ಸಂಜೆ ದೀಪ ಪ್ರಜ್ವಲನೆಯನ್ನು ಶ್ರೀಮತಿ ವಿಜೇತ ಕಿರಣ್ ಸಾಲ್ಯಾನ್ ದಂಪತಿ , ಕೃತಿನ್ ಕೆ. ಸಾಲ್ಯಾನ್, ಕ್ರಿಯಾನ್ ಕೆ. ಸಾಲ್ಯಾನ್ ಹಾಗೂ ಶ್ರೀ ಮತ್ತು ಶ್ರೀಮತಿ ರಶ್ಮಿಕ ಕೌಶಿಕ್ ಶಿವನಗರ, ಪಾಂಡೇಶ್ವರ ದಂಪತಿ ನೆರವೇರಿಸಿದರು.

ಸಂಜೆ 4:30 ರಿಂದ 8:00ರವರೆಗೆ ಶ್ರೀ ವಿರೋಭ ಭಜನಾ ಮಂದಿರ ಮತ್ತು ಶ್ರೀ ರಾಮ ಭಜನಾ ಮಂದಿರ ಮೊಗವೀರಪಟ್ಟ, ಉಳ್ಳಾಲ ವತಿಯಿಂದ ಭಜನಾ ಸಂಕೀರ್ತನೆ ನಡೆಯಿತು. ನಂತರ ಪ್ರಸಾದ ವಿತರಣೆ ಹಾಗೂ ಅನ್ನಸಂತರ್ಪಣೆ ನಡೆಯಿತು.

ಇದೇ ಸಂದರ್ಭ ಸಾಂಸ್ಕೃತಿಕ ಕಾರ್ಯಕ್ರಮವಾಗಿ ನಮ್ಮ ಕಲಾವಿದೆರ್ ಬೆದ್ರ ಇವರಿಂದ ವೈರಲ್ ವೈಶಾಲಿ ಎಂಬ ತುಳು ಹಾಸ್ಯಮಯ ನಾಟಕ ಪ್ರದರ್ಶನಗೊಂಡಿತು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಗೌರವಾಧ್ಯಕ್ಷರಾದ ಕಿಶೋರ್ ಕಾಂಚನ್, ಅಧ್ಯಕ್ಷರಾದ ಯಶವಂತ್ ಪಿ. ಅಮೀನ್, ಗುರಿಕಾರರಾದ ಸುರೇಂದ್ರ ಪುತ್ರನ್, ಸಂಚಾಲಕ ಸುದರ್ಶನ್ ಪುತ್ರನ್ ಉಪಾಧ್ಯಕ್ಷ ಜಯಚಂದ್ರ ಅಮೀನ್, ಕೋಶಾಧಿಕಾರಿ ನಾರಾಯಣ ಸಾಲ್ಯಾನ್ ಹಾಗೂ ಪ್ರಧಾನ ಕಾರ್ಯದರ್ಶಿ ತಿಲಕ್ ಎಸ್. ಬಂಗೇರ , ಜೊತೆ ಕಾರ್ಯದರ್ಶಿಯಾಗಿ ಜೀವನ್ ಬಂಗೇರ ಹಾಗೂ ಪ್ರಧಾನ ಅರ್ಚಕರಾಗಿ ದೀಪಕ್ ಅಮೀನ್ ಉಪಸ್ಥಿತರಿದ್ದರು.

### ಎಸ್‌ಸಿಡಿಸಿಸಿ ಬ್ಯಾಂಕ್‌ನಿಂದ ದಾಖಲೆಯ ಸಾಧನೆ

# ರೂ.20,226 ಕೋ. ವ್ಯವಹಾರ



**ಮಂಗಳೂರು:** ಸಹಕಾರಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ 112 ವರ್ಷಗಳ ಸಮೃದ್ಧ ಪರಂಪರೆಯನ್ನು ಹೊಂದಿರುವ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ 2025–26ನೇ ಸಾಲಿನಲ್ಲಿ ದಾಖಲೆಯ ಸಾಧನೆ ಮಾಡಿದೆ ಎಂದು ಅಧ್ಯಕ್ಷ ಡಾ. ಎಂ.ಎನ್. ರಾಜೇಂದ್ರ ಕುಮಾರ್ ತಿಳಿಸಿದ್ದಾರೆ. ನಗರದಲ್ಲಿ ಆಯೋಜಿಸಿದ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು ಆಧುನಿಕ ಬ್ಯಾಂಕಿಂಗ್ ವ್ಯವಸ್ಥೆಗಳನ್ನು ಅಳವಡಿಸಿಕೊಂಡು ದೇಶಕ್ಕೆ ಮಾದರಿಯಾಗಿರುವ ಈ ಬ್ಯಾಂಕ್, ರೂ. 20,226.19 ಕೋಟಿ ಒಟ್ಟು ವ್ಯವಹಾರ ದಾಖಲಿಸಿ ಹೊಸ ಇತಿಹಾಸ ನಿರ್ಮಿಸಿದೆ. ಕಳೆದ ಸಾಲಿನ ರೂ.17,366.68 ಕೋಟಿ ವ್ಯವಹಾರಕ್ಕೆ ಹೋಲಿಸಿದರೆ ಈ ಬಾರಿ ಶೇ.16.47ರಷ್ಟು ಏರಿಕೆ ಕಂಡು ರಾಜ್ಯದಲ್ಲೇ ಮುಂಚೂಣಿಯಲ್ಲಿದೆ. ಮುಂದಿನ 2026–27ನೇ ಸಾಲಿಗೆ ರೂ.22,500 ಕೋಟಿ ವ್ಯವಹಾರದ ಗುರಿಯನ್ನು ಬ್ಯಾಂಕ್ ಹೊಂದಿದೆ. ಬ್ಯಾಂಕ್ 2025–26ನೇ ಆರ್ಥಿಕ ವರ್ಷದಲ್ಲಿ ರೂ. 131.14 ಕೋಟಿ ಲಾಭ ಗಳಿಸಿದ್ದು, ಇದು ಕಳೆದ ವರ್ಷದ ರೂ.110.41 ಕೋಟಿಗೆ ಹೋಲಿಸಿದರೆ ಶೇ.18.78ರಷ್ಟು ಹೆಚ್ಚಾಗಿದೆ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ಗಳಲ್ಲಿ ಇದು ಸಾರ್ವಕಾಲಿಕ ದಾಖಲೆ ಲಾಭವಾಗಿದೆ. ಅನುತ್ಪಾದಕ ಆಸ್ತಿ ಪ್ರಮಾಣವು ಶೇ.2.42ರಿಂದ ಶೇ.2.21ಕ್ಕೆ ಇಳಿಕೆಯಾಗಿರುವುದು ಬ್ಯಾಂಕಿನ ಆರ್ಥಿಕ ಶಕ್ತಿಯನ್ನು ಸೂಚಿಸುತ್ತದೆ. ಬ್ಯಾಂಕ್ 2025–26ನೇ ಆರ್ಥಿಕ ವರ್ಷದಲ್ಲಿ ರೂ. 131.14 ಕೋಟಿ ಲಾಭ ಗಳಿಸಿದ್ದು, ಇದು ಕಳೆದ ವರ್ಷದ ರೂ.110.41 ಕೋಟಿಗೆ ಹೋಲಿಸಿದರೆ ಶೇ.18.78 ರಷ್ಟು ಹೆಚ್ಚಾಗಿದೆ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ಗಳಲ್ಲಿ ಇದು ಸಾರ್ವ ಕಾಲಿಕ ದಾಖಲೆ ಲಾಭವಾಗಿದೆ. ಅನುತ್ಪಾದಕ ಆಸ್ತಿ ಪ್ರಮಾಣವು ಶೇ.2.42ರಿಂದ ಶೇ.2.21ಕ್ಕೆ ಇಳಿಕೆಯಾಗಿರುವುದು ಬ್ಯಾಂಕಿನ ಆರ್ಥಿಕ ಶಕ್ತಿಯನ್ನು ಸೂಚಿಸುತ್ತದೆ. ದಾಖಲೆ ಲಾಭ ಬ್ಯಾಂಕ್ 2025–26ನೇ ಆರ್ಥಿಕ ವರ್ಷದಲ್ಲಿ ರೂ. 131.14 ಕೋಟಿ ಲಾಭ ಗಳಿಸಿದ್ದು, ಇದು ಕಳೆದ ವರ್ಷದ ರೂ.110.41 ಕೋಟಿಗೆ ಹೋಲಿಸಿದರೆ ಶೇ.18.78ರಷ್ಟು ಹೆಚ್ಚಾಗಿದೆ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ಗಳಲ್ಲಿ ಇದು ಸಾರ್ವಕಾಲಿಕ ದಾಖಲೆ ಲಾಭವಾಗಿದೆ. ಅನುತ್ಪಾದಕ ಆಸ್ತಿ ಪ್ರಮಾಣವು ಶೇ.2.42ರಿಂದ ಶೇ.2.21ಕ್ಕೆ ಇಳಿಕೆಯಾಗಿರುವುದು ಬ್ಯಾಂಕಿನ ಆರ್ಥಿಕ ಶಕ್ತಿಯನ್ನು ಸೂಚಿಸುತ್ತದೆ. ಠೇವಣಿ ಮತ್ತು ಸಾಲ ವಿತರಣೆ ಬ್ಯಾಂಕ್ ತನ್ನ 113 ಶಾಖೆಗಳ ಮೂಲಕ ರೂ. 9,264.64 ಕೋಟಿ ಠೇವಣಿ ಸಂಗ್ರಹಿಸಿದ್ದು, ಇದು ಕಳೆದ ಸಾಲಿಗಿಂತ ಶೇ.17.53ರಷ್ಟು ಹೆಚ್ಚಾಗಿದೆ. ಕೃಷಿ ಕ್ಷೇತ್ರದಲ್ಲಿ ಸಾಧನೆ ಬ್ಯಾಂಕ್ ನೀಡಿದ ಕೃಷಿ ಸಾಲಗಳಲ್ಲಿ ಶೇಕಡಾ 100 ಮರುಪಾವತಿ ಸಾಧನೆ ಮಾಡಿದ್ದು, ಇದು ಸತತ 31 ವರ್ಷಗಳ ದಾಖಲೆ ಆಗಿದೆ. 1,44,701 ರುಪೇ ಕಿಸಾನ್ ಕಾರ್ಡ್‌ಗಳನ್ನು ನೀಡಲಾಗಿದೆ.

# ಅನುದಾನಿತ ಶಾಲೆಗಳಲ್ಲೂ ಆಂಗ್ಲ ಮಾಧ್ಯಮ ಸ್ಥಾಪಿಸಲು ಶಿಕ್ಷಕರ ಸಂಘದ ಒತ್ತಾಯ



ಮಂಗಳೂರು: ಅನುದಾನಿತ ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆಗಳಲ್ಲೂ ಆಂಗ್ಲ ಮಾಧ್ಯಮ ಎಲ್ಕೆಜಿ ಯುಕೆಜಿ ಪ್ರಾರಂಭಿಸಲು ಅನುಮತಿಗೆ ಶಿಕ್ಷಕರ ಸಂಘದಿಂದ ಸ್ಪೀಕರ್ ಯು.ಟಿ.ಖಾದರ್ ಅವರಿಗೆ ಮನವಿ ಸಲ್ಲಿಸಲಾಯಿತು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಸಕ್ತ ಸಾಲಿನಲ್ಲಿ ಎಲ್ಲಾ ಸರಕಾರಿ ಪ್ರಾಥಮಿಕ ಶಾಲೆಗಳಲ್ಲಿ ಎಲ್ ಕೆಜಿ ಯುಕೆಜಿ ಪ್ರಾರಂಭವಾಗಿ ಒಂದನೇ ತರಗತಿಯಿಂದಲೇ ಆಂಗ್ಲ ಮಾಧ್ಯಮ ಬೋಧನೆಗೆ ದ್ವಿ ಭಾಷಾ ನೀತಿಯಂತೆ ಶಿಕ್ಷಣ ಇಲಾಖೆಯು ತಯಾರಿ ನಡೆಸುತ್ತಿದೆ. ಸರಕಾರಿಪ್ರಾಥಮಿಕ ಶಾಲೆಯ ಎಲ್ಲಾ ಶಿಕ್ಷಕರಿಗೆ ಈ ನಿಟ್ಟಿನಲ್ಲಿ ತರಬೇತಿ ನಡೆಯುತ್ತಿದೆ. ಇದು ಸಂತೋಷದ ವಿಚಾರ. ಆದರೆ ಅನುದಾನಿತ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಇದರಿಂದಾಗಿ ಮಕ್ಕಳ ಸಂಖ್ಯೆಯು ತೀರಾ ಕಡಿಮೆಯಾಗುವ ಸಂಭವವಿದೆ. ಆದುದರಿಂದ ಅನುದಾನಿತ ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆಗಳಲ್ಲಿಯೂ ಅನುದಾನಿತ ಎಲ್ ಕೆ ಜಿ ಮತ್ತು ಯುಕೆಜಿ ಹಾಗೂ ಒಂದನೇ ತರಗತಿ ಪ್ರಾರಂಭಿಸಲು ಅನುಮತಿ ನೀಡುವಂತೆ ಕರ್ನಾಟಕ ರಾಜ್ಯ ಅನುದಾನಿತ ಶಾಲಾ ಕಾಲೇಜು ಶಿಕ್ಷಕರ ಸಂಘದ ಪರವಾಗಿ ಹಾಗೂ ಕರ್ನಾಟಕ ರಾಜ್ಯ ಶಾಲಾ ಶಿಕ್ಷಣ ಇಲಾಖೆಯ ನೌಕರರ ಸಂಘದ ಪರವಾಗಿ ವಿನಂತಿಸಲಾಯಿತು. ಸಂಘದ ಮನವಿಗೆ ತಕ್ಷಣ ಸ್ಪಂದಿಸಿದ ಸ್ಪೀಕರ್ ರವರು ಶಿಕ್ಷಣ ಇಲಾಖೆಯ ಕಾರ್ಯದರ್ಶಿ ಅವರನ್ನು ದೂರವಾಣಿ ಮೂಲಕ ಸಂಪರ್ಕಿಸಿ ಪ್ರಸ್ತುತ ಸಮಸ್ಯೆಯನ್ನು ಮನವರಿಕೆ ಮಾಡಿ ಕೊಟ್ಟರು. ಅದಕ್ಕೆ ಇರುವ ಕಾನೂನು ತೊಡಕುಗಳನ್ನು ಮುಂದಿನ ದಿವಸಗಳಲ್ಲಿ ಪರಿಹರಿಸಿ ಸೂಕ್ತ ಪರಿಹಾರವನ್ನು ಒದಗಿಸುವುದಾಗಿಯೂ ಅವರು ತಿಳಿಸಿದರು. ಅಲ್ಲದೆ ಅನುದಾನಿತ ಶಾಲೆಗಳು ಎದುರಿಸುತ್ತಿರುವ ಹಲವು ಸಮಸ್ಯೆಗಳನ್ನು ಸ್ಪೀಕರ್ ರವರೊಂದಿಗೆ ಚರ್ಚಿಸಲಾಯಿತು. ಪ್ರಮುಖವಾಗಿ ಮಾನ್ಯತೆ ನವೀಕರಣ ದ ಬಗ್ಗೆ ಗಮನ ಸೆಳೆದಾಗ ಶಿಕ್ಷಣ ಇಲಾಖೆಯನ್ನು ಸಂಪರ್ಕಿಸಿದ ಸ್ಪೀಕರ್ ರವರು ಮಾನ್ಯತೆ ನವೀಕರಣದ ಬಗ್ಗೆ ಇರುವ ಎಲ್ಲಾ ಕ್ಲಿಷ್ಟಕರವಾದ ಅಂಶಗಳನ್ನು ಹೋಗಲಾಡಿಸಿ ಶೀಘ್ರದಲ್ಲಿಯೇ ಅನುದಾನಿತ ಶಾಲೆಗಳಿಗೆ ಪೂರಕವಾದ ಆದೇಶ ಹೊರಬರಲಿದೆ ಎಂದು ತಿಳಿಸಿದರು. ಅನುದಾನಿತ ಶಾಲೆಗಳ ಮಾನ್ಯತೆ ನವೀಕರಣಕ್ಕೆ ಎಲ್ಲಾ ಅಂಶಗಳನ್ನು ಸಡಿಲಗೊಳಿಸಲಾಗುವುದು ಮತ್ತು ನವೀಕರಣದ ಅವಧಿಯನ್ನು ಹೆಚ್ಚಿಸಲಾಗುವುದು ಎಂದು ತಿಳಿಸಿದರು. ನಿಯೋಗದಲ್ಲಿ ಕರ್ನಾಟಕ ರಾಜ್ಯ ಶಾಲಾ ಶಿಕ್ಷಣ ಇಲಾಖೆ ನೌಕರರ ಸಂಘದ ರಾಜ್ಯ ಕಾರ್ಯದರ್ಶಿ ಹಾಗೂ ಕರ್ನಾಟಕ ರಾಜ್ಯ ಅನುದಾನಿತ ಶಾಲಾ ಕಾಲೇಜು ನೌಕರರ ಸಂಘದ ಜಿಲ್ಲಾ ಕಾರ್ಯದರ್ಶಿ , ತ್ಯಾಗಂ ಹರೇಕಳ, ಕರ್ನಾಟಕ ರಾಜ್ಯ ಅನುದಾನಿತ ಶಾಲಾ ಕಾಲೇಜು ನೌಕರರ ಸಂಘದ ಜಿಲ್ಲಾಧ್ಯಕ್ಷ ಕೆಎಂ ಕೆ ಮಂಜನಾಡಿ, ಕರ್ನಾಟಕ ರಾಜ್ಯ ಶಾಲಾ ಶಿಕ್ಷಣ ಇಲಾಖೆ ನೌಕರರ ಸಂಘದ ಜಿಲ್ಲಾ ಪದಾಧಿಕಾರಿಗಳಾದ ಡಾಕ್ಟರ್ ಮಂಜುಳಾ ಶೆಟ್ಟಿ, ಶಿವಕುಮಾರ್, ರವಿಶಂಕರ್ ಉಪಸ್ಥಿತರಿದ್ದರು

### ತೊಕ್ಕೊಟ್ಟುವಿನಲ್ಲಿ ಉಚಿತ ಕೈತೋಟ–ತಾರಸಿ ತೋಟ ತರಬೇತಿ ಕಾರ್ಯಕ್ರಮ

# ಕೀಟನಾಶಕ ಬಳಕೆ ಬಗ್ಗೆ ಎಚ್ಚರಿಕೆ: ಪುಷ್ಪರಾಜ್ ಬಿ.ಎನ್



**ತೊಕ್ಕೊಟ್ಟು;** ಪರಿಸರ ಸಮಗ್ರ ಕಸವಿಲೇವಾರಿಗೆ ಸಂಘಟಿತ ಪ್ರಯತ್ನ ಸಾಮೂಹಿಕ ಜಾಗೃತಿ ಅಗತ್ಯ ಎಂದು ಸ್ವಚ್ಛತಾ ರಾಯಭಾರಿ ಶೀನ ಶೆಟ್ಟಿ ಹೇಳಿದ್ದಾರೆ. ಇವರು ಸಿರಿ ತೋಟಗಾರಿಕಾ ಸಂಘ ಇದರ ಆಶ್ರಯದಲ್ಲಿ ತೋಟಗಾರಿ–ಕೆ ಇಲಾಖೆ ಮಂಗಳೂರು ಇದರ ಸಹಯೋಗದೊಂದಿಗೆ ಕಾರ್ಯನಿರತ ಪತ್ರಕರ್ತರ ಸಂಘ ಉಳ್ಳಾಲ, ಫುಡ್ ಚೈನ್ ಕ್ಯಾಂಪೇನ್, ಶಿವಾಜಿ ಫ್ರೆಂಡ್ಸ್ ಸರ್ಕಲ್, ಸ್ವಾಮಿ ಕೊರಗಜ್ಜ ಸೇವಾ ಸಮಿತಿ ತೊಕ್ಕೊಟ್ಟು, ರಿಚಲ್ ಸರ್ವಿಸಸ್ , ಮಂಗಳೂರು ಆಟೋ ರಿಕ್ಷಾ ಮತ್ತು ಕಾರು ಚಾಲಕರ ಸಹಕಾರಿ ಸಂಘ ತೊಕ್ಕೊಟ್ಟು ಇವುಗಳ ಸಂಯುಕ್ತ ಸಹಭಾಗಿತ್ವದಲ್ಲಿ ಕೈತೋಟ, ತಾರಸಿತೋಟ ನಿರ್ಮಾಣದ ಬಗ್ಗೆ ಉಚಿತ ತರಬೇತಿ ಹಾಗೂ ತರಕಾರಿ ಬೀಜ ಮತ್ತು ಸಸಿ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಬಿತ್ತಿದಂತೆ ಬೆಳೆ ಎಂಬಂತೆ ಉತ್ತಮ ಬೀಜ ಬಿತ್ತಿದರೆ ಕೃಷಿ ಅಭಿವೃದ್ಧಿಪಡಿಸಲು ಸಾಧ್ಯ. ನಾವು ಉತ್ತಮ ಚಿಂತನೆ ಅಳವಡಿಸಿಕೊಂಡರೆ ಮನಸು ಸ್ವಚ್ಛಗೊಳಿಸಲು ಸಾಧ್ಯ. ನಮಗಿರುವ ಎಲ್ಲಾ ಸೌಲಭ್ಯಗಳನ್ನು ಅನುಭವಿಸಲು ನಮಗೆ ಸಾಧ್ಯವಾಗುತ್ತಿಲ್ಲ. ನಾವು ಮೌನದಿಂದ ಇರುವ ಕಾರಣ ದೇಶದಲ್ಲಿ ಮಹಾ ಮಾಲಿನ್ಯ ಸೃಷ್ಟಿ ಆಗುತ್ತಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಪೆರ್ಮನ್ನೂರು ಚರ್ಚ್ ಫಾದರ್ ಸಪ್ರಿಯನ್ ಡಿಸೋಜ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ, ಪರಿಸರ ಸಂರಕ್ಷಣೆಯ ಮಹತ್ವದ ಬಗ್ಗೆ ಮಾಹಿತಿ ನೀಡಿದರು.

ದ.ಕ.ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾದ ಪುಷ್ಪರಾಜ್ ಬಿ ಎನ್ ಅವರು ಮಾತನಾಡಿ, ಪರಿಸರ ಸಂರಕ್ಷಣೆಯ ಬಗ್ಗೆ ನುಡಿದಂತೆ ನಡೆದು ತೋರಿಸುವ ಮನೋಭಾವದ ಅಗತ್ಯವಿದೆ. ಕೀಟನಾಶಕದ ಬಳಕೆಯಿಂದ ಅನ್ನದ ಬಟ್ಟಲಲ್ಲಿ ನಾವೇ ಸುರಿಯುತ್ತಿದ್ದೇವೆ ಈ ಬಗ್ಗೆ ಜಾಗೃತಿ ಬಹುಮುಖ್ಯ ಎಂದರು.

ಸಿರಿ ತೋಟಗಾರಿಕಾ ಸಂಘ ಉಪಾಧ್ಯಕ್ಷರಾದ ಡಾ.ಭಾರತಿ ನಿರ್ಮಲ್, ಫುಡ್ ಚೈನ್ ಕ್ಯಾಂಪೇನ್ ಸ್ಥಾಪಕ ಯತೀಶ್ ತುಕರಾಮ್ ಮಾತನಾಡಿದರು. ಶಿವಾಜಿ ಫ್ರೆಂಡ್ಸ್ ಸರ್ಕಲ್ ಅಧ್ಯಕ್ಷರಾದ ಯು.ಎಚ್. ಅಲ್ತಾಫ್ ಅಧ್ಯಕ್ಷತೆ ವಹಿಸಿದ್ದರು.

ಸಮಾರಂಭದಲ್ಲಿ ಜಿಲ್ಲಾ ಯುವಜನ ಸಬಲೀಕರಣ ಇಲಾಖೆಯ ಉಪ ನಿರ್ದೇಸಕರಾದ ಪ್ರದೀಪ್ ಡಿ'ಸೋಜ ಗಿಡ ಹಾಗೂ ತರಕಾರಿ ಬೀಜ ವಿತರಿಸಿದ್ರು. ಹಿರಿಯ ಸಹಾಯಕ ತೆ–ೂಟಗಾರಿಕಾ ನಿರ್ದೇಶಕರಾದ ಪ್ರದೀಪ್ ಡಿ'ಸೋಜ ತಾರಸಿ ತೋಟ ನಿರ್ಮಾಣದ ಬಗ್ಗೆ ತಾಂತ್ರಿಕ ಮಾಹಿತಿ ನೀಡಿದರು. ಪ್ರವೀಣ್ ಕೆಯವರು ತಾರಸಿ ತೋಟದ ಉಪಯೋಗದ ಬಗ್ಗೆ ತಿಳಿಸಿದರು.

ಕಾರ್ಯಕ್ರಮದಲ್ಲಿ ಉಳ್ಳಾಲ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಗದ ಅಧ್ಯಕ್ಷರಾದ ಶಶಿಧರ ಪೊಯ್ಯತ್ತಬೈಲ್, ಶಿವಾಜಿ ಫ್ರೆಂಡ್ಸ್ ಸರ್ಕಲ್ ಅದ–್ಯಕ್ಷರಾದ ಯು.ಎಚ್. ಅಲ್ತಾಫ್, ಸ್ವಚ್ಛತಾ ಅಭಿಯಾನದ ರಾಯಭಾರಿ ಕೃಷ್ಣ ಮೂಲ್ಯ ಹಾಗು ಮತ್ತಿತರರು ಉಪಸ್ಥಿತರಿದ್ದರು

ಈ ಸಂದರ್ಭದಲ್ಲಿ ಬೀಜ ಹಾಗೂ ಸಸಿ ವಿತರಣೆ ಕಾರ್ಯಕ್ರಮ ನಡೆಯಿತು. ಸಿರಿಲ್ ರಾಬರ್ಟ್ ಡಿ'ಸೋಜ ಪ್ರಸ್ತಾವಿಕವಾಗಿ ಮಾತನಾಡಿದರು. ಪ್ರವೀಣ್ ಎಸ್ ಕುಂಪಲ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು.


# ಕೋಟೆಕಾರು ಪಟ್ಟಣ ಪಂಚಾಯತ್

ಅಂಚೆ: ಕೋಟೆಕಾರು–575 022, ಉಳ್ಳಾಲ ತಾಲೂಕು, (ದ.ಕ)
ದೂರವಾಣಿ: 0824-2466693. Email : co.kotekar@gmail.co
ನಂ/ಕೊಪಪಂ/ಸಿಆರ್/ಬಿ2/03/2026–27 ದಿನಾಂಕ:–04/04/2026

**ಸಾರ್ವಜನಿಕ ಪ್ರಕಟಣೆ**

ಕೋಟೆಕಾರು ಪಟ್ಟಣ ಪಂಚಾಯತಿ ವ್ಯಾಪ್ತಿಯ ಆಸ್ತಿ ಮಾಲಿಕರಿಗೆ ಹಾಗೂ ಅನುಭೋಗದಾರರಿಗೆ ಈ ಮೂಲಕ ತಿಳಿಸುವುದೇನೆಂದರೆ ಸರಕಾರದ ಆದೇಶದಂತೆ 2026–27ನೇ ಸಾಲಿನ ಸ್ವಯಂಘೋಷಿತ ಆಸ್ತಿತೆರಿಗೆಯನ್ನು 2026ನೇ ಎಪ್ರಿಲ್ ತಿಂಗಳಲ್ಲಿ ಪಾವತಿ ಮಾಡಿದಲ್ಲಿ ಪ್ರತಿಶತ ಶೇ.5ರಷ್ಟು ರಿಯಾಯಿತಿ ನೀಡಲಾಗುತ್ತಿದೆ. ಆದುದರಿಂದ ಆಸ್ತಿ ಮಾಲಿಕರು ಇದರ ಸದುಪಯೋಗ ಪಡೆದುಕೊಳ್ಳುವಂತೆ ಕೋರಲಾಗಿದೆ.

2026–27ನೇ ಸಾಲಿನ ಆಸ್ತಿ ತೆರಿಗೆ ಪಾವತಿಯಲ್ಲಿ ಶೇ.5ರಷ್ಟು ರಿಯಾಯಿತಿ ಯುಎಪ್ರಿಲ್ 30ರವರೆಗೆ ಇದ್ದು, ಮೇ ಮತ್ತು ಜೂನ್ ತಿಂಗಳಲ್ಲಿ ತೆರಿಗೆ ಪಾವತಿಸಿದಲ್ಲಿ ಯಾವುದೇ ದಂಡವಿರುವುದಿಲ್ಲ. ಜುಲೈ ತಿಂಗಳಿಂದ 2026–27ನೇ ಸಾಲಿನ ಆಸ್ತಿ ತೆರಿಗೆಗೆ ಪ್ರತಿ ತಿಂಗಳಿಗೆ ಶೇ2 ರಷ್ಟು ದಂಡ ವಿದಿಸಲಾಗುವುದು.

ಆಸ್ತಿ ತೆರಿಗೆ ಪಾವತಿಸಲು ಬಾಕಿ ಇದ್ದವರು ಕೂಡಲೇ ಪಾವತಿಸತಕ್ಕದ್ದು ಹಾಗೂ ಉದ್ಯಮ ಪರವಾನಿಗೆಯನ್ನು 2026–27ನೇ ಸಾಲಿಗೆ ನವೀಕರಿಸುವುದು, ಸ್ಟಾಲು ಬಾಡಿಗೆ ಹಾಗೂ ನೀರಿನ ಶುಲ್ಕವನ್ನು ಪಾವತಿಸುವುದು.

ಸಹಿ
**ಅಧ್ಯಕ್ಷರು**
ಕೋಟೆಕಾರು ಪಟ್ಟಣ ಪಂಚಾಯತು

ಸಹಿ
**ಮುಖ್ಯಾಧಿಕಾರಿ**
ಕೋಟೆಕಾರು ಪಟ್ಟಣ ಪಂಚಾಯತು

# ಅವರ ಮೌನ ಖಾಲಿ ಇರಲಿಲ್ಲ... ಅದು ಪ್ರೀತಿ, ಸಹಾನುಭೂತಿಯಿಂದ ತುಂಬಿತ್ತು!!

■ ಅಂಕಿತ ಕಿಶೋರ್,



ಅಸಿಸ್ಟೆಂಟ್ ಪ್ರೊಫೆಸರ್
ಪಿ.ಎ ಇಂಜಿನಿಯರಿಂಗ್
ಕಾಲೇಜು, ನಡುಪದವು



ನಾನು ಮೆಟ್ರೋದಲ್ಲಿ ಒಳಗೆ ಹೋದ ಕ್ಷಣವೇ ಅವರನ್ನು ಗಮನಿಸಿದೆ. ಮೂರು ಜನರ ಕುಟುಂಬ. ಅಪ್ಪ, ಅಮ್ಮ ಮತ್ತು ಮಗ. ಅವರ ನಡುವೆ ಒಂದು ಶಾಂತವಾದ, ಆದರೆ ತುಂಬಾ ಅರ್ಥಪೂರ್ಣವಾದ ಸಂಭಾಷಣೆ ನಡೆಯುತ್ತಿತ್ತು. ಅವರ ಕೈಗಳು ವೇಗವಾಗಿ ಚಲಿಸುತ್ತಿದ್ದವು, ಮುಖದಲ್ಲಿ ಭಾವನೆಗಳು ಹೊಮ್ಮುತ್ತಿದವು, ಕಣ್ಣುಗಳು ಒಂದರ ಮೇಲೆ ಒಂದರಂತೆ ಕೇಂದ್ರೀಕೃತವಾಗಿದ್ದವು. ಅವರು ಶಬ್ದವಿಲ್ಲದ ಭಾಷೆಯಲ್ಲಿ ಮಾತನಾಡುತ್ತಿದ್ದರು. ಆದರೆ ಅದು ಸಂಪೂರ್ಣ ಸಂಭಾಷಣೆಯಾಗಿತ್ತು.

ಒಂದು ಕ್ಷಣ ನನಗೆ ಕುತೂಹಲ ಬಂತು. ಇವರಲ್ಲಿ ಯಾರು ಮಾತನಾಡಲು ಅಥವಾ ಕೇಳಲು ಸಾಧ್ಯವಿಲ್ಲವೇ. ಇದು ತೀರ್ಪಲ್ಲ, ಆದರೆ ನನ್ನ ಅರ್ಥೈಸುವಿಕೆಯ ಮೇಲೆ ಬಂದ ಪ್ರಶ್ನೆ. ಆದರೆ ಆ ಯೋಚನೆ ಬೇಗನೆ ಬದಲಾಗಿದೆ.

ಮಧ್ಯದಲ್ಲಿ ನಾನು ಆ ಅಪ್ಪನ ಧ್ವನಿಯನ್ನು ಕೇಳಿದೆ. ಸಾಮಾನ್ಯವಾಗಿ ಮಾತನಾಡುತ್ತಿದ್ದರು. ಸ್ವಲ್ಪ ಸಮಯದ ನಂತರ ಮಗ ಫೋನ್‌ನಲ್ಲಿ ಮಾತನಾಡುತ್ತಿರುವುದನ್ನು ನೋಡಿದೆ. ಅವನ ಮಾತುಗಳು ಸಹ ಸಹಜವಾಗಿಯೇ ಹರಿಯುತ್ತಿದವು. ನನ್ನ ಊಹೆಗಳು ಸರಿಹೋಗಲಿಲ್ಲ.

ಆದರೂ, ಅವರು ಮತ್ತೆ ತಮ್ಮ ಮಧ್ಯೆ ತಿರುಗಿ ನೋಡಿದಾಗ, ಮತ್ತೆ ಸಂಕೇತ ಭಾಷೆಯಲ್ಲೇ ಮಾತನಾಡಲು ಶುರುಮಾಡಿದರು. ಅದು ಸಹಜವಾಗಿ, ಸುಲಭವಾಗಿ. ಆಗ ನನಗೆ ಒಂದು ವಿಚಾರ ಸ್ಪಷ್ಟವಾಯಿತು. ಇದು ಯಾರು ಮಾತನಾಡಲು ಅಥವಾ ಕೇಳಲು ಸಾಧ್ಯವಿಲ್ಲ ಎಂಬುದರ ಬಗ್ಗೆ ಅಲ್ಲ. ಇದು ಯಾರು ಪರಸ್ಪರ ಅರ್ಥಮಾಡಿಕೊಳ್ಳಲು ಆಯ್ಕೆ ಮಾಡಿಕೊಂಡಿದ್ದಾರೆ ಎಂಬುದರ ಬಗ್ಗೆ.

ಬಹುಶಃ ಅವರಲ್ಲಿ ಯಾರಾದರೂ ಮೌನದ ಲೋಕದಲ್ಲಿ ಬದುಕುತ್ತಿದ್ದಿರಬಹುದು. ಉಳಿದವರು ಆ ಮೌನವನ್ನು ಅವರ ಜೊತೆ ಹಂಚಿಕೊಂಡಿರಬಹುದು. ಅದನ್ನು ಒಂದು ಅಡ್ಡಿಯಾಗಿಯೇ ನೋಡದೆ, ಒಂದು ಬಂಧವಾಗಿಯೇ ಮಾಡಿಕೊಂಡಿರಬಹುದು.

ನಾವು ಕೇಳಬಲ್ಲವರಾದರೂ, ಒಬ್ಬರನ್ನೊಬ್ಬರು ನಿಜವಾಗಿ ಕೇಳುವುದರಲ್ಲಿ ವಿಫಲವಾಗುವ ಈ ಜಗತ್ತಿನಲ್ಲಿ, ಆ ಕುಟುಂಬವು ಶಬ್ದವಿಲ್ಲದೆ ಸಂಭಾಷಣೆಯನ್ನು ನಿರ್ಮಿಸಿತ್ತು. ಅವರ ಮೌನ ಖಾಲಿ ಇರಲಿಲ್ಲ. ಅದು ಪ್ರೀತಿ, ಸಹಾನುಭೂತಿ ಮತ್ತು ಅರ್ಥಪೂರ್ಣತೆಯಿಂದ ತುಂಬಿತ್ತು.

ಮೆಟ್ರೋದಲ್ಲಿನ ಗದ್ದಲದ ಮಧ್ಯೆ, ಅವರ ಮೌನವೇ ಹೆಚ್ಚು ಶಕ್ತಿಯಾಗಿ ಕೇಳಿಸಿತು. ಆ ದಿನ ನನಗೆ ಅರಿವಾಯಿತು. ಕೆಲವು ಅತ್ಯಂತ ಶಕ್ತಿಯುತ ಸಂಭಾಷಣೆಗಳು ನಾವು ಕೇಳಲಾರದವು.

# ಕಣಚೂರು ಸಂಸ್ಥೆಯ ಮೂಲಕ ಅರ್ಹ ವಿದ್ಯಾರ್ಥಿಗಳಿಗೆ ನೂರು ಉಚಿತ ಸೀಟು, 1 ಕೋ.ರೂ. ವಿದ್ಯಾರ್ಥಿ ವೇತನಕ್ಕೆ ಅರ್ಹತಾ ಪರೀಕ್ಷೆ









**ಮಂಗಳೂರು:** ಕಣಚೂರು ಸಂಸ್ಥೆಯ ಮೂಲಕ ಅರ್ಹ ವಿದ್ಯಾರ್ಥಿಗಳಿಗೆ ನೂರು ಉಚಿತ ಸೀಟು ಮತ್ತು 1 ಕೋಟಿ ರುಪಾಯಿ ವಿದ್ಯಾರ್ಥಿ ವೇತನಕ್ಕೆ ಅರ್ಹತಾ ಪರೀಕ್ಷೆ, ಈ ವಾರ್ಷಿಕ ಸಾಲಿನಲ್ಲಿ ಅತ್ಯುತ್ತಮ ಸೌಲಭ್ಯದೊಂದಿಗೆ ಪಿಯುಸಿ ಜೊತೆ ಆರಂಭವಾಗಲಿರುವ ಕಣಚೂರು ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದಲ್ಲಿ 100 ವಿದ್ಯಾರ್ಥಿಗಳಿಗೆ ಉಚಿತ ದಾಖಲಾತಿ ಮತ್ತು ಕಣಚೂರು ಮೆಡಿಕಲ್ ಕಾಲೇಜಿನ ದಶಮಾನೋತ್ಸವ ಕೊಡುಗೆಯಾಗಿ ನೀಡುವ ಒಂದು ಕೋಟಿ ರುಪಾಯಿ ವಿದ್ಯಾರ್ಥಿ ವೇತನಕ್ಕೆ ಅರ್ಹತಾ ಪರೀಕ್ಷೆಯು ನಿನ್ನೆ ಕಣಚೂರು ಹೆಲ್ತ್ ಸಿಟಿ ಕ್ಯಾಂಪಸ್‌ನಲ್ಲಿ ನಡೆಯಿತು.

ಕಣಚೂರು ಸಂಸ್ಥೆಯು ಪಿಯುಸಿ ಇಂಟಿಗ್ರೇಟೆಡ್ NEET, JEE, NDA, CET, CA, ಮಾಡಲು ಬಯಸುವ ಹತ್ತನೇ ತರಗತಿಯ ವಿದ್ಯಾರ್ಥಿಗಳಿಗೆ ಈ ಪರೀಕ್ಷೆಯನ್ನು ನಡೆಸಿತ್ತು. ಭಾರತದ ಖ್ಯಾತ ಸ್ಪರ್ಧಾತ್ಮಕ ಪರೀಕ್ಷೆ ತರಬೇತುದಾರರು ಮತ್ತು ಶ್ರೇಷ್ಠ ಮೌಲ್ಯಮಾಪನ ಪದ್ಧತಿಯನ್ನು ಅಳವಡಿಸಿ ಆರಂಭಿಸಿರುವ ಈ ಪರೀಕ್ಷಾ ತರಬೇತಿ ಕೇಂದ್ರದಲ್ಲಿ ಎಲ್ಲಾ ವರ್ಗದ ವಿದ್ಯಾರ್ಥಿಗಳಿಗೆ ಅವಕಾಶ ಸಿಗಲಿ ಎಂಬ ಉದ್ದೇಶದಿಂದ ಈ ಪರೀಕ್ಷೆಯನ್ನು ಆಯೋಜಿಸಲಾಗಿದೆ. ಇದು ಹುಡುಗರಿಗೆ ಮತ್ತು ಹುಡುಗಿಯರಿಗೆ ಅವರ ಸಾಧನೆಗೆ ಅವಕಾಶ ಕಲ್ಪಿಸುವ ಪ್ರಯತ್ನವಾಗಿದೆ.

ಗ್ರಾಮೀಣ ಮತ್ತು ಪ್ರತಿಭಾವಂತ ಆರ್ಥಿಕ ಹಿಂದುಳಿದ ಸಂಸಾರದ ಮಕ್ಕಳಿಗೆ ಪಿಯುಸಿ ಇಂಟಿಗ್ರೇಟೆಡ್ ಕಲಿಯಲು ಲಕ್ಷಾಂತರ ರೂಪಾಯಿ ನೀಡಬೇಕಿದೆ. ಈ ಪ್ರವೇಶ ಪರೀಕ್ಷೆ ಬರೆದು ಅರ್ಹತೆ ಪಡೆದ ವಿದ್ಯಾರ್ಥಿಗೆ ಇದು ಸಂಪೂರ್ಣ ಉಚಿತ ಆಗಲಿದೆ, ಸುಮಾರು ಎಂಟು ನೂರಕ್ಕಿಂತು ಹೆಚ್ಚು ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿದ್ದು ಕೌನ್ಸಿಲಿಂಗ್ ನಂತರ ಮೊದಲ ಹಂತವಾಗಿ 380 ಮಕ್ಕಳನ್ನು ಆಯ್ಕೆ ಮಾಡಲಾಯಿತು. ಎರಡನೇ ಹಂತದ ಪರೀಕ್ಷೆ ನಡೆಸಲಾಗುವುದು ಎಂದು ಕಣಚೂರು ಸಂಸ್ಥೆಯ ನಿರ್ದೇಶಕರಾದ ಅಬ್ದುಲ್ ರಹ್ಮಾನ್ ಹೇಳಿದರು.

ಕಣಚೂರು ಸಂಸ್ಥೆಯ ಮೂಲಕ ನಾವು ಈ ಮೊದಲು ವಿವಿಧ ವೃತ್ತಿಪರ ಕೋರ್ಸ್‌ಗೆ ಉಚಿತ ಸೀಟು, ವಿದ್ಯಾರ್ಥಿ ವೇತನ ನೀಡಿದ್ದೇವೆ ಆದರೆ ಈ ಬಾರಿ ಸ್ಪರ್ಧಾತ್ಮಕ ಪರೀಕ್ಷೆ ತರಬೇತಿ ಕೇಂದ್ರಕ್ಕೆ ಅರ್ಹ ಮಕ್ಕಳಿಗೆ ಅವಕಾಶ ಸಿಗಲಿ ಎಂಬ ಉದ್ದೇಶದಿಂದ ಅಧಿಕೃತವಾಗಿ ನಾವು ಇದನ್ನು ಘೋಷಿಸಿದ್ದೇವೆ. ನೀವು ನಿಮಗೆ ಸಿಕ್ಕಿದ ಅವಕಾಶವನ್ನು ಸಮಾಜಕ್ಕೆ ಮರಳಿ ನೀಡಬೇಕು. ಆಗಲೇ ನಮ್ಮ ಪ್ರಯತ್ನ ನಿಮ್ಮ ಬದುಕು ಸಾರ್ಥಕ ಎಂದು ಕಣಚೂರು ಸಂಸ್ಥೆಯ ಸ್ಥಾಪಕರಾದ ಡಾಕ್ಟರ್ ಯು.ಕೆ. ಮೋನುರವರು ವಿದ್ಯಾರ್ಥಿಗಳಿಗೆ ಹೇಳಿ ದರು. ಕಣಚೂರು ಮೆಡಿಕಲ್ ಕಾಲೇಜಿನ ದಶಮಾನೋತ್ಸವದ ಕೊಡುಗೆಯಾಗಿ ಒಂದು ಕೋಟಿ ರೂಪಾಯಿ ವಿದ್ಯಾರ್ಥಿ ವೇತನವನ್ನು ನೀಡಲಾಗುತ್ತದೆ.

ಇದು ಜಿಲ್ಲೆಯ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಮತ್ತು ಈ ಪರೀಕ್ಷೆ ಬರೆದು ಅವರ SSLC ಅಂಕದ ಆಧಾರದಲ್ಲಿ ನೀಡಲಾಗುವುದು ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

## ಕುದ್ರೋಳಿ ಅಳಕೆಯಲ್ಲಿ "ಗೇಮ್ ಗ್ರಿಡ್" ಮತ್ತು "ಕೆಲಿಝಿಯಮ್ ಫಿಟ್ನೆಸ್" ಶುಭಾರಂಭ

# ಗೇಮಿಂಗ್, ಫಿಟ್ನೆಸ್‌ನ ಡಬಲ್ ಸಡಗರ



**ಮಂಗಳೂರು:** ಕೆಲಿಝಿಯಂ ಜಿಮ್ ಸೆಂಟರ್ ಜಿಮ್ನಾಸ್ಟಿಕ್ ಜತೆಗೆ ಜಿಮ್, ಆಟ ಎಲ್ಲವನ್ನೂ ಒಂದೇ ವೇದಿಕೆಯಲ್ಲಿ ಸ್ಥಾಪಿಸಿರುವಂತಹ ವಿಭಿನ್ನ ಪ್ರಯತ್ನ. ಈ ಮೂಲಕ ಆರೋಗ್ಯವನ್ನು ಕಾಪಾಡುವುದರ ಜೊತೆಗೆ ಸ್ವಸ್ಥ ಸಮಾಜದ ನಿರ್ಮಾಣವಾಗಲಿ ಎಂದು ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಅಭಿಪ್ರಾಯಪಟ್ಟರು.

ಅವರು ಕುದ್ರೋಳಿ, ಅಳಕೆ, ಕೂಳೂರು ಫೆರಿ ರಸ್ತೆಯ ನ್ಯೂಚಿತ್ರ ಟಾಕೀಸ್ ಬಳಿಯ ಕೋಮಲ್ ಪುಷ್ಪಾಂಜಲಿ ಕಟ್ಟಡದ ಮೊದಲ ಮತ್ತು ಎರಡನೇ ಮಹಡಿಯಲ್ಲಿ ಸ್ಥಾಪಿಸಿದ "ಗೇಮ್ ಗ್ರಿಡ್" ಮತ್ತು "ಕೆಲಿಝಿಯಮ್ ಫಿಟ್ನೆಸ್" ಸೆಂಟರ್ ಅನ್ನು ಉದ್ಘಾಟಿಸಿ ಮಾತನಾಡಿದರು.

ಸಂದೀಪ್ ಮತ್ತು ರಾಹುಲ್ ಸೇರಿಕೊಂಡು ಇಬ್ಬರೂ ಮಂಗಳೂರಿನಲ್ಲೇ ಹೊಸ ಮಾದರಿಯ ನಾವೀನ್ಯತೆಯ ಕೆಲಿಝಿಯಂ ಜಿಮ್ ಸೆಂಟರ್ ಸ್ಥಾಪಿಸುವ ಮೂಲಕ ವಿಭಿನ್ನ ಪ್ರಯತ್ನಕ್ಕೆ ಕೈ ಹಾಕಿದ್ದು, ಸರ್ವರ ಪ್ರೋತ್ಸಾಹ ಅಗತ್ಯ. ಆರೋಗ್ಯವನ್ನು ಕಾಪಾಡುವ ಮೂಲಕ ಸ್ವಸ್ಥ ಸಮಾಜ ನಿರ್ಮಾಣಕ್ಕೆ ಮುಂದಾಗಿದ್ದಾರೆ. ರಾಹುಲ್ ಅವರು ತಮ್ಮ ಕೌಶಲ್ಯವನ್ನು ಸ್ಥಾಪಿಸುತ್ತಾ ಸಂದೀಪ್ ಅವರ ಅನುಭವಗಳನ್ನು ಕ್ರೂಢೀಕರಿಸಿಕೊಂಡು ಸರ್ವರೂ ಸಂತೋಷದಿಂದ ತರಬೇತಿಯನ್ನು ಪಡೆಯುವಂತಹ ವಾತಾವರಣ ಈ ಮೂಲಕ ನಿರ್ಮಾಣಗೊಳ್ಳಲಿ. ಮೊದಲ ಬ್ರಾಂಚ್ ಆರಂಭವನ್ನು ಯಶಸ್ವಿಯಾಗಿ ನಡೆಸುತ್ತಾ ಭವಿಷ್ಯದಲ್ಲಿ ಸರ್ವರೂ ಒಪ್ಪುವಂತಹ ಹಲವು ಬ್ರಾಂಚ್ ಗಳನ್ನು ಸ್ಥಾಪಿಸಿಕೊಂಡು ರಾಜ್ಯ ರಾಷ್ಟ್ರಮಟ್ಟದ ಬ್ರಾಂಡ್ ಆಗಿ ಪರಿವರ್ತನೆಯಾಗಲಿ ಎಂದು ಶುಭಹಾರೈಸಿದರು

"ಗೇಮ್ ಗ್ರಿಡ್ ಗೆ ಚಾಲನೆ ನೀಡಿದ ಮಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕ ವೇದವ್ಯಾಸ್ ಕಾಮತ್ ಮಾತನಾಡಿ, ಮಂಗಳೂರಿನ್ಲಲೇ ಹೊಸ ಕಾನ್ಸೆಪ್ಟ್ ಉದ್ಘಾಟನೆಯಾಗಿದೆ. ಜನರಿಗೆ ಆರೋಗ್ಯವನ್ನು ಕಾಪಾಡಲೆಂದು ಇರುವ ಹಲವು ವಿಭಿನ್ನ ಪ್ರಯತ್ನಗಳ ನಡುವೆ ಕೆಲಿಝಿಯಂ ಹೊಸ ತರದ ಯೋಜನೆಯನ್ನು ಆರೋಗ್ಯ ಸಂಬಂಧ ಮಂಗಳೂರಿಗೆ ಪರಿಚಯಿಸುತ್ತಿದೆ. ಇರುವ ತೂಕದಲ್ಲೇ ಯಾವ ರೀತಿಯಲ್ಲಿ ದೇಹವನ್ನು ಸೌಂದರ್ಯಯುತವಾಗಿ, ಆರೋಗ್ಯಯುತವಾಗಿ ರೂಪಿಸುವ ತರಬೇತಿಯ ಸೆಂಟರ್ ಇದಾಗಿದೆ. ಶಾಸಕನಾಗಿ ತೀವ್ರ ಒತ್ತಡಗಳಿದ್ದರೂ ಅದರ ನಡುವೆ ನಾನು ಕೂಡಾ ಇದೇ ಜಿಮ್ನೆಷಿಯಂ ನಲ್ಲಿ ತರಬೇತು ಪಡೆಯಲು ಸೇರುತ್ತೇನೆ ಅನ್ನುತ್ತಾ ನೂತನ ಸಂಸ್ಥೆಗೆ ಶುಭಹಾರೈಸಿದರು.

ಹೊಸ ರೀತಿಯ ಮನರಂಜನೆ ಮತ್ತು ಆರೋಗ್ಯ ಸೇವೆಗಳೆರಡನ್ನೂ ಒಂದೇ ಕಟ್ಟಡದಲ್ಲಿ ಪರಿಚಯಿಸುವ ವಿಶೇಷ ಕೇಂದ್ರ "ಗೇಮ್ ಗ್ರಿಡ್" ಮತ್ತು "ಕೆಲಿಝಿಯಮ್ ಫಿಟ್ನೆಸ್" ಸೆಂಟರ್ ಆಗಿದೆ. ಗೇಮ್ ಗ್ರಿಡ್ ಮೂಲಕ ಯುವಜನತೆ ಮತ್ತು ಮಕ್ಕಳಿಗೆ ಆಧುನಿಕ ಗೇಮಿಂಗ್ ಅನುಭವ, ವಿಭಿನ್ನ ಆಟಗಳು, ಡೆಸರ್ಟ್ ಸವಿಯುವ ಅವಕಾಶ ಹಾಗೂ ಕ್ಯಾನ್ವಾಸ್ ಪೇಂಟಿಂಗ್ ಸೃಜನಾತ್ಮಕ ಚಟುವಟಿಕೆಗಳ ಸೌಲಭ್ಯ ಮಕ್ಕಳಿಂದ ವಯಸ್ಕರ ತನಕ ಎಲ್ಲರಿಗೂ ಸೂಕ್ತವಾಗುವ ಜಿಮ್ ಹಾಗೂ ಕ್ಯಾಲಿಸ್ಥೆನಿಕ್ಸ್ ತರಬೇತಿ, ಸಂರಚಿತ ಗುಂಪು ತರಬೇತಿ ಕಾರ್ಯಕ್ರಮಗಳನ್ನು ಸಂಸ್ಥೆಯಲ್ಲಿ ಆರಂಭಿಸಲಾಗಿದೆ.

ಸಂಸ್ಥೆಯ ಪಾಲುದಾರರ ಹೆತ್ತವರು, ಹಿರಿಯರು ದೀಪ ಬೆಳಗಿಸುವ ಮೂಲಕ ಶುಭಹಾರೈಸಿದರು. ಸಂಸ್ಥೆಯ ಪಾಲುದಾ ರರಾದ ಸಂದೀಪ್ ಪುತ್ರನ್, ರಾಹುಲ್ ಕೋಟ್ಯಾನ್, ಮೇಘನಾ ಕಾಂಚನ್ ಮೊದಲಾದವರು ಉಪಸ್ಥಿತರಿದ್ದರು.

# ಸಿಸಿಲಿಯಾ ಫರೀದಾ ಗೋವಿಯಸ್ ಅವರಿಗೆ ಪಿಎಚ್‌ಡಿ ಪದವಿ



**ಕೊಣಾಜೆ:** ಸಿಸಿಲಿಯಾ ಫರೀದಾ ಗೋವಿಯಸ್ ಅವರು ಮಂಗಳೂರು ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಶ್ರೀಪತಿ ಕಲ್ಲೂರಾಯ ಅವರ ಮಾರ್ಗದರ್ಶನದಲ್ಲಿ "ದಕ್ಷಿಣ ಕನ್ನಡದ ವಾಣಿಜ್ಯ ಬ್ಯಾಂಕುಗಳು ಒದಗಿಸುವ ಇ–ಬ್ಯಾಂಕಿಂಗ್ ಉತ್ಪನ್ನಗಳು ಮತ್ತು ಸೇವೆಗಳ ಬಗ್ಗೆ ಗ್ರಾಹಕರ ತೃಪ್ತಿ" ಎಂಬ ವಿಷಯದಲ್ಲಿ ಶ್ರೀನಿವಾಸ್ ವಿಶ್ವವಿದ್ಯಾಲಯಕ್ಕೆ ಮಂಡಿಸಿದ ಮಹಾಪ್ರಬಂಧಕ್ಕೆ ಶ್ರೀನಿವಾಸ ವಿಶ್ವವಿದ್ಯಾಲಯ ಅವರಿಗೆ ಅರ್ಥಶಾಸ್ತ್ರದಲ್ಲಿ ಪಿ.ಎಚ್.ಡಿ ಪದವಿಯನ್ನು ನೀಡಿದೆ. ಗೋವಿಯಸ್ ಅವರು ಪ್ರಸ್ತುತ ಸ್ಕೂಲ್ ಆಫ್ ಸೋಷಿಯಲ್ ವರ್ಕ್ ರೋಶನಿ ನಿಲಯ (ಸ್ವಾಯತ್ತ) ಕಾಲೇಜಿನಲ್ಲಿ ಅರ್ಥಶಾಸ್ತ್ರದ ಸಹ ಪ್ರಾಧ್ಯಾಪಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ದಿ.ಫ್ರಾನ್ಸಿಸ್ ಪೆರೇರಾ ಮತ್ತು ಕ್ಯಾಥರೀನ್ ಪೆರೇರಾ ದಂಪತಿಗಳ ಪುತ್ರಿ ಹಾಗೂ ಶ್ರೀ ಕಾನ್ಫೆಡ್ ಗೋವಿಯಸ್ ಅವರ ಪತ್ನಿಯಾಗಿದ್ದಾರೆ.





# ಮಹಿಳೆಯರ ಸ್ವ ಉದ್ಯೋಗಕ್ಕೆ ಪ್ರೋತ್ಸಾಹಧನ: ಅಗತ್ಯ ಕ್ರಮಕ್ಕೆ ದಕ್ಷಿಣ ಕನ್ನಡ ಡಿಸಿ ಸೂಚನೆ



**ಮಂಗಳೂರು;** ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಲಿಂಗತ್ವ ಅಲ್ಪಸಂಖ್ಯಾತರಿಗೆ ಗುರುತು ಚೀಟಿ ನೀಡಲು ಸಮುದಾಯ ಆಧಾರಿತ ಸಂಸ್ಥೆಗಳು ಸಹಕರಿಸಬೇಕು. ಅವರಿಗೆ ನಿವೇಶನವನ್ನು ಮಂಜೂರು ಮಾಡುವ ಕುರಿತು ಸಂಬಂಧಪಟ್ಟ ಇಲಾಖೆಗಳು ಕ್ರಮವಹಿಸಬೇಕು ಎಂದು ದ.ಕ.ಜಿಲ್ಲಾಧಿಕಾರಿ ದರ್ಶನ್ ಎಚ್.ವಿ ಸೂಚಿಸಿದ್ದಾರೆ.


ಮಹಿಳಾ ಅಭಿವೃದ್ಧಿ ನಿಗಮದ ವಿವಿಧ ಯೋಜನೆಗಳ ಆಯ್ಕೆ ಹಾಗೂ ಸಮನ್ವಯ ಸುತಿ ಸಭೆ ಹಾಗು ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ ತಡೆ ಕಾಯ್ದೆ ಕುರಿತು ದ.ಕ.ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಜಿಲ್ಲಾ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಧನಶ್ರೀ ಯೋಜನೆಯಡಿ ಎಚ್.ಐ.ವಿ ಸೋಂಕಿತ ಮಹಿಳೆಯರಿಗೆ ಹಾಗೂ ಚೇತನ ಯೋಜನೆಯಡಿ ದಮನಿತ ಮಹಿಳೆಯರಿಗೆ ಸ್ವ ಉದ್ಯೋಗಕ್ಕೆ ಪ್ರೋತ್ಸಾಹಧನ ಪಾವತಿಗೆ ಕ್ರಮ ಕೈಗೊಳ್ಳಬೇಕು. ಫಲಾನುಭವಿಗಳಿಗೆ ಯೋಜನೆಗಳಿಗೆ ಅರ್ಜಿ ಸಲ್ಲಿಸಲು ಆಧಾರ್ ಕಾರ್ಡ್ ಅಥವಾ ಇನ್ನಿತರೆ ದಾಖಲೆಗಳ ಸಮಸ್ಯೆಯಾದಲ್ಲಿ ಅದನ್ನು ಪರಿಹರಿಸುವಂತೆ ಕ್ರಮವಹಿಸಬೇಕು ಎಂದು ಡಿ.ಸಿ ಹೇಳಿದರು.

15ಮಂದಿ ನಿವೇಶನ ರಹಿತ ಟ್ರಾನ್ಸ್ ಜೆಂಡರ್ಸ್ ಪಟ್ಟಿಯನ್ನು ಮಂಗಳೂರು ಮಹಾನಗರಪಾಲಿಕೆಗೆ ಒದಗಿಸಲಾಗಿದೆ. ಗೃಹ ಲಕ್ಷ್ಮೀ ಯೋಜನೆಯಡಿ ನೋಂದಾಯಿಸಿದ 45 ಮಂದಿ ಟ್ರಾನ್ಸ್ಜೆಂಡರ್ಸ್ಗೆ ತಿಂಗಳಿಗೆ 2,000 ರೂ.ಮೊತ್ತವನ್ನು ನೀಡಲಾಗುತ್ತಿದೆ. ಇತ್ತೀಚಿಗೆ ನಡೆದ ಸರ್ವೇಯಂತೆ ದ.ಕ.ಜಿಲ್ಲೆಯಲ್ಲಿ ಒಟ್ಟು 96 ಟ್ರಾನ್ಸ್ಜೆಂಡರ್ಸ್ ವ್ಯಕ್ತಿಗಳು ನೋಂದಾಯಿಸಿರುತ್ತಾರೆ. ಟ್ರಾನ್ಸ್ಜೆಂಡರ್ ಪುರ್ನವಸತಿ ಯೋಜನೆಯಡಿ 18ರಿಂದ 60ರ ವಯೋಮಿತಿ ವ್ಯಕ್ತಿಗಳು ಸ್ವ–ಉದ್ಯೋಗ ಕೈಗೊಳ್ಳಲು 30 ಸಾವಿರ ರೂ ಪ್ರೋತ್ಸಾಹಧನ ನೀಡಲಾಗುತ್ತದೆ. ಟ್ರಾನ್ಸ್ ಜೆಂಡರ್ಸ್ ಪುನರ್ವಸತಿ ಯೋಜನೆಯಡಿ 16 ಅರ್ಜಿಗಳು ಸ್ವೀಕೃತವಾಗಿದ್ದು, 1 ಅರ್ಜಿಯು ಯಾವುದೇ ದಾಖಲೆಗಳು ಇಲ್ಲದೆ ತಿರಸ್ಕೃತಗೊಂಡಿರುತ್ತದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಭಿವೃದ್ಧಿ ನಿರೀಕ್ಷಕಿ ಚಂದ್ರಿಕಾ ಸಭೆಗೆ ಮಾಹಿತಿ ನೀಡಿದರು.

ದ.ಕ.ಜಿಲ್ಲಾ ಮಟ್ಟದಲ್ಲಿ ಲೈಂಗಿಕ ಕಿರುಕುಳ ತಡೆಗಟ್ಟುವಿಕೆ ಕಾಯ್ದೆಯ ಬಗ್ಗೆ ಐಇಸಿ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕು. 10 ಅಥವಾ 10ಕ್ಕಿಂತ ಹೆಚ್ಚು ಸಿಬ್ಬಂದಿ ವರ್ಗ ಕೆಲಸ ನಿರ್ವಹಿಸುತ್ತಿರುವ ಸ್ಥಳಗಳಲ್ಲಿ ಆಂತರಿಕ ದೂರುಗಳ ಸಮಿತಿ ರಚಿಸಿ ಜಿಲ್ಲಾ ಮಟ್ಟದಲ್ಲಿ ಆಂತರಿಕ ಮತ್ತು ಸ್ಥಳೀಯ ದೂರು ಸಮಿತಿಯ ವಿಚಾರಣಾ ವರದಿಯಂತೆ ನಿಯಮಾನುಸಾರ ಕ್ರಮ ವಹಿಸಬೇಕು. ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ ತಡೆ ಕಾಯ್ದೆಯನ್ನು ಸಮಗ್ರವಾಗಿ ಅನುಷ್ಠಾನ ಮಾಡಬೇಕು. ಬಾಕ್ಸ್ ಪೋರ್ಟಲ್‌ನಲ್ಲಿ ನಿಖರವಾಗಿ ಮಾಹಿತಿಯನ್ನು ಪರಿಶೀಲಿಸಬೇಕು ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಸಭೆಯಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶೆ ಜೈಬುನ್ನೀಸಾ, ಅಪರ ಜಿಲ್ಲಾಧಿಕಾರಿ ರಾಜು ಕೆ, ಸಹಾಯಕ ಪೊಲೀಸ್ ಆಯುಕ್ತೆ ಗೀತಾ ಕುಲಕರ್ಣಿ, ಜಿಲ್ಲಾ ಆರೋಗ್ಯಾಧಿಕಾರಿ ಡಾ.ತಿಮ್ಮಯ್ಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಉಸ್ಮಾನ್ ಎ ಹಾಗು ವಿವಿಧ ಇಲಾಖಾಧಿಕಾರಿಗಳು ಉಪಸ್ಥಿತರಿದ್ದರು.





# ತೊಕ್ಕೊಟ್ಟು ಕಾಪಿಕಾಡು ಶ್ರೀ ಉಮಾಮಹೇಶ್ವರಿ ಕ್ಷೇತ್ರದಲ್ಲಿ ಧೃಡ ಕಲಶಾಭಿಷೇಕ ಸಂಪನ್ನ



**ತೊಕ್ಕೊಟ್ಟು:** ಕಾಪಿಕಾಡುವಿನ ಉಮಾಪುರಿಯ ಶ್ರೀ ಉಮಾಮಹೇಶ್ವರಿ ದೇವಸ್ಥಾನದಲ್ಲಿ ಬ್ರಹ್ಮಶ್ರೀ ಕುಂಟಾರು ರವೀಶ್ ತಂತ್ರಿವರ್ಯರ ನೇತೃತ್ವದಲ್ಲಿ ಉಮಾಮಹೇಶ್ವರಿ ಅಮ್ಮನವರಿಗೆ ಧೃಢ ಕಲಶಾಭಿಷೇಕ ನಡೆಯಿತು.

ಮಧ್ಯಾಹ್ನ ಮಹಾಪೂಜೆ ನೆರವೇರಿ ಸಾರ್ವಜನಿಕ ಅನ್ನಸಂತರ್ಪಣೆ ನಡೆಯಿತು.

ಈ ಸಂದರ್ಭದಲ್ಲಿ ಶ್ರೀ ಉಮಾಮಹೇಶ್ವರಿ ಕ್ಷೇತ್ರದ ಪ್ರಧಾನ ಅರ್ಚಕರಾದ ಪರಮೇಶ್ವರ ಜೋಷಿ,ಆಡಳಿತ ಮೊಕ್ತೇಸರರಾದ ಎ.ಜೆ.ಶೇಖರ್ ಮತ್ತು ಪೂರ್ಣಿಮಾ ಶೇಖರ್ ದಂಪತಿ,ಆಡಳಿತ ಮಂಡಳಿ ಪ್ರಧಾನ ಕಾರ್ಯದರ್ಶಿ ದಿನೇಶ್.ಕೆ.ಅತ್ತಾವರ,ಕೋಶಾಧಿಕಾರಿ ಟಿ.ರಘುರಾಮ ಶೆಟ್ಟಿ,ಮೊಕ್ತೇಸರರುಗಳಾದ ಈಶ್ವರ್ ಉಳ್ಳಾಲ್,ನಿರ್ಮಲ ಕುಂಞಬು,ಮಹಾಲಿಂಗ, ಡಾ.ರಾಮಕೃಷ್ಣ ಶೆಟ್ಟಿ,ಕೂಸಪ್ಪ ಗಟ್ಟಿ,ಬ್ರಹ್ಮಕಲಶೋತ್ಸವ ಸಮಿತಿ ಕಾರ್ಯಾಧ್ಯಕ್ಷರಾದ ಸುರೇಶ್ ಭಟ್ನಗರ,ಪ್ರಧಾನ ಕಾರ್ಯದರ್ಶಿ ಗೋಪಿನಾಥ್ ಕಾಪಿಕಾಡು,ಉಮಾಮಹೇಶ್ವರಿ ಸೇವಾ ಸಮಿತಿಯ ಗೌರವಾಧ್ಯಕ್ಷರಾದ ಸುರೇಂದ್ರ ನಾಯಕ್,ಅಧ್ಯಕ್ಷರಾದ ದಿನೇಶ್ ರೈ ಕಳ್ಳಿಗೆ,ಪ್ರಧಾನ ಕಾರ್ಯದರ್ಶಿ ಗಣೇಶ್ ಕಾಪಿಕಾಡ್,ಪ್ರಮುಖರಾದ ಆನಂದ ಶೆಟ್ಟಿ ಭಟ್ನಗರ,ಸಂಜೀವ ಶೆಟ್ಟಿ ಪಿಲಾರ್, ಮೋಹನ್ ದಾಸ್ ಕಾಪಿಕಾಡ್, ಶಿವರಾಮ್ ಕಾಪಿಕಾಡು,ಚರಣ್ ಮೊದಲಾದವರು ಉಪಸ್ಥಿತರಿದ್ದರು.

# ಮುಡಿಪು: ಶಿಕ್ಷಣ ಕ್ಷೇತ್ರಗಳಲ್ಲಿ ಮುನ್ನಡೆಯುತ್ತ ಸೂರಜ್ ಶಿಕ್ಷಣ ಸಂಸ್ಥೆ

## 2026-27ರ ಪ್ರವೇಶ ಪ್ರಕ್ರಿಯೆ ಆರಂಭ





**ಮುಡಿಪು:** ಉಳ್ಳಾಲ ತಾಲೂಕು ಮುಡಿಪಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಸೂರಜ್ ಪಿ.ಯು. ಕಾಲೇಜು ಮತ್ತು ಜ್ಞಾನ ದೀಪ ಶಾಲೆ, ಸೂರಜ್ ಎಜುಕೇಷನಲ್ ಮತ್ತು ಚಾರಿಟೇಬಲ್ ಟ್ರಸ್ಟ್ (ರಿ.) ಆಡಳಿತದಲ್ಲಿ 2026–27ನೇ ಶೈಕ್ಷಣಿಕ ಸಾಲಿನ ಪ್ರವೇಶ ಪ್ರಕ್ರಿಯೆಯನ್ನು ಆರಂಭಿಸಿದೆ. ನರ್ಸರಿಯಿಂದ ಪಿಯುಸಿವರೆಗೆ ಗುಣಮಟ್ಟದ ಶಿಕ್ಷಣವನ್ನು ನೀಡುತ್ತಿರುವ ಈ ಸಂಸ್ಥೆಯಲ್ಲಿ ಪಿಯುಸಿ ವಿಜ್ಞಾನ ವಿಭಾಗದಲ್ಲಿ PCMB ಹಾಗೂ PCMC ಸಂಯೋಜನೆಗಳೊಂದಿಗೆ, ವಾಣಿಜ್ಯ ಮತ್ತು ಕಲಾ ವಿಭಾಗಗಳೂ ಲಭ್ಯವಿವೆ. CET, NEET, CA ಹಾಗೂ JEE ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ವಿಶೇಷ ತರಬೇತಿಯನ್ನು ಸಹ ವಿದ್ಯಾರ್ಥಿಗಳಿಗೆ ಒದಗಿಸಲಾಗುತ್ತಿದೆ. ಇಲ್ಲಿನ ವಿಶೇಷತೆಗಳಾಗಿ ಉತ್ತಮ ವಸತಿ ವ್ಯವಸ್ಥೆ ಬಸ್ ಸೌಲಭ್ಯ, ಮತ್ತು VMS AI ಆಧಾರಿತ ಹಾಜರಾತಿ ವ್ಯವಸ್ಥೆ ಒಳಗೊಂಡಿವೆ. ಈ ಸಂಸ್ಥೆಯು SSLC ಪರೀಕ್ಷೆಯಲ್ಲಿ ಶೇಕಡಾ 100 ಫಲಿತಾಂಶ ಸಾಧಿಸಿರುವುದು ಗಮನಾರ್ಹವಾಗಿದೆ. ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಉತ್ತೇಜನ ನೀಡುವ ಉದ್ದೇಶದಿಂದ SSLCನಲ್ಲಿ 95%ಕ್ಕಿಂತ ಹೆಚ್ಚು ಅಂಕ ಪಡೆದವರಿಗೆ ಉಚಿತ ಶಿಕ್ಷಣ ನೀಡಲಾಗುತ್ತಿದೆ. ಹಾಗೆಯೇ, ವಸತಿ ವಿದ್ಯಾರ್ಥಿಗಳಿಗೆ SSLCನಲ್ಲಿ 98%ಕ್ಕಿಂತ ಹೆಚ್ಚು ಅಂಕ ಗಳಿಸಿದರೆ ಸಂಪೂರ್ಣ ಉಚಿತ ಶಿಕ್ಷಣ ಸೌಲಭ್ಯ ಕಲ್ಪಿಸಲಾಗಿದೆ.

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಲು**
ದೂರವಾಣಿ: 94481 49419, 8073109532, 7483024825
ಲ್ಯಾಂಡ್ ಲೈನ್: 08255–260271
ಇಮೇಲ್ : surajpucollege@gmail.com

ಆಸಕ್ತ ವಿದ್ಯಾರ್ಥಿಗಳು ಮತ್ತು ಪೋಷಕರು ಈ ಅವಕಾಶವನ್ನು ಸದುಪಯೋಗಪಡಿಸಿ ಕೊಳ್ಳುವಂತೆ ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ.

# ಅಮೇರಿಕ ಇಸ್ರೇಲ್ ಯುದ್ಧನೀತಿಗಳು ಜಗತ್ತಿಗೆ ಮಾರಕ: ಸುಕುಮಾರ್ ತೊಕ್ಕೊಟ್ಟು



- ಭಾರತದಲ್ಲಿ ಪೆಟ್ರೋಲ್ ಡೀಸೆಲ್ ಗಳಿಗೆ ಜನರು ಪರದಾಡುವಂತಹ ಸ್ಥಿತಿ ನಿರ್ಮಾಣವಾಗಬಹುದು.
- ಯುದ್ಧ ಜಗತ್ತಿಗೆ ಮಾರಕ. ಯುದ್ಧ ನಿಂತು ಶಾಂತಿ ಸ್ಥಾಪನೆಯಾಗಬೇಕು

**ತೊಕ್ಕೊಟ್ಟು:** ಇರಾನ್ ಮೇಲೆ ಇಸ್ರೇಲ್ ಮತ್ತು ಅಮೇರಿಕಾ ನಡೆಸುತ್ತಿರುವ ಜಂಟಿ ದಾಳಿ ನಡೆಸುತ್ತಿರುವುದನ್ನು ಖಂಡಿಸಿ ಜನಪರ ಸಂಘಟನೆಗಳ ನೇತೃತ್ವದಲ್ಲಿ ತೊಕ್ಕೊಟ್ಟು ಜಂಕ್ಷನ್‌ನಲ್ಲಿ ಪ್ರತಿಭಟನೆ ನಡೆಯಿತು.

ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಸಿಐಟಿಯು ಜಿಲ್ಲಾ ಉಪಾಧ್ಯಕ್ಷ ಸುಕುಮಾರ್ ತೊಕ್ಕೊಟ್ಟು ಕೆಲವು ತಿಂಗಳ ಹಿಂದೆ ಅಮೇರಿಕಾ ದೇಶದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಜಗತ್ತಿನಲ್ಲಿಯೇ ಅತೀ ಹೆಚ್ಚು ತೈಲ ಸಂಪತ್ತು ಹೊಂದಿರುವಂತಹ ವೆನಿಝುವೆಲಾ ದೇಶದ ಅಧ್ಯಕ್ಷ ಹಾಗೂ ಅವರ ಪತ್ನಿಯನ್ನು ಅಪಹರಣ ಮಾಡಿ ಆ ದೇಶವನ್ನು ತನ್ನ ಕಪಿ ಮುಷ್ಟಿಯಲ್ಲಿ ಇಡಲು ಪ್ರಯತ್ನಿಸುತ್ತಾರೆ.. ಇದೀಗ ಇರಾನ್ ಮೇಲೆ ಹಿಡಿತ ಸಾಧಿಸಲು ಇಸ್ರೇಲ್ ನೊಂದಿಗೆ ಕೈಜೋಡಿಸಿ ಇರಾನ್ ಮೇಲೆ ಯುದ್ಧ ಸಾರಿದ್ದಾರೆ. ಜಗತ್ತಿನ ತೈಲ ಸಂಪತ್ತು ತನ್ನ ನಿಯಂತ್ರಣದಲ್ಲಿ ಇರಬೇಕು ಎಂಬ ದುರಾಸೆ ಅಮೇರಿಕಾ ದೇಶಕ್ಕಿದೆ.. ಈ ಯುದ್ಧವು ಜಾಗತಿಕವಾಗಿ ಮೂರನೇ ಮಹಾಯುದ್ಧಕ್ಕೆ ನಾಂದಿ ಹಾಡುವಂತಿದೆ. ಇರಾನಿನ ಸರ್ವೋಚ್ಚ ನಾಯಕ ಆಯತೋಲ್ಲಾಹ್ ಖಾಮಿನಿಯನ್ನು ಹತ್ಯೆಗೈದರೆ ಇರಾನ್ ದೇಶ ಸುಮ್ಮನಾಗುತ್ತದೆ ಎಂಬ ಭ್ರಮೆಯೊಂದಿಗೆ ಯುದ್ಧ ಸಾರಿದ ಅಮೇರಿಕಾ ದೇಶ ಸದ್ಯ ಇರಾನಿನ ಶಕ್ತಿ ಸಾಮರ್ಥ್ಯ ಕಂಡು ಜಗತ್ತಿನ ಬಲಿಷ್ಠ ರಾಷ್ಟ್ರಗಳ ಬೆಂಬಲವನ್ನು ಕೇಳುತ್ತಿದೆ.. ಈ ಯುದ್ಧದಿಂದ ಭಾರತದಲ್ಲಿ ಸಾಮಾನ್ಯ ಜನರ ಬದುಕಿಗೆ ಪೆಟ್ಟು ಬೀಳಲಿದೆ.. ಈಗಾಗಲೇ ಅಡುಗೆ ಅನಿಲದ ಕೊರತೆಯಿಂದ ಹೋಟೆಲ್ ಉದ್ಯಮ ಕುಂಟಿತವಾಗಿದ್ದು ಯುದ್ಧ ಹೀಗೆಯೇ ಮುಂದುವರಿದರೆ ಭಾರತದಲ್ಲಿ ಪೆಟ್ರೋಲ್ ಡೀಸೆಲ್ ಗಳಿಗೆ ಜನರು ಪರದಾಡುವಂತಹ ಸ್ಥಿತಿ ನಿರ್ಮಾಣವಾಗಬಹುದು. ಯುದ್ಧ ಜಗತ್ತಿಗೆ ಮಾರಕ. ಯುದ್ಧ ನಿಂತು ಶಾಂತಿ ಸ್ಥಾಪನೆಯಾಗಬೇಕೆಂದರು.. ಪ್ರಗತಿಪರ ಚಿಂತಕರಾದ ರಮೇಶ್ ಉಳ್ಳಾಲ ಮಾತನಾಡಿದರು.

ಪ್ರತಿಭಟನೆಯಲ್ಲಿ ಸಿಐಟಿಯು ಮುಖಂಡರಾದ ಜಯಂತ್ ನಾಯ್ಕ್, ಇಬ್ರಾಹಿಂ ಮದಕ, ಶೇಖರ್ ಕುಂದರ್, ಚಂದ್ರಹಾಸ್ ಕುತ್ತಾರ್, ಜನಾರ್ಧನ ಕುತ್ತಾರ್, ಸುಂದರ ಕುಂಪಲ,ಮಹಿಳಾ ಸಂಘಟನೆ ಮುಖಂಡರಾದ ಪದ್ಮಾವತಿ ಶೆಟ್ಟಿ, ವಿಲಾಸಿನಿ ತೊಕ್ಕೊಟ್ಟು, ಪ್ರಮೋದಿನಿ ಕಲ್ಲಾಪು, ರೈತ ಮುಖಂಡರಾದ ಕೃಷ್ಣಪ್ಪ ಸಾಲ್ಯಾನ್, ಡಿವೈಎಫ್ ಮುಖಂಡರಾದ ನಿತಿನ್ ಕುತ್ತಾರ್, ರಝಾಕ್ ಮುಡಿಪು, ವಿಕಾಸ್ ಕುತ್ತಾರ್, ದಿವ್ಯರಾಜ್ ಕುತ್ತಾರ್, ಮಿಥುನ್ ರಾಜ್, ಉಪಸ್ಥಿತರಿದ್ದರು

ಸಿಐಟಿಯು ಉಳ್ಳಾಲ ತಾಲೂಕು ಕಾರ್ಯದರ್ಶಿ ರೋಹಿದಾಸ್ ಭಟ್ನಗರ ಕಾರ್ಯಕ್ರಮ ನಿರೂಪಿಸಿದರು. ಡಿವೈಎಫ್ಐ ಉಳ್ಳಾಲ ತಾಲೂಕು ಕಾರ್ಯದರ್ಶಿ ರಿಝ್ವಾನ್ ಹರೇಕಳ ವಂದಿಸಿದರು.

# ನಾರ್ಯ: ಮೇ.8ರಂದು ಶ್ರೀ ಆದಿಬ್ರಹ್ಮ ಮೊಗೇರ ಕಳ, ಪುನರ್ ಪ್ರತಿಷ್ಠಾ ಬ್ರಹ್ಮಕಲಶೋತ್ಸವ, ಪೂರ್ವಭಾವಿ ಸಭೆ




**ಉಳ್ಳಾಲ:** ದೈವ ದೇವರ ಸಾನಿಧ್ಯವನ್ನು ಇನ್ನಷ್ಟು ಪ್ರಭಾವಶಾಲಿಯಾಗಿ ಬೆಳಗಿಸುವುದು ಹಾಗೂ ಪಾರಂಪರಿಕ ಆಚರಣೆಗಳನ್ನು ಮುಂದಿನ ಪೀಳಿಗೆಗೆ ಹಸ್ತಾಂತರಿಸುವುದು ಎಲ್ಲರ ಜವಾಬ್ದಾರಿ ಎಂದು ಶ್ರೀ ಕ್ಷೇತ್ರ ಕಣಂತೂರಿನ ಅನುವಂಶಿಕ ಮೊಕ್ತೇಸರರಾದ ಯಂ. ಪದ್ಮನಾಭ ರೈ ಯಾನೆ ಮಂಜು ಭಂಡಾರಿ ನಾರ್ಯಗುತ್ತು ಅಭಿಪ್ರಾಯಪಟ್ಟರು.

ಜೀರ್ಣೋದ್ಧಾರ ಸಮಿತಿ ಮತ್ತು ಬ್ರಹ್ಮಕಲಶೋತ್ಸವ ಸಮಿತಿ ವತಿಯಿಂದ ಶ್ರೀ ಆದಿಬ್ರಹ್ಮ ಮೊಗೇರ ಕಳ, ನಾರ್ಯ ಮೇ.8 ರಂದು ಪುನರ್ ಪ್ರತಿಷ್ಠಾ ಬ್ರಹ್ಮಕಲಶೋತ್ಸವದ ಪ್ರಯುಕ್ತ ಶ್ರೀ ಕ್ಷೇತ್ರದ ವಠಾರದಲ್ಲಿ ಭಾನುವಾರ ಜರಗಿದ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು.

ಪೂರ್ವಜರು ದೈವ-ದೇವರ ಆರಾಧನೆಯನ್ನು ಕೇವಲ ಆಚರಣೆಯಾಗಿ ನೋಡದೆ, ಅದನ್ನು ಜೀವನದ ಅವಿಭಾಜ್ಯ ಅಂಗವಾಗಿ ಬೆಳೆಸಿಕೊಂಡಿದ್ದಾರೆ. ಆ ಪರಂಪರೆಯನ್ನು ಕಾಪಾಡಿ, ಸಮಾಜದಲ್ಲಿ ಭಕ್ತಿ, ಶ್ರದ್ಧೆ ಮತ್ತು ಒಗ್ಗಟ್ಟನ್ನು ಬೆಳೆಸುವುದು ಅತ್ಯಗತ್ಯ. ದೈವದ ಸಾನಿಧ್ಯವು ದೇವಸ್ಥಾನಗಳಲ್ಲೇ ಸೀಮಿತವಾಗದೆ, ಪ್ರತಿಯೊಬ್ಬರ ಮನಸ್ಸು ಮತ್ತು ನಡೆನುಡಿಗಳಲ್ಲಿ ಪ್ರತಿಫಲಿಸಬೇಕು. ಯುವ ಪೀಳಿಗೆಗೆ ಧಾರ್ಮಿಕ ಸಂಸ್ಕೃತಿ ಮತ್ತು ಮೌಲ್ಯಗಳನ್ನು ಪರಿಚಯಿ ಸುವ ಮೂಲಕ ಈ ಪವಿತ್ರ ಪರಂಪರೆಯನ್ನು ಉಳಿಸುವಲ್ಲಿ ಎಲ್ಲರೂ ಕೈಜೋಡಿಸಬೇಕು ಎಂದರು.

ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷರಾದ ಜಗದೀಶ್ ಆಳ್ವ ಕುವೆತ್ತಬೈಲ್ ಮಾತನಾಡಿ, ಕ್ಷೇತ್ರದ ಉತ್ಸವ ಹಾಗೂ ಧಾರ್ಮಿಕ ಕಾರ್ಯಗಳಲ್ಲಿ ರಾಜಕೀಯವನ್ನು ದೂರವಿಟ್ಟು ಎಲ್ಲರೂ ಭಾಗವಹಿಸಬೇಕಿದೆ. ಕ್ಷೇತ್ರದ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಸ್ಥಳೀಯರ ನಿಸ್ವಾರ್ಥ ಸೇವೆಯೇ ಮೂಲ ಕಾರಣವಾಗಿದೆ. ಯಾರ ಬಳಿಯೂ ಅವಲಂಬಿಸದೆ, ತಮ್ಮದೇ ಶ್ರಮ ಮತ್ತು ಭಕ್ತಿಯಿಂದ ಸ್ಥಳೀಯರು ಕ್ಷೇತ್ರವನ್ನು ನಿರ್ಮಿಸಿ ಬೆಳೆಸಿರುವುದು ಶ್ಲಾಘನೀಯ. ಕಾರಣಿಕ ಕ್ಷೇತ್ರ ಬೆಳಗುವುದರಿಂದ ಆಧ್ಯಾತ್ಮಿಕ ಬೆಳವಣಿಗೆ ಮಾತ್ರವಲ್ಲದೆ, ಪ್ರದೇಶದ ಸಮಗ್ರ ಅಭಿವೃದ್ಧಿಗೂ ಸಹಕಾರಿಯಾಗುತ್ತದೆ. ಕ್ಷೇತ್ರದ ಉತ್ಸವದ ಕಾರ್ಯಗಳಲ್ಲಿ ಪಾಲ್ಗೊಳ್ಳಬೇಕು ಎಂದರು.

ಈ ಸಂದರ್ಭ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಬಾಬು ಎನ್., ಯಶವಂತ್ ದೇರಾಜೆ , ಬಾಲಕೃಷ್ಣ ಶೆಟ್ಟಿ ಕೆಳಗಿನ ನಾರ್ಯ , ಸುಮಲತಾ ಕೊಣಾಜೆ, ಸುಮನಾ ಹರೀಶ್ ಶೆಟ್ಟಿ, ಬ್ರಹ್ಮಕಲಶೋತ್ಸವ ಮಹಿಳಾ ಸಮಿತಿ ಅಧ್ಯಕ್ಷೆ ಮೀನಾಕ್ಷಿ, ಬಾಳೆಪುಣಿ ಮಾಜಿ ಸದಸ್ಯ ಭಾಸ್ಕರ್ ಕೋಟ್ಯಾನ್, ಹುಕ್ರಪ್ಪ, ಚಂದ್ರಶೇಖರ್ ಕಲ್ಲಾಪು, ಸತೀಶ್ ಜೋಗಿ ಬದ್ಯಾರು, ಸತೀಶ್ ಪೂಜಾರಿ ಸಜಿಪ ಮುನ್ನೂರು, ಹರೀಶ್ ಕೊಟತ್ತಜೆ, ಮುರಳೀಧರ್ ಕೊಣಾಜೆ, ಪದ್ಮನಾಭ ಗಟ್ಟಿ ಕೊಣಾಜೆ ಉಪಸ್ಥಿತರಿದ್ದರು.

ಸುಧೀರ್ ಬಾಳೆಪುಣಿ ಸ್ವಾಗತಿಸಿದರು. ರಾಘವ ಎನ್.ಟಿ ಕಕ್ಕೆಮಜಲು ನಿರೂಪಿಸಿದರು. ಭೋಜಾನಂದ ನಾರ್ಯ ನಿರೂಪಿಸಿದರು.

### ಶ್ರದ್ಧಾಭಕ್ತಿಯಿಂದ ನಡೆಸಿಕೊಂಡು ಬಂದಿರುವ ಆರಾಧನೆ'

ಮೊಗೇರ ಸಮುದಾಯ, ನಾರ್ಯಗುತ್ತು ಕುಟುಂಬಿಕರು ಹಾಗೂ ಗ್ರಾಮಸ್ಥ ಭಕ್ತರು ಶತಮಾನಗಳಿಂದ ದೈವ ಆರಾಧನೆಯನ್ನು ಶ್ರದ್ಧಾಭಕ್ತಿಯಿಂದ ನಡೆಸಿಕೊಂಡು ಬರುತ್ತಿದ್ದಾರೆ. ಈ ಕ್ಷೇತ್ರವು ಮೊಗೇರ ದೈವಗಳ ಪ್ರಮುಖ ಆಡಿಕಳಗಳಲ್ಲಿ ಒಂದಾಗಿ ಪರಿಗಣಿಸಲ್ಪಟ್ಟಿದ್ದು, ಇಲ್ಲಿ ಹತ್ತು ಕಲ್ಲುಗಳಲ್ಲಿ ದೈವ ಸಾನಿಧ್ಯವಿರುವುದು ವಿಶೇಷವೆಂದು ತಿಳಿದುಬಂದಿದೆ. 1968ರಲ್ಲಿ ನಡೆದ ಪ್ರಶ್ನಾ ಚಿಂತನೆಯ ಆಧಾರದ ಮೇಲೆ ಜೀರ್ಣೋದ್ಧಾರ ಕಾರ್ಯಗಳು ನಡೆಯಿ 1989ರಲ್ಲಿ ಬ್ರಹ್ಮಕಲಶೋತ್ಸವ ನೆರವೇರಿಸಲಾಗಿತ್ತು. ನಂತರ 2006ರಲ್ಲಿ ಮತ್ತೊಮ್ಮೆ ಪುನರ್ ಪ್ರತಿಷ್ಠೆ ಹಾಗೂ ಬ್ರಹ್ಮಕಲಶೋತ್ಸವ ಜರುಗಿದ್ದು, ಕ್ಷೇತ್ರದಲ್ಲಿ ಸಂಕ್ರಾಂತಿ, ದೀಪಾವಳಿ, ಗಣೇಶ ಚತುರ್ಥಿ ಸೇರಿದಂತೆ ವಿವಿಧ ಪರ್ವಗಳಲ್ಲಿ ಮಂಜ ಸೇವೆ ಹಾಗೂ ಭಜನಾ ಕಾರ್ಯಕ್ರಮಗಳು ನಿರಂತರವಾಗಿ ನಡೆಯುತ್ತಿವೆ. ಇದೀಗ 2019ರಲ್ಲಿ ನಡೆದ ಪ್ರಶ್ನಾ ಚಿಂತನೆಯ ಆಧಾರದ ಮೇಲೆ ಮತ್ತೆ ಜೀರ್ಣೋದ್ಧಾರ ಅಗತ್ಯವಿರುವುದಾಗಿ ಕಂಡುಬಂದಿದ್ದು, ನೂತನ ಪೀಠ ನಿರ್ಮಾಣ, ಬ್ರಹ್ಮಗುಂಡ, ಸೂತ್ರ ಆವರಣ, ಕೆಂಪು ಕಲ್ಲಿನ ನೆಲಹಾಸು, ಮೆಟ್ಟಿಲು, ತಡೆಗೋಡೆ, ಕಚೇರಿ ಕೊಠಡಿ ಸೇರಿದಂತೆ ವಿವಿಧ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. ಈ ಕಾರ್ಯಗಳಿಗೆ ಅಂದಾಜು ರೂ. 90 ಲಕ್ಷ ವೆಚ್ಚವಾಗಲಿದೆ

# ಉಳ್ಳಾಲದಲ್ಲಿ ಸುಸ್ಥಿರ ಸ್ವಚ್ಛತೆ-ಅಭಿವೃದ್ಧಿಗೆ ಒತ್ತು: ಸ್ಪೀಕರ್ ಯು.ಟಿ. ಖಾದರ್



**ಕೊಣಾಜೆ;** ಉಳ್ಳಾಲ ತಾಲೂಕಿನಾದ್ಯಂತ ಸೃಷ್ಟಿ ಮಾಡಿರುವ ಬಯಲು ಕಸಾಲಯಗಳನ್ನು ಅಳಿಸಿ ಸುಸ್ಥಿರ ಅಭಿವೃದ್ಧಿ ಕಾರ್ಯವನ್ನು ಅಭಿಯಾನ ರೀತಿಯಲ್ಲಿ ಶೀಘ್ರವಾಗಿ ಆರಂಭಿಸಲು ಅಗತ್ಯ ಕ್ರಮಕೈಗೊಳ್ಳಲಾಗುವುದೆಂದು ವಿಧಾನಸಭಾಧ್ಯಕ್ಷರಾದ ಯು.ಟಿ.ಖಾದರ್ ಹೇಳಿದರು.

ಮುಡಿಪು ಜೀವನ್ ಮೂರ್ತಿ ಸರ್ವೋದಯ ಮಂಟಪದಲ್ಲಿ ನಡೆದ ಶೂನ್ಯ ಕಸ ನಿರ್ವಹಣೆ ಸ್ವಚ್ಛ ಮನೆ ಸ್ವಯಂ ಘೋಷಣೆ ಸುಸ್ಥಿರ ಸ್ವಚ್ಛತೆ ಸುಸ್ಥಿರ ಅಭಿವೃದ್ಧಿ ಸಂವಾದಕ್ಕೆ ಚಾಲನೆ ನೀಡಿ ಕೆಎ19.20 ಯುನೈಟೆಡ್ ಆಫ್ ರೋಡ್ಸ್ ಮಂಗಳೂರು ವತಿಯಿಂದ ಅಸಹಾಕಯ ಕುಟುಂಬಗಳ ಸಮಗ್ರ ಅಭಿವೃದ್ಧಿಗೆ ನೀಡಲಾದ ಒಂದು ಲಕ್ಷ ಇಪ್ಪತ್ತೈದು ಸಾವಿರ ಮೊತ್ತದ ಶೈಕ್ಷಣಿಕ, ಆರೋಗ್ಯ, ಸ್ವ ಉದ್ಯೋಗ, ಸೋಲಾರ್ ಸೌಲಭ್ಯಗಳನ್ನು ವಿತರಿಸಿ ಮಾತನಾಡಿದರು.

ರೋಗ ಮುಕ್ತ ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ಪ್ಲಾಸ್ಟಿಕ್ ಮಾಲಿನ್ಯ ಮುಕ್ತ ಸ್ವಚ್ಛ ಪರಿಸರ ಅಗತ್ಯವಾಗಿದ್ದು, ಈ ದಿಸೆಯಲ್ಲಿ ಸರಕಾರ ಸಮಾಜ ಹಾಗೂ ಸಂಘಸಂಸ್ಥೆಗಳು ಒಂದಾಗಿ ಶ್ರಮಿಸುವುದು ಅಗತ್ಯ ಎಂದರು.

ಸ್ವಚ್ಛತೆಗಾಗಿ ನಿರಂತರವಾಗಿ ಶ್ರಮಿಸುತ್ತಿರುವ ಜನ ಶಿಕ್ಷಣ ಟ್ರಸ್ಟ್ ಹಾಗು ಉಳ್ಳಾಲ ಪುತ್ತೂರು, ಮಂಗಳೂರು ತಾಲೂಕಿನ 11 ಕುಟುಂಬಗಳಿಗೆ ನೆರವಾದ ಕೆಎ19.20 ಯುನೈಟೆಡ್ ಆಫ್ ರೋಡ್ಸ್ ಮಂಗಳೂರು ತಂಡದ ಸದಸ್ಯರ ಸೇವಾ ಕಾರ್ಯವನ್ನು ಶ್ಲಾಘಿಸಿದರು.

ಮಂಗಳೂರು ವಿವಿ ಕುಲಪತಿಗಳಾದ ಪ್ರೋ.ಪಿ.ಎಲ್.ಧರ್ಮ, ಪಿಎ ಕಾಲೇಜು ಪ್ರಾಧ್ಯಾಪಕ ಡಾ.ಸಿ.ವಿ ಪೂಜಾರ್ ಅರಿವು ಮೂಡಿಸಿದರು. ಯುನೈಟೆಡ್ ಆಫ್ ರೋಡ್ಸ್ ಅಧ್ಯಕ್ಷ ಅವಿನಾಶ್ ಅಡಪ ನಡಿಗುತ್ತು, ನಾಸೀರ್ ನಡುಪದವು, ವಿಜೇಶ್ ನಾಯ್ಕ್ ನಡಿಗುತ್ತು, ಜನ ಜೀವನದ ಗೌರವ ಅಧ್ಯಕ್ಷ ರಮೇಶ ಶೇಣವ, ಅಧ್ಯಕ್ಷ ರಾಧಾಕೃಷ್ಣ ರೈ ಉಮಿಯ, ಮುಡಿಪು ಉತ್ಸವ ಸಮಿತಿಯ ಹೈದರ್ ಕೈರಂಗಳ, ಪ್ರೌಢ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷರಾದ ಇಬ್ರಾಹೀಂ ನಡುಪದವು, ಉಮಾನಾಥ ಕೋಟ್ಯಾನ್, ಜನಿಯ್ಯತುಲ್ ಫಲಾಹ್‌ನ ಅಬ್ದುಲ್ ನಾಸೀರ್, ಅಬ್ದುಲ್ ರಹಿಮಾನ್ ಕೋಡಿಜಾಲ್, ಸೀರಾತಾಮ್, ಪಿಎ ಕಾಲೇಜಿ ಪ್ರೋ.ಪ್ರಶಾಂತ್ ಉಪಸ್ಥಿತರಿದ್ದರು.

# ಪ್ಯಾನಿಕ್ ಬಟನ್ ಸರಿಪಡಿಸದಿದ್ರೆ ಹೋರಾಟ!



**ಮಂಗಳೂರು:** ಪ್ರವಾಸಿ ವಾಹನಗಳಲ್ಲಿ 'ಪ್ಯಾನಿಕ್ ಬಟನ್' ಅಳವಡಿಕೆಯನ್ನು ಕಡ್ಡಾಯಗೊಳಿಸಿರುವ ರಾಜ್ಯ ಸರ್ಕಾರದ ಆದೇಶದ ಹಿಂದೆ ಭಾರಿ ಅವ್ಯವಹಾರ ನಡೆದಿದೆ ಎಂದು ದಕ್ಷಿಣ ಕನ್ನಡ ಜಿಲ್ಲಾ ಟ್ಯಾಕ್ಸಿ ಮತ್ತು ಮ್ಯಾಕ್ಸಿ ಕ್ಯಾಬ್ ಅಸೋಸಿಯೇಷನ್ ಗಂಭೀರ ಆರೋಪ ಮಾಡಿದೆ. ನಗರದ ಖಾಸಗಿ ಹೋಟೆಲ್‌ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಆನಂದ ಕೆ., ಈ ಸಾಧನವು ತಾಂತ್ರಿಕವಾಗಿ ವಿಫಲವಾಗಿದ್ದು, ಕೇವಲ ಹಣ ಮಾಡುವ ದಂಧೆಯಾಗಿ ಮಾರ್ಪಟ್ಟಿದೆ. ಈ ಅವೈಜ್ಞಾನಿಕತೆಯನ್ನು ನಿಲ್ಲಿಸದೇ ಇದ್ದರೆ ಅನಿರ್ದಿಷ್ಟಾವಧಿ ಪ್ರತಿಭಟನೆ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದರು.

ನೆರೆಯ ಕೇರಳ ರಾಜ್ಯದಲ್ಲಿ ಜಿಎಸ್‌ಟಿ ಸೇರಿದಂತೆ ಸುಮಾರು 4,000 ರೂಪಾಯಿಗೆ ಸಿಗುವ ಪ್ಯಾನಿಕ್ ಬಟನ್ ಸಾಧನಕ್ಕೆ ಕರ್ನಾಟಕದಲ್ಲಿ ಅಕ್ರಮವಾಗಿ 13,500 ರಿಂದ 16,000 ರೂಪಾಯಿವರೆಗೆ ವಸೂಲಿ ಮಾಡಲಾಗುತ್ತಿದೆ. ಸಾರಿಗೆ ಇಲಾಖೆಯು ಉಚ್ಚ ನ್ಯಾಯಾಲಯಕ್ಕೆ ಈ ಸಾಧನದ ಬೆಲೆ 8,250 ರೂಪಾಯಿ ಎಂದು ಮಾಹಿತಿ ನೀಡಿದ್ದರೂ, ವಾಸ್ತವದಲ್ಲಿ ಖಾಸಗಿ ಕಂಪನಿಗಳು ದುಪ್ಪಟ್ಟು ಹಣ ಪಡೆಯುತ್ತಿವೆ. ಅಚ್ಚರಿಯ ವಿಷಯವೆಂದರೆ, ಇಷ್ಟು ದೊಡ್ಡ ಮೊತ್ತ ಪಡೆದರೂ ಕಂಪನಿಗಳು ಚಾಲಕರಿಗೆ ಯಾವುದೇ ಅಧಿಕೃತ ಬಿಲ್ ನೀಡಲು ನಿರಾಕರಿಸುತ್ತಿವೆ ಎಂದು ಅವರು ದೂರಿದರು.

ಪ್ರಯಾಣಿಕರ ಸುರಕ್ಷತೆಗಾಗಿ ಈ ಬಟನ್ ಒತ್ತಿದರೆ ಅದು ಕಂಟ್ರೋಲ್ ರೂಮ್‌ಗೆ ಸಂದೇಶ ರವಾನಿಸಬೇಕು. ಆದರೆ ಪ್ರಸ್ತುತ ಅಳವಡಿಸಲಾಗಿರುವ ಸಾಧನಗಳು ?ಡಮ್ಮಿ'ಯಾಗಿದ್ದು, ಬಟನ್ ಒತ್ತಿದರೂ ಯಾವುದೇ ಪ್ರತಿಕ್ರಿಯೆ ಸಿಗುತ್ತಿಲ್ಲ. ತುರ್ತು ಸಂದರ್ಭದಲ್ಲಿ ನೆರವು ನೀಡಬೇಕಾದ ಇಆರ್‌ಎಸ್ (ಇಖಖ) ವ್ಯವಸ್ಥೆಯೂ ಇಲ್ಲದಿರುವುದರಿಂದ ಪ್ರಯಾಣಿಕರಿಗೆ ಇದರಿಂದ ಯಾವುದೇ ಲಾಭವಿಲ್ಲ. ಬಟನ್ ಒತ್ತಿದ ಒಂದು ವಾರದ ನಂತರವೂ ಚಾಲಕರಿಗೆ ಯಾವುದೇ ಕರೆಗಳು ಬರುತ್ತಿಲ್ಲ, ಬಂದರೂ ಅದು ಪ್ರಯಾಣಿಕರಿಗೆ ತಲುಪುತ್ತಿಲ್ಲ. ಪ್ರಯಾಣಿಕರಿಗೂ ಇಂಥದೊಂದು ಬಟನ್ ಇದೆ ಎಂಬ ಮಾಹಿತಿಯೂ ಇಲ್ಲ ಎಂದು ಆನಂದ್ ಆರೋಪಿಸಿದರು.


ಈಗಾಗಲೇ ಸಾಲ ಮಾಡಿ ಪ್ಯಾನಿಕ್ ಬಟನ್ ಅಳವಡಿಸಿಕೊಂಡಿರುವ ಚಾಲಕರಿಗೆ ಈಗ ವಾರ್ಷಿಕ ರಿಚಾರ್ಜ್ ಹೆಸರಿನಲ್ಲಿ ಕಂಪನಿಗಳು ಕಿರುಕುಳ ನೀಡುತ್ತಿವೆ. ಸರ್ಕಾರ ನಿಗದಿಪಡಿಸಿದ 1,800 ರೂಪಾಯಿ ಬದಲಿಗೆ 3,800 ರೂಪಾಯಿ ನೀಡುವಂತೆ ಒತ್ತಾಯಿಸಲಾಗುತ್ತಿದೆ. ರಿಚಾರ್ಜ್ ಮಾಡದ ವಾಹನಗಳ ಎಫ್‌ಸಿ (ಈಅ) ಅನ್ನು ಆರ್‌ಟಿಒ ಅಧಿಕಾರಿಗಳು ತಡೆಹಿಡಿಯುತ್ತಿರುವುದು ಚಾಲಕರನ್ನು ಸಂಕಷ್ಟಕ್ಕೆ ದೂಡಿದೆ. ನಿರ್ಭಯಾ ಪ್ರಕರಣ ನಡೆದಿದ್ದು ಬಸ್ಸಿನಲ್ಲಿ ಆಗಿದ್ದರೂ, ಅದನ್ನು ಕೇವಲ ಟ್ಯಾಕ್ಸಿ ಮತ್ತು ಕ್ಯಾಬ್‌ಗಳಿಗೆ ಸೀಮಿತಗೊಳಿಸಿರುವುದು ವಿರೋಧಾಭಾಸ ಎಂದು ಅವರು ಅಭಿಪ್ರಾಯಪಟ್ಟರು.

ಈ ಬಗ್ಗೆ ಅಧಿವೇಶನದಲ್ಲಿ ಕಾರ್ಕಳದ ಶಾಸಕ ಸುನಿಲ್ ಕುಮಾರ್ ಹಾಗೂ ಎಂಎಲ್‌ಸಿ ಐವನ್ ಡಿಸೋಜಾ ಧ್ವನಿ ಎತ್ತಿದ್ದರೂ ಸರ್ಕಾರದಿಂದ ಸ್ಪಷ್ಟ ಉತ್ತರ ಸಿಕ್ಕಿಲ್ಲ. ಈ ಅವೈಜ್ಞಾನಿಕ ಪದ್ಧತಿಯನ್ನು ಕೂಡಲೇ ನಿಲ್ಲಿಸದಿದ್ದರೆ ಮಂಗಳೂರು ಮತ್ತು ಉಡುಪಿಯ ಸಮಾನ ಮನಸ್ಕ ಸಂಘಟನೆಗಳ ಜೊತೆಗೂಡಿ ಅನಿರ್ದಿಷ್ಟಾವಧಿ ಮುಷ್ಕರ ನಡೆಸುವುದಾಗಿ ಸಂಘ ಎಚ್ಚರಿಸಿದೆ.

ಪತ್ರಿಕಾಗೋಷ್ಠಿಯಲ್ಲಿ ಉಪಾಧ್ಯಕ್ಷ ಹರೀಶ್ ಶೆಟ್ಟಿ ಕುತ್ತಾರ್, ಕಾರ್ಯದರ್ಶಿ ರಾಜೇಶ್, ನಾಗೇಶ್ ಮಿತ್ತಡ್ಕ, ಖಜಾಂಜಿ ಸುರೇಶ್ ಸಲ್ಯಾನ್ ಮಾಜಿ ಪದಾಧಿಕಾರಿ ಶುಭಕರ ಶೆಟ್ಟಿ ಹಾಗೂ ಉದಯ ಕುಮಾರ್ ಉಪಸ್ಥಿತರಿದ್ದರು.

# ಶಾರದಾ ಪದವಿ ಪೂರ್ವ ಕಾಲೇಜಿಗೆ 14 ರ‍್ಯಾಂಕ್





59 ವಿದ್ಯಾರ್ಥಿಗಳು ಸಂಸ್ಕೃತದಲ್ಲಿ 100 ಪೂರ್ಣ ಅಂಕಗಳನ್ನು ಪಡೆದಿದ್ದಾರೆ.

**ಮಂಗಳೂರು:** 2025-26ನೇ ಸಾಲಿನ ಕರ್ನಾಟಕಶಾಲಾಶಿಕ್ಷಣ ಇಲಾಖೆ ನಡೆಸಿದ ದ್ವಿತೀಯ ಪಿ.ಯು.ಸಿ.ಪರೀಕ್ಷೆ-1ರ ಫಲಿತಾಂಶ ಪ್ರಕಟಗೊಂಡಿದ್ದು, ಮಂಗಳೂರಿನ ಶಾರದಾ ಪದವಿಪೂರ್ವ (ಕೊಡಿಯಲ್‌ಬೈಲ್ & ತಲಪಾಡಿ) ಕಾಲೇಜಿನ ವಿಜ್ಞಾನ ವಿಭಾಗದ ವಿದ್ಯಾರ್ಥಿನಿ ಕು। ವೈಭವಿ ಎಸ್. ಕರ್ಕೇರಾ ಅವರು 600ರಲ್ಲಿ 598 ಅಂಕಗಳನ್ನು ಗಳಿಸಿ ರಾಜ್ಯಕ್ಕೆ ದ್ವಿತೀಯ ರ‍್ಯಾಂಕ್ ಪಡೆದಿದ್ದಾರೆ.

ವಾಣಿಜ್ಯ ವಿಭಾಗದಲ್ಲಿ ಕು।ಗಾಯತ್ರಿ ಅವರು 600ರಲ್ಲಿ 596 ಅಂಕಗಳನ್ನು ಪಡೆದು ರಾಜ್ಯಕ್ಕೆ ಐದನೇ ರ‍್ಯಾಂಕ್ ಪಡೆದಿದ್ದಾರೆ. ವಿಜ್ಞಾನ ವಿಭಾಗದಲ್ಲಿ ಕು। ರಚನಾರಾಘವೇಂದ್ರ (596), ಕು। ಧನ್ಯತಾ (594), ಕು। ತನ್ವಿ ಬಿ. (593), ಕು। ಶ್ರೇಯಾ ಬಳ್ಳಾಲ್ (592), ಕು। ಮಹಾಲಕ್ಷ್ಮಿ ಜಿ. ಶೆಟ್ಟಿ (591), ಕು। ರಿಶಿಕಾ ಕೆ.ಕನಿಲಾ (590), ಕು। ವೈಷ್ಣವಿ ಎಸ್, ಕರ್ಕೇರಾ (590), ಪಿ.ಎಸ್. ಆಯುಷ್ (590) ಅವರು ರಾಜ್ಯಕ್ಕೆ ಹತ್ತರೊಳಗಿನ ರ‍್ಯಾಂಕುಗಳನ್ನು ಪಡೆದಿದ್ದಾರೆ.

ವಾಣಿಜ್ಯ ವಿಭಾಗದಲ್ಲಿ ಕು। ಮೇಧಾ ಜಿ. ಭಟ್ (595), ಕಿಶನ್ ಶೆಟ್ಟಿಗಾರ್ (593), ಕು। ನೇಹಾಶ್ರೀ ಟಿ. ಎ. (593), ಕು। ವಿ.ಎಸ್. ಪೂರ್ವಿಕಾ (590) ಅವರು ಉತ್ತಮ ಅಂಕಗಳನ್ನು ಪಡೆದು ರಾಜ್ಯದಲ್ಲಿ ಹತ್ತರೊಳಗಿನ ರ‍್ಯಾಂಕ್‌ಗಳನ್ನುಪಡೆದಿದ್ದಾರೆ.

59 ವಿದ್ಯಾರ್ಥಿಗಳು ಸಂಸ್ಕೃತದಲ್ಲಿ 100 ಪೂರ್ಣ ಅಂಕಗಳನ್ನು ಪಡೆದಿದ್ದಾರೆ. ಇವರ ಅತ್ಯುತ್ತಮ ಸಾಧನೆಗೆ ಶಾರದಾ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷರಾದ ಡಾ। ಎಂ.ಬಿ. ಪುರಾಣಿಕ್, ನಿರ್ದೇಶಕರಾದ ಸಮೀರ್ ಪುರಾಣಿಕ್, ಆಡಳಿತ ಮಂಡಳಿಯ ಎಲ್ಲಾ ಪದಾಧಿಕಾರಿಗಳು ಹಾಗೂ ಪ್ರಾಂಶುಪಾಲರುಗಳು ಶಿಕ್ಷಕ ಮತ್ತು ಶಿಕ್ಷಕೇತರ ಸಿಬ್ಬಂದಿ ವಿದ್ಯಾರ್ಥಿಗಳನ್ನು ಅಭಿನಂದಿಸಿದರು.





ತಲಪಾಡಿ ಶಾರದಾ ಕಾಲೇಜಿನಿಂದ ವಾಣಿಜ್ಯ ಮತ್ತು ನಿರ್ವಹಣಾ ಸಂಘ ಮತ್ತು ಆಂತರಿಕ ಗುಣಮಟ್ಟದ ಭರವಸೆ ಕೋಶ ವತಿಯಿಂದ ವಿದ್ಯಾರ್ಥಿಗಳ ಪ್ರಾಯೋಗಿಕ ಜ್ಞಾನವನ್ನು ವೃದ್ಧಿಸಲು ಚೌಗುಲೆ ಶಿಪ್ ಯಾರ್ಡ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಕೈಗಾರಿಕಾ ಭೇಟಿಯನ್ನು ಮಾಡಲಾಯಿತು. ಒಟ್ಟು 30 ವಿದ್ಯಾರ್ಥಿಗಳು ಭಾಗವಹಿಸಿದ್ದರು, ವಿದ್ಯಾರ್ಥಿಗಳಿಗೆ ಕೈಗಾರಿಕಾ ಕ್ಷೇತ್ರದ ನೈಜ್ಯ ಪರಿಸ್ಥಿತಿಗಳನ್ನು ಪರಿಚಯಿಸುವುದು ಹಾಗೂ ತಂತ್ರಜ್ಞಾನದ ಬಗ್ಗೆ ಉತ್ತಮ ಮಾಹಿತಿಯನ್ನು ಪಡೆಯುವ ಅವಕಾಶ ಕಲ್ಪಿಸಲಾಯಿತು. ಭೇಟಿಯ ವೇಳೆ ವಿದ್ಯಾರ್ಥಿಗಳಿಗೆ ಶಿಪ್ ಯಾರ್ಡ್ ನ ಕಾರ್ಯವಿಧಾನ ಉತ್ಪಾದನಾ ಪ್ರಕ್ರಿಯೆಗಳು, ಲಾಜಿಸ್ಟಿಕ್ ನಿರ್ವಹಣೆ, ಮತ್ತು ಸುರಕ್ಷತಾ ಕ್ರಮಗಳ ಬಗ್ಗೆ ವಿವರವಾದ ಮಾಹಿತಿಯನ್ನು ನೀಡಲಾಯಿತು. ವಿದ್ಯಾರ್ಥಿಗಳೊಂದಿಗೆ ಉಪನ್ಯಾಸಕ ವೃಂದದವರು ಜೊತೆಗಿದ್ದು ಮಾಹಿತಿಯನ್ನು ತಿಳಿಸಿಕೊಟ್ಟರು.

# ನೆಹರು ಚಿಂತನ ಕೇಂದ್ರದ ವತಿಯಿಂದ ಸರ್ಕಾರಿ ಶಾಲೆಗಳಲ್ಲಿ ಬೇಸಿಗೆ ಶಿಬಿರ



**ಕೊಣಾಜೆ:** ಮಂಗಳೂರು ವಿಶ್ವವಿದ್ಯಾನಿಲಯದ ನೆಹರು ಚಿಂತನ ಕೇಂದ್ರದ ವತಿಯಿಂದ ಮಂಗಳೂರು ವಿಶ್ವವಿದ್ಯಾನಿಲಯದ ಸುತ್ತಮುತ್ತಲಿನ ಗ್ರಾಮೀಣ ಪ್ರದೇಶಗಳ ಸರಕಾರಿ ಶಾಲೆಗಳಲ್ಲಿ ಇತ್ತೀಚೆಗೆ ಉಚಿತ ಬೇಸಿಗೆ ಶಿಬಿರವನ್ನು ಆಯೋಜಿಸಿತು. ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ವಿಭಾಗಗಳ ಸಹಯೋಗದಲ್ಲಿ ಈ ಶಿಬಿರದಲ್ಲಿ ಪ್ರತಿ ಶಾಲೆಗೆ ಸ್ನಾತಕೋತ್ತರ ವಿದ್ಯಾರ್ಥಿಗಳ ತಂಡವು ಎರಡು ದಿನಗಳ ಕಾಲ ಭೇಟಿ ನೀಡಿ ವಿವಿಧ ಚಟುವಟಿಕೆಗಳನ್ನು ನಡೆಸಿತು. ಈ ಶಿಬಿರದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ವಿಭಾಗ, ಇಂಗ್ಲಿಷ್ ವಿಭಾಗ, ರಸಾಯನ ಶಾಸ್ತ್ರ ವಿಭಾಗ, ಜೀವ ವಿಜ್ಞಾನ ವಿಭಾಗ, ಇತಿಹಾಸ ವಿಭಾಗ ಮತ್ತು ಗಣಿತಶಾಸ್ತ್ರ ವಿಭಾಗಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು . ಚಿತ್ರಕಲೆ, ಹಸ್ತಕಲೆ, ರಂಗೋಲಿ, ರಂಗ ತರಬೇತಿ, ಸಂಗೀತ, ನೃತ್ಯ, ವಿಜ್ಞಾನ ಮಾದರಿ ಪ್ರದರ್ಶನ, ಕೌಶಲ್ಯ ಅಭಿವೃದ್ಧಿ ಚಟುವಟಿಕೆಗಳು, ಸಾಂಪ್ರದಾಯಿಕ ಆಟಗಳು ಹಾಗೂ ಮನರಂಜನಾ ಕಾರ್ಯಕ್ರಮಗಳು ಮಕ್ಕಳಲ್ಲಿ ಹೊಸ ಉತ್ಸಾಹ ಮತ್ತು ಆತ್ಮವಿಶ್ವಾಸವನ್ನು ಮೂಡಿಸಿದವು. ಏಕಾಗ್ರತೆಯನ್ನು ಹೆಚ್ಚಿಸುವ ಆಟಗಳು ಮತ್ತು ಚಟುವಟಿಕೆಗಳು ಮಕ್ಕಳ ಮನಸ್ಸನ್ನು ಆಕರ್ಷಿಸಿತು. ಈ ಶಿಬಿರವನ್ನು ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಶಾಲೆಗಳಾದ ಕೊಣಾಜೆ, ದೇರಳಕಟ್ಟೆ, ಉರುಮನೆ, ಇನೋಳಿ, ರಾಜಗುಡ್ಡೆ, ನ್ಯೂಪಡ್ಪು ಸರಕಾರಿ ಪ್ರೌಢಶಾಲೆ ಹಾಗೂ ಶ್ರೀ ರಾಮಕೃಷ್ಣ ಪ್ರೌಢಶಾಲೆ ಹರೇಕಳದಲ್ಲಿ ನಡೆಸಲಾಯಿತು. ನೆಹರು ಚಿಂತನ ಕೇಂದ್ರದ ನಿರ್ದೇಶಕರಾದ ಪ್ರೊ. ಪ್ರಶಾಂತ ನಾಯ್ಕ್, ಡಾ.ನಯನ ಕೃಷ್ಣಾಪುರ, ಸಂಧ್ಯಾ ಅವರು ಭಾಗವಹಿಸಿದ್ದರು.

# ತೊಕ್ಕೊಟ್ಟು ಅನು ಮೊಬೈಲ್ಸ್ ಗ್ರಾಹಕರ ಹೃದಯ ಗೆದ್ದ ಜನಸ್ನೇಹಿ ಸಂಸ್ಥೆ




**ತೊಕ್ಕೊಟ್ಟು :** ಇಂದಿನ ಆಧುನಿಕ ಯುಗದಲ್ಲಿ ಮೊಬೈಲ್ ಫೋನ್ ಕೇವಲ ಸಂವಹನ ಸಾಧನವಾಗಿಲ್ಲ, ಅದು ನಮ್ಮ ಜೀವನದ ಅವಿಭಾಜ್ಯ ಅಂಗವಾಗಿದೆ. ಕುಟುಂಬದ ನೆನಪುಗಳು, ಸ್ನೇಹಿತರ ಸಂಪರ್ಕ, ಜೀವನದ ಪ್ರಮುಖ ಕ್ಷಣಗಳನ್ನು ಸಂಗ್ರಹಿಸುವ ಸಾಧನವೇ ಮೊಬೈಲ್.

ಈ ಹಿನ್ನೆಲೆದಲ್ಲಿ, ತೊಕ್ಕೊಟ್ಟು ಭಾಗದಲ್ಲಿ ದಶಕಗಳಿಂದ ಕಾರ್ಯನಿರ್ವಹಿಸುತ್ತಿರುವ ಅನು ಮೊಬೈಲ್ಸ್ ಗ್ರಾಹಕರೊಂದಿಗೆ ಭಾವನಾತ್ಮಕ ಬಂಧವನ್ನು ನಿರ್ಮಿಸಿಕೊಂಡಿರುವ ಜನಸ್ನೇಹಿ ಸಂಸ್ಥೆಯಾಗಿ ಹೊರಹೊಮ್ಮಿದೆ.

ಸಂಸ್ಥೆಯ ಮಾಲೀಕರು ಸೌಮ್ಯ ಸ್ವಭಾವದವರಾಗಿದ್ದು, ಧಾರ್ಮಿಕ, ಸಾಮಾಜಿಕ ಹಾಗೂ ಕ್ರೀಡಾ ಕ್ಷೇತ್ರಗಳಲ್ಲಿ ಯಾವುದೇ ಪ್ರಚಾರ ಬಯಸದೆ ಮೌನವಾಗಿ ಸಹಕರಿಸುತ್ತಾ ಬಂದಿರುವುದು ವಿಶೇಷವಾಗಿದೆ. ಈ ಮಾನವೀಯ ಮೌಲ್ಯಗಳು ಸಂಸ್ಥೆಯ ಮೇಲಿನ ಜನರ ವಿಶ್ವಾಸವನ್ನು ಮತ್ತಷ್ಟು ಗಟ್ಟಿಗೊಳಿಸಿವೆ.

ಇಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಯೂ ಅತ್ಯುತ್ತಮ ಕಾರ್ಯಕ್ಷಮತೆಯನ್ನು ಹೊಂದಿದ್ದು, ಗ್ರಾಹಕರ ಅಗತ್ಯಗಳನ್ನು ಮನಗಂಡು ಸ್ನೇಹಪೂರ್ಣವಾಗಿ ಸೇವೆ ಸಲ್ಲಿಸುತ್ತಾರೆ. ಮೊಬೈಲ್ ಮಾರಾಟ ಮಾತ್ರವಲ್ಲದೆ, ಎಲ್ಲಾ ರೀತಿಯ ಮೊಬೈಲ್ ಸರ್ವಿಸ್ ಸೌಲಭ್ಯಗಳನ್ನು ಒದಗಿಸಲಾಗುತ್ತಿದ್ದು, ಆಧುನಿಕ ಶೈಲಿಯ ಮೊಬೈಲ್‌ಗಳ ಕುರಿತು ಗ್ರಾಹಕರಿಗೆ ಸಮಗ್ರ ಮಾಹಿತಿ ನೀಡಲಾಗುತ್ತದೆ.ಗ್ರಾಹಕರ ಅಗತ್ಯ, ಬಜೆಟ್ ಹಾಗೂ ಉಪಯೋಗವನ್ನು ಗಮನದಲ್ಲಿಟ್ಟುಕೊಂಡು ಅವರಿಗೆ ಸೂಕ್ತವಾದ ಮೊಬೈಲ್ ಆಯ್ಕೆ ಮಾಡಲು ಸಹಾಯ ಮಾಡುವ ನೈಪುಣ್ಯತೆ ಈ ಸಂಸ್ಥೆಯ ವಿಶೇಷತೆಯಾಗಿದೆ. ಮೊದಲ ಮೊಬೈಲ್ ಖರೀದಿಸಲು ಬರುವ ವಿದ್ಯಾರ್ಥಿ, ದೂರದಲ್ಲಿರುವ ಕುಟುಂಬದೊಂದಿಗೆ ಸಂಪರ್ಕದಲ್ಲಿರಲು ಬಯಸುವ ತಾಯಿ, ತಮ್ಮ ಪರಿಶ್ರಮದ ಹಣದಿಂದ ಫೋನ್ ಖರೀದಿಸುವ ಯುವಕ ಇವರ ಪ್ರತಿಯೊಬ್ಬರ ಕಥೆಗೂ ಅನು ಮೊಬೈಲ್ಸ್ ಸ್ಪಂದಿಸುತ್ತಿದೆ."ಗ್ರಾಹಕರು ನಮ್ಮ ವ್ಯವಹಾರದ ಭಾಗವಲ್ಲ, ಅವರು ನಮ್ಮ ಕುಟುಂಬದವರು" ಎಂಬ ಮನೋಭಾವದೊಂದಿಗೆ ಕಾರ್ಯನಿರ್ವಹಿಸುತ್ತಿರುವ ಅನು ಮೊಬೈಲ್ಸ್, ಸ್ಥಳೀಯ ಗ್ರಾಹಕರ ವಿಶ್ವಾಸವನ್ನು ಗಳಿಸಿಕೊಂಡಿದೆ. ಗುಣಮಟ್ಟದ ಸೇವೆ, ನಿಷ್ಠೆಯ ಮಾರಾಟ ಹಾಗೂ ಮಾನವೀಯ ಸ್ಪರ್ಶದಿಂದ ಅನು ಮೊಬೈಲ್ಸ್ ಇಂದಿನ ಸ್ಪರ್ಧಾತ್ಮಕ ಮಾರುಕಟ್ಟೆಯಲ್ಲಿ ವಿಭಿನ್ನ ಗುರುತು ಮೂಡಿಸಿಕೊಂಡಿದೆ.

## ಗಾಂಧಿ ಗ್ರಾಮ ಪುರಸ್ಕಾರಕ್ಕೆ ಕಿನ್ಯ ಗ್ರಾಮ ಪಂಚಾಯಿತಿ ಆಯ್ಕೆ

**ಕಿನ್ಯ:** ಉಳ್ಳಾಲ ತಾಲೂಕಿನ ಕಿನ್ಯ ಗ್ರಾಮ ಪಂಚಾಯತ್ 2024–25ನೇ ಸಾಲಿನ ಪ್ರತಿಷ್ಠಿತ ಗಾಂಧಿ ಗ್ರಾಮ ಪುರಸ್ಕಾರಕ್ಕೆ ಆಯ್ಕೆಯಾಗಿದೆ.

ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್‌ನ ಅತ್ಯುತ್ತಮ ಕಾರ್ಯಕ್ಷಮತೆ ಮತ್ತು ಸರ್ಕಾರಿ ಯೋಜನೆಗಳ ಪರಿಣಾಮಕಾರಿ ಅನುಷ್ಠಾನವನ್ನು ಗುರುತಿಸಿ ಈ ಪ್ರಶಸ್ತಿ ನೀಡಲಾಗಿದೆ. ಅಧಿಕೃತ ಪ್ರಕಟಣೆಯ ಪ್ರಕಾರ, ಈ ಸಾಧನೆಯು ಮಾಜಿ ಅಧ್ಯಕ್ಷೆ ಮಾಲಿನಿ, ಉಪಾಧ್ಯಕ್ಷ ಫಾರೂಕ್ ಕಿನ್ಯಾ ಮತ್ತು ಪಂಚಾಯತ್‌ನ ಎಲ್ಲಾ ಸದಸ್ಯರ ನಿರಂತರ ಪ್ರಯತ್ನದ ಫಲಿತಾಂಶವಾಗಿದೆ.

ಪಂಚಾಯತ್ ಅಭಿವೃದ್ಧಿ ಅಧಿಕಾರಿ ತುಳಸಿ ಪಿ, ಕಾರ್ಯದರ್ಶಿ ವಾಣಿಶ್ರೀ, ಸಮರ್ಪಿತ ಸಿಬ್ಬಂದಿ ಮತ್ತು ಸ್ಥಳೀಯ ಗ್ರಾಮಸ್ಥರ ಸಕ್ರಿಯ ಸಹಕಾರವು ಈ ಮನ್ನಣೆಯನ್ನು ಪಡೆಯುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಕಿನ್ಯಾ ಗ್ರಾಮ ಪಂಚಾಯತ್ ಅನ್ನು 'ಗಾಂಧಿ ಗ್ರಾಮ' ಪ್ರಶಸ್ತಿಗೆ ಆಯ್ಕೆ ಮಾಡಿರುವುದನ್ನು ತಾಲ್ಲೂಕಿನ ನಿವಾಸಿಗಳು ವ್ಯಾಪಕವಾಗಿ ಪ್ರಶಂಸಿಸಿದ್ದಾರೆ.

## ಉಚ್ಚಿಲ ಕೋಟೆ ಶ್ರೀದೂಮಾವತಿ ಮತ್ತು ಸಂಕೋಳಿಗೆ ಗುಳಿಗ ದೈವದ ಸೇವಾ ಟ್ರಸ್ಟ್ ಅಧ್ಯಕ್ಷರಾಗಿ ರಾಘವ ಉಚ್ಚಿಲ್ ಆಯ್ಕೆ

**ಉಚ್ಚಿಲ:** ಇಲ್ಲಿನ ಕೋಟೆ ಶ್ರೀ ದೂಮಾವತಿ ಬಂಟ ವೈದ್ಯನಾಥ ಪರಿವಾರ ದೈವಗಳು ಮತ್ತು



ಸಂಕೋಳಿಗೆ ಗುಳಿಗ ದೈವದ ಸೇವಾ ಟ್ರಸ್ಟ್ ಇದರ ಅನುವಂಶಿಕ ಆಡಳಿತ ಮೊಕ್ತೇಸರರಾದ ಉಚ್ಚಿಲತ್ತಾಯ ನಿಲೇಶ್ವರ ಪದ್ಮನಾಭ ತಂತ್ರಿಯವರ ಮಾರ್ಗದರ್ಶನದಂತೆ ಅಧ್ಯಕ್ಷರಾಗಿ ರಾಘವ ಆರ್ ಉಚ್ಚಿಲ್, ಉಪಾಧ್ಯಕ್ಷರಾಗಿ ಅಶೋಕ್ ಉಚ್ಚಿಲ್, ಪ್ರಧಾನಕಾರ್ಯದರ್ಶಿಯಾಗಿ ಮುರಳಿಮೋಹನ್ ಹಾಗೂ ಕೋಶಧಿಕಾರಿಯಾಗಿ ರಘು ಉಚ್ಚಿಲ್ ಆಯ್ಕೆಗೊಂಡಿದ್ದಾರೆ.

## ಡ್ರಗ್ ಮಾರಾಟ ಮಾಡುತ್ತಿದ್ದ ವ್ಯಕ್ತಿ ಪೊಲೀಸರ ವಶಕ್ಕೆ..!

**ಉಳ್ಳಾಲ:** ಬೆಳ್ಮ ದೇರಳಕಟ್ಟೆಯ ಖಾಸಗಿ ಮೆಡಿಕಲ್ ಕಾಲೇಜು ಬಳಿ ಡ್ರಗ್ಸ್ ಮಾರಾಟ ಮಾಡುತ್ತಿದ್ದ ವ್ಯಕ್ತಿಯೋರ್ವನನ್ನು ಕೊಣಾಜೆ ಪೊಲೀಸರು ಬಂಧಿಸಿ ಆತನಿಂದ ಸುಮಾರು ಒಂದು ಲಕ್ಷದ ಆರು ಸಾವಿರ ರೂ.ಮೌಲ್ಯದ ಮಾದಕ ವಸ್ತುವನ್ನು ವಶಪಡಿಸಿಕೊಂಡಿದ್ದಾರೆ. ಬಂಧಿತ



ಆರೋಪಿಯನ್ನು ಕೂಳೂರು ಕಸಬ ಬೆಂಗ್ರೆ ನಿವಾಸಿ ಝಾಕಿರ್ ಹುಸೈನ್ (19) ಎಂದು ಗುರುತಿಸಲಾಗಿದೆ. ಈತ ದೇರಳಕಟ್ಟೆ ಮೆಡಿಕಲ್ ಕಾಲೇಜು ಬಳಿ ಮಾದಕ ವಸ್ತು ಮಾರಾಟ ಮಾಡುತ್ತಿದ್ದಾಗ ಆತನಿಂದ 10.6 ಗ್ರಾಂ ತೂಕದ ಎಂಡಿಎಂಎ, ಮೊಬೈಲ್ ಫೋನ್, ಸಿರಿಂಜ್, ಸಿಗರ್ ಲೈಟ್ ಹಾಗೂ ನಂಬರ್ ಪ್ಲೇಟ್ ಇಲ್ಲದ ಬೈಕ್ ಹಾಗು ಇತರ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಈತನ ವಿರುದ್ಧ ಕೊಣಾಜೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಭರತನಾಟ್ಯ ಕಲಾವಿದ ವಿದ್ವಾನ್ ಶ್ರಾವಣ್ ಅನಾರೋಗ್ಯಕ್ಕೆ ಬಲಿ

↗ 1ನೇ ಪುಟದಿಂದ

ಪರಿಣತಿ ಹೊಂದಿದ್ದರು. ಗುರುಕುಲ ಉತ್ಸವಗಳ ಮೂಲಕ ದೇಶ–ವಿದೇಶಗಳ ಕಲಾವಿದರನ್ನು ಒಟ್ಟುಗೂಡಿಸಿ ನೃತ್ಯ ಪರಂಪರೆಯನ್ನು ಉಳಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದರು. ನಾಟ್ಯ ಪ್ರವೀಣ ಪ್ರಶಸ್ತಿ, ಜನಪದ ಬಂಧು ಪ್ರಶಸ್ತಿ,ನೃತ್ಯ ಶಿರೋಮಣಿ ಪ್ರಶಸ್ತಿ,ನೃತ್ಯ ಪ್ರಿಯ ಪ್ರಶಸ್ತಿ,ದುರ್ಗಾ ರತ್ನ ಪುರಸ್ಕಾರ,ಗಿರ್ನಾರ್ ರತ್ನ ಪುರಸ್ಕಾರ, ಲಾಸ್ಯ ನೃತ್ಯ ನಟೇಶ ಪುರಸ್ಕಾರ (ಪದ್ಮಭೂಷಣ ನಾಟ್ಯಾಚಾರ್ಯ ಶ್ರೀ ಧನಂಜಯ್ ಅವರಿಂದ), ದಕ್ಷಿಣ ಕನ್ನಡ ಜಿಲ್ಲಾಡಳಿತದ 2018ರ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ,ಅಂತರಾಷ್ಟ್ರೀಯ ಆರ್ಯಭಟ ಪ್ರಶಸ್ತಿ ಅವರಿಗೆ ಲಭಿಸಿದ ಪ್ರಮುಖ ಪ್ರಶಸ್ತಿಗಳಾಗಿವೆ. ಶ್ರಾವಣ್ ಉಳ್ಳಾಲರ ಅಕಾಲಿಕ ನಿಧನಕ್ಕೆ ಕಲಾವಿದರು, ಶಿಷ್ಯರು ಹಾಗೂ ನೃತ್ಯಾಭಿಮಾನಿಗಳು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ಮೃತ ಶ್ರಾವಣ್ ಅವರು ಪತ್ನಿ ಶೈನಾ ಶ್ರಾವಣ್ ಮತ್ತು ಪುಟ್ಟ ಹೆಣ್ಣು ಮಗಳು ಮಂತ್ರ ಎಸ್ ಉಳ್ಳಾಲ್ ಅವರನ್ನು ಅಗಲಿದ್ದಾರೆ.

# ಎ.25ರಂದು ಉಚಿತ ರೇಬಿಸ್ ಲಸಿಕಾ ಶಿಬಿರ

**ಮಡ್ಯಾರ್:** ವಿಶ್ವ ಪಶುವೈದ್ಯರ ದಿನಾಚರಣೆ ಪ್ರಯುಕ್ತ ಕರ್ನಾಟಕ ಪಶುವೈದ್ಯರ ಸಂಘ(ರಿ.) ದಕ್ಷಿಣ ಜಿಲ್ಲಾ ಘಟಕ ಮತ್ತು ಅಸ್ತ್ರ ಗ್ರೂಪ್ ಹಾಗೂ ಫೀಡ್ ಆನಿಮಲ್ ಸೇವ್ ಆನಿಮಲ್ ಟ್ರಸ್ಟ್ ನಂದಾದೀಪ ಸೇವಾ ಬಳಗ ಮಡ್ಯಾರ್ ಕೋ–ಟೆಕಾರ್ ಮಂಗಳೂರು ಜಂಟಿ ಆಶ್ರಯದಲ್ಲಿ ಎ.25ರಂದು ಬೆಳಗ್ಗೆ 9ರಿಂದ ಮಧ್ಯಾಹ್ನ 12ಗಂಟೆವರೆಗೆ ಮಡ್ಯಾರ್ ಶಾಸ್ತರ ಅಶ್ವಥ ಕಟ್ಟೆಯ ಮುಂಭಾಗ ಉಚಿತ ರೇಬಿಸ್ ಲಸಿಕಾ ಶಿಬಿರವನ್ನು ಆಯೋಜಿಸಲಾಗಿದೆ.




ಸಾಕು ಪ್ರಾಣಿ ನಾಯಿ ಮತ್ತು ಬೆಕ್ಕುಗಳು ಹಾಗೂ ಬೀದಿ ನಾಯಿಗಳಿಗೆ ಉಚಿತವಾಗಿ ರೇಬಿಸ್ ಲಸಿಕೆ ನೀಡಲಾಗುತ್ತದೆ.

ರೇಬೀಸ್ ಎಂಬುದು ಮಾನವ ಮತ್ತು ಪ್ರಾಣಿಗಳಿಗೆ ಅಪಾಯಕಾರಿಯಾದ ವೈರಸ್ ಸೋಂಕು ಆಗಿದ್ದು, ಮುಂಜಾಗ್ರತಾ ಕ್ರಮವಾಗಿ ಲಸಿಕೆ ನೀಡುವುದು ಅತ್ಯಂತ ಅಗತ್ಯವಾಗಿದೆ. ಈ ಹಿನ್ನಲೆಯಲ್ಲಿ ಸಾರ್ವಜನಿಕರು ತಮ್ಮ ಸಾಕು ಪ್ರಾಣಿಗಳಿಗೆ ಸಮಯಕ್ಕೆ ಸರಿಯಾಗಿ ಲಸಿಕೆ ಕೊಡಿಸುವುದು ಅವಶ್ಯಕವಾಗಿದೆ

ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಈ ಶಿಬಿರದ ಪ್ರಯೋಜನಗಳನ್ನು ಪಡೆದುಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ ಅನು ಸುಪರ್ಣ: 9902299360, ಹರೀಶ್ ರಾವ್: 8123104592, ಶೋಭಾ ಗಟ್ಟಿ: 8123345514, ಜಯಂತ್: 8217273863

# ಯಶಸ್ವಿ ಚಿಕಿತ್ಸೆ ನೀಡಿ ಉತ್ತಮ ಆಸ್ಪತ್ರೆ ಎಂಬ ಹೆಗ್ಗಳಿಕೆಗೆ ಪಾತ್ರವಾದ ಕೆಎಸ್ ಹೆಗ್ಡೆ ಆಸ್ಪತ್ರೆ

**ದೇರಳಕಟ್ಟೆ:** ಇಲ್ಲಿನ ಕೆಎಸ್ ಹೆಗ್ಡೆ ಆಸ್ಪತ್ರೆ ಮತ್ತೊಮ್ಮೆ ತನ್ನ ವೈದ್ಯಕೀಯ ಸಾಮರ್ಥ್ಯವನ್ನು ಸಾಬೀತುಪಡಿಸಿದೆ. ಗಂಭೀರ ಖಾಯಿಲೆಗಳಿಂದ ಬಳಲುತ್ತಿದ್ದ ಹಲವಾರು ರೋಗಿಗಳಿಗೆ ಯಶಸ್ವಿ ಚಿಕಿತ್ಸೆ ನೀಡಿ ಉತ್ತಮ ಆಸ್ಪತ್ರೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಈ ಆಸ್ಪತ್ರೆಯಲ್ಲಿ ಇದೀಗ ಶ್ವಾಸಕೋಶ ಸಂಬಂಧಿತ ಗಂಭೀರ ಖಾಯಿಲೆಯಿಂದ ಬಳಲುತ್ತಿದ್ದ ಯುವತಿಯೋರ್ವಳಿಗೆ ಯಾವುದೇ ಶಸ್ತ್ರಚಿಕಿತ್ಸೆಯಿಲ್ಲದೆ ಯಶಸ್ವಿ ಚಿಕಿತ್ಸೆ ನೀಡಲಾಗಿದೆ. ಇದು ವೈದ್ಯಕೀಯ ಕ್ಷೇತ್ರದಲ್ಲಿ ಮಹತ್ವದ ಸಾಧನೆಯಾಗಿ ಗುರುತಿಸಿಕೊಂಡಿದೆ. ಕಾರ್ಕಳದ 21 ವರ್ಷದ ಸಲ್ಮಾ ಎಂಬ ಯುವತಿ ಉಸಿರಾಟದ ತೊಂದರೆಯಿಂದ ಬಳಲುತ್ತಿದ್ದರು. ಮಂಗಳೂರಿನ ಆಸ್ಪತ್ರೆವೊಂದರಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ವೇಳೆ, ಒಂದು ಶ್ವಾಸಕೋಶವನ್ನು ತೆಗೆಯುವ ಶಸ್ತ್ರಚಿಕಿತ್ಸೆ



ಅಗತ್ಯವೆಂದು ವೈದ್ಯರು ಸಲಹೆ ನೀಡಿದ್ದರು. ಇದರಿಂದ ಆತಂಕಗೊಂಡ ಕುಟುಂಬಸ್ಥರು ಸ್ನೇಹಿತರ ಸಲಹೆ ಮೇರೆಗೆ ಕೆಎಸ್ ಹೆಗ್ಡೆ ಆಸ್ಪತ್ರೆಗೆ ದಾಖಲಿಸಿದರು. ಅಲ್ಲಿ ಅಸಿಸ್ಟೆಂಟ್ ಪ್ರೊಫೆಸರ್ ಡಾ. ಆದರ್ಶ್ ಶೆಟ್ಟಿ ಅವರು ಯುವತಿಗೆ ಸಮಗ್ರ ಪರೀಕ್ಷೆ ನಡೆಸಿದ್ರು ಎಕ್ಸ್–ರೇನಲ್ಲಿ ಎಡಭಾಗದ ಶ್ವಾಸಕೋಶದಲ್ಲಿ ಗಾಳಿ ತುಂಬಿಕೊಂಡಿರುವುದು ಪತ್ತೆಯಾಯಿತು. ಇದರಿಂದಲೇ ಉಸಿರಾಟದ ಸಮಸ್ಯೆ ಉಂಟಾಗಿತ್ತು. ತಕ್ಷಣವೇ ಅಗತ್ಯ ಚಿಕಿತ್ಸೆಯನ್ನು ನೀಡಿದ ಡಾ. ಆದರ್ಶ್ ಶೆಟ್ಟಿ ಹಾಗು ಆಸ್ಪತ್ರೆಯ ಪರಿಣಿತ ವೈದ್ಯರ ತಂಡ ಸೂಕ್ತ ಚಿಕಿತ್ಸಾ ವಿಧಾನಗಳನ್ನು ಅನುಸರಿಸಿ, ಅವರು ಯಾವುದೇ ಶಸ್ತ್ರಚಿಕಿತ್ಸೆಯಿಲ್ಲದೇ ಯುವತಿಯನ್ನು ಗುಣಮುಖಗೊಳಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಈ ಬಗ್ಗೆ ಉಳ್ಳಾಲವಾಣಿ ಜೊತೆ ಸ್ವತಃ ಚಿಕಿತ್ಸೆ ನೀಡಿದ ವೈದ್ಯರು ಮಾತನಾಡಿ, ಸರಿಯಾದ ಸಮಯದಲ್ಲಿ ಸರಿಯಾದ ಚಿಕಿತ್ಸೆ ನೀಡಿದ ಪರಿಣಾಮ ಉತ್ತಮ ಫಲಿತಾಂಶ ದೊರೆತಿದೆ ಎಂದು ತಿಳಿಸಿದ್ರು. ಇನ್ನು ಕುಟುಂಬಸ್ಥರು ವೈದ್ಯರ ಸೇವೆಯನ್ನು ಶ್ಲಾಘಿಸಿದ್ದು, ಇಂತಹ ಮಾನವೀಯತೆ ಇರುವ ವೈದ್ಯರು ಎಲ್ಲ ಆಸ್ಪತ್ರೆಗಳಲ್ಲೂ ಇರಬೇಕು. ಬಡವರ ಪಾಲಿಗೆ ಡಾ. ಆದರ್ಶ್ ಶೆಟ್ಟಿ ಸಂಜೀವಿನಿಯಂತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಈ ಸಂದರ್ಭ ಡಾ.ಗಿರಿಧರ್, ಡಾ. ನಂದಕಿಶೋರ್, ಡಾ.ಚಂದ್ರಮೌಳಿ ಉಪಸ್ಥಿತರಿದ್ದರು.

# ಬ್ಲಡ್ ಡೋನರ್ಸ್ ಮಂಗಳೂರು ಸಂಸ್ಥೆಯಿಂದ 13ನೇ ವರ್ಷದ ಸವಿನೆನಪಿಗಾಗಿ 13ಕಡೆಗಳಲ್ಲಿ ರಕ್ತದಾನ ಶಿಬಿರ

**ಉಳ್ಳಾಲ:** ಬ್ಲಡ್ ಡೋನರ್ಸ್ ಮಂಗಳೂರು ಸಂಸ್ಥೆಯ ಹದಿಮೂರನೇ ವರ್ಷದ ಅಂಗವಾಗಿ ವಿವಿಧ ಕಡೆಗಳಲ್ಲಿ ಒಟ್ಟು ಹದಿಮೂರು ರಕ್ತದಾನ ಶಿಬಿರಗಳನ್ನು ನಡೆಸುತ್ತಿದ್ದು ರಕ್ತದ ಕೊರತೆಯನ್ನು ನೀಗಿಸಲು ಅಗತ್ಯವಿರುವ ಎಲ್ಲ ವ್ಯವಸ್ಥೆಯನ್ನು ಸಂಸ್ಥೆಯ ತಂಡದಿಂದ ಕೈಗೊಳ್ಳಲಾಗಿದ್ದು

ಕಳೆದ ರಂಝಾನ್ ತಿಂಗಳಲ್ಲಿ ಹಗಲಿನಲ್ಲಿ ರಕ್ತದಾನ ಶಿಬಿರಗಳು ನಡೆಯದ ಪರಿಸ್ಥಿತಿಯಲ್ಲಿಯೂ, ನಮ್ಮ ತಂಡ ರಾತ್ರಿ ಸಮಯದಲ್ಲಿ ರಕ್ತದಾನಿಗಳನ್ನು ನೇರವಾಗಿ ಬ್ಲಡ್ ಬ್ಯಾಂಕ್‌ಗೆ ಕರೆದುಕೊಂಡು ಹೋಗಿ ರಕ್ತದಾನ ಮಾಡಿಸುವ ಮೂಲಕ ಮಾನವೀಯ ಸೇವೆಯನ್ನು ಮುಂದುವರಿಸಿದೆ ಎಂದು ಸಂಸ್ಥೆಯ ಅಧ್ಯಕ್ಷ ನವಾಝ್ ನರಿಂಗಾನ ಹೇಳಿದರು.

ಉಳ್ಳಾಲ ಪ್ರೆಸ್‌ಕ್ಲಬ್‌ನಲ್ಲಿ ಶನಿವಾರ




ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಸಂಸ್ಥೆಯ ವತಿಯಿಂದ ಇದುವರೆಗೆ 550ಕ್ಕೂ ಹೆಚ್ಚು ರಕ್ತದಾನ ಶಿಬಿರಗಳನ್ನು ಯಶಸ್ವಿಯಾಗಿ ಆಯೋಜಿಸಿ 120000ಯೂನಿಟ್ ರಕ್ತ ಸಂಗ್ರಹಣೆ ಮಾಡಿದ್ದೇವೆ. ಆ ಹಿನ್ನೆಲೆಯಲ್ಲಿ ರಕ್ತದಾನ ಶಿಬಿರಗಳನ್ನು ಏರ್ಪಡಿಸಲು ಸಹಕರಿಸಿದ ಎಲ್ಲ ಸಂಘಟನೆಗಳು ಮತ್ತು ಸಂಯೋಜಕರನ್ನು ಗುರುತಿಸಿ ಸನ್ಮಾನಿಸುವುದು ಹಾಗೂ 50ಕ್ಕಿಂತ ಹೆಚ್ಚು ಬಾರಿ ರಕ್ತದಾನ ಮಾಡಿದ ದಾನಿಗಳನ್ನು ಗೌರವಿಸುವುದು ನಮ್ಮ ಮುಖ್ಯ ಉದ್ದೇಶವಾಗಿದೆ ಎಂದರು.

ಅದಾಗಲೇ ಕೊಕ್ಕಡ, ಮಾಡವು, ಚಾರ್ಮಾಡಿಯಲ್ಲಿ ಶಿಬಿರ ನಡೆಸಲಾಗಿದ್ದು ಎ. 05ರಂದು ಮದನಿ ನಗರ, ಬೋಳೂರು, ಅಂಗರಗುಂಡಿ ಹಾಗೂ ಕಳಸದಲ್ಲಿ ಎ. 07ರಂದು ವಿಟ್ಲ, ಎ. 08ರಂದು –ಮಾಚಾರ್, ಎ. 10ರಂದು ದುಬೈ, ಎ. 12ರಂದು ಕುಶಾಲನಗರ ಹಾಗೂ ಹೊನ್ನಾವರದಲ್ಲಿ ನಡೆಯಲಿದೆ.

ಜೂ. 13ರಂದು ನಗರದ ಪುರಭವನದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಐವತ್ತಕ್ಕಿಂತ ಹೆಚ್ಚು ಬಾರಿ ರಕ್ತದಾನ ಮಾಡಿದ ವ್ಯಕ್ತಿಗಳನ್ನು ಗುರುತಿಸಿ "ರಕ್ತ ಯೋಧ ಪ್ರಶಸ್ತಿ" ನೀಡಲು ತೀರ್ಮಾನಿಸಲಾಗಿದೆ. ಅಂತಹ ವ್ಯಕ್ತಿಗಳನ್ನು ಗುರುತಿಸಲು ಈಗಾಗಲೇ ಎಲ್ಲ ಬ್ಲಡ್ ಬ್ಯಾಂಕ್‌ಗಳು ಹಾಗೂ ಸಂಬಂಧಪಟ್ಟ ಸಂಸ್ಥೆಗಳಿಗೆ ಮಾಹಿತಿ ನೀಡಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಉಪಾಧ್ಯಕ್ಷ ಅಶ್ರಫ್ ಸಿ.ಎಂ. ಉಪ್ಪಿನಂಗಡಿ, ಪ್ರಧಾನ ಕಾರ್ಯದರ್ಶಿ ಸಾಹುಲ್ ಹಮೀದ್ ಕಾಶಿಪಟ್ನ, ಶಿಬಿರ ಆಯೋಜಕ ಫರ್ಝಾನ್ ಅಹ್ಮದ್ ಹಾಗೂ ಕಾರ್ಯದರ್ಶಿ ನಿಸಾರ್ ಉಳ್ಳಾಲ ಹಾಗೂ ಸಂಘಟನಾ ಕಾರ್ಯದರ್ಶಿ ಅಬ್ದುಸ್ಸಲಾಂ ಚೆಂಬುಗುಡ್ಡೆ ಉಪಸ್ಥಿತರಿದ್ದರು.

### 'ಸುವರ್ಣ ಕನ್ನಡಿಗ–2026' ಪ್ರಶಸ್ತಿ ಮುಡಿಗೇರಿಸಿದ

## ಸಮಾಜ ಸೇವಕ ಲ| ಅನಿಲ್ ದಾಸ್

**ಬೆಂಗಳೂರು :** ಮಂಗಳೂರು ದಾಸ್ ಪ್ರಮೋಷನ್ಸ್ ಹೋಂ ನರ್ಸಿಂಗ್ ಹೆಲ್ತ್ ಕೇರ್ ಕರ್ನಾಟಕ ಇದರ ಮ್ಯಾನೇಜಿಂಗ್ ಡೈರೆಕ್ಟರ್ ಲಯನ್ ಅನಿಲ್ ದಾಸ್ ಅವರಿಗೆ ಸುವರ್ಣ ಕನ್ನಡಿಗ–2026' ಪ್ರಶಸ್ತಿ ಲಭಿಸಿದೆ. ಕನ್ನಡಪ್ರಭ–ಸುವರ್ಣ ನ್ಯೂಸ್ ವತಿಯಿಂದ ಬೆಂಗಳೂರಿನ ಖಾಸಗಿ ಹೋಟೇಲಿನಲ್ಲಿ ನಡೆದ ಸಮಾರಂಭದಲ್ಲಿ 'ಸುವರ್ಣ ಕನ್ನಡಿಗ–2026' ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಲಯನ್ ಅನಿಲ್ ದಾಸ್ ಹಾಗೂ ಅವರ ಪತ್ನಿ ಆಶಾಲತಾ ಪ್ರಶಸ್ತಿ ಪಡೆದುಕೊಂಡಿದ್ದಾರೆ.

ಈ ಸಂದರ್ಭ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಕಾನೂನು, ಸಂಸದೀಯ ವ್ಯವಹಾರ, ಶಾಸನ ಹಾಗೂ ಪ್ರವಾಸೋದ್ಯಮ



ಸಚಿವ ಎಚ್.ಕೆ.ಪಾಟೀಲ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಅಂಗವಿಕಲರ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್, ಚಿತ್ರನಟ ಅನಿರುದ್ಧ ಜಟ್ಕರ್, ಕನ್ನಡಪ್ರಭ ಏಷಿಯಾನೆಟ್ ಸುವರ್ಣ ನ್ಯೂಸ್ ಸಮೂಹ ಸಂಪಾದಕೀಯ ನಿರ್ದೇಶಕ ರವಿ ಹೆಗಡೆ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಮಗನೊಂದಿಗೆ ಪಿಯುಸಿ

↗ 1ನೇ ಪುಟದಿಂದ

ಮನವರಿಸಿದ ಬಳಿಕ ಅವರ ಉತ್ಸಾಹಕ್ಕೆ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಸಂಪೂರ್ಣ ಬೆಂಬಲ ನೀಡಿದ್ದಾರೆ ಕಳೆದ ನವೆಂಬರ್ ತಿಂಗಳಿಂದ ಸಿದ್ಧತೆ ನಡೆಸಿದ್ದು,ತೊಕ್ಕೊಟ್ಟಿನ ಖಾಸಗಿ ಟ್ಯೂಷನ್ ಸಂಸ್ಥೆಯಲ್ಲಿ ಬೆಳಿಗ್ಗೆ 8 ರಿಂದ 11ರ ವರೆಗೆ ಮತ್ತು ಸಂಜೆ ವೇಳೆ ತರಬೇತಿ ಪಡೆಯುತ್ತಿದ್ದರು.

ಮೋಹನ್ ರಾಜ್ ಅವರ ಪರೀಕ್ಷೆ ಬರೆಯುವ ಉತ್ಸಾಹಕ್ಕೆ ಪತ್ನಿ ಮಮತಾ ಅವರು ಸಂಪೂರ್ಣ ಪ್ರೋತ್ಸಾಹ ನೀಡಿದ್ದರು. ಅರ್ಧದಲ್ಲಿ ಮೊಟಕುಗೊಂಡಿದ್ದ ಪಿಯುಸಿ ಶಿಕ್ಷಣವನ್ನು ಸಂಪೂರ್ಣಗೊಳಿಸುವುದು ಮೋಹನ್ ರಾಜ್ ಅವರ ಕಳೆದ ನಲ್ವತ್ತೆರಡು ವರುಷಗಳ ಕನಸಾಗಿದ್ದು,ಅದನ್ನು ಸಾಕಾರಗೊಳಿಸಿದ್ದಾರೆ.

## ಉಳ್ಳಾಲಬೈಲ್‌ನಲ್ಲಿ ಮಕ್ಕಳಿಗಾಗಿ ವಿಶೇಷ ಸಮರ್ ಕ್ಯಾಂಪ್

**ಉಳ್ಳಾಲ;** ಮಲ್ಲಿಕಾ ಅವರ ನೇತೃತ್ವದ ದಕ್ಷ್ ಪ್ಲೇ ಸ್ಕೂಲ್ ವತಿಯಿಂದ ಉಳ್ಳಾಲ ಬೈಲ್‌ನಲ್ಲಿ ಮಕ್ಕಳಿಗಾಗಿ ವಿಶೇಷ ಸಮರ್ ಕ್ಯಾಂಪ್ ಆಯೋಜಿಸಲಾಗಿದೆ.

ಬೇಸಿಗೆ ರಜಾದಿನಗಳಲ್ಲಿ ಮಕ್ಕಳಿಗೆ ಸೃಜನಾತ್ಮಕ ಹಾಗೂ ಶೈಕ್ಷಣಿಕ ವಾತಾವರಣ ಒದಗಿಸಿ ಅವರ ಪ್ರತಿಭೆ ಮತ್ತು ಕೌಶಲ್ಯಗಳನ್ನು




ಅಭಿವೃದ್ಧಿಪಡಿಸುವ ಉದ್ದೇಶದಿಂದ ಸಮರ್ ಕ್ಯಾಂಪ್ ಆಯೋಜಿಸಲಾಗಿದೆ.

ಮಕ್ಕಳಿಗೆ ಮನರಂಜನೆಯ ಜೊತೆಗೆ ಬುದ್ಧಿವರ್ಧಕ ಚಟುವಟಿಕೆಗಳನ್ನು ಕಲಿಸುವ ವ್ಯವಸ್ಥೆಯೂ ಲಭ್ಯವಿದೆ. ಅದಲ್ಲದೇ ವಾಹನದ ಸೌಲಭ್ಯವೂ ಇದೆ. ಮಕ್ಕಳು ಹೆಚ್ಚು ಸ್ಮಾರ್ಟ್ ಆಗಿ, ಖುಷಿಯಿಂದ ಕಾಲ ಕಳೆಯಲು ಇದು ಉತ್ತಮ ಅವಕಾಶವಾಗಿದ್ದು, ಪೋಷಕರು ಆರಾಮದಾಯಕವಾಗಿ ಮಕ್ಕಳನ್ನು ಈ ಕ್ಯಾಂಪ್‌ಗೆ ಸೇರಿಸಬಹುದಾಗಿದೆ.

ಏಪ್ರಿಲ್, ಮೇ ಎರಡು ತಿಂಗಳ ಕ್ಯಾಂಪಿನಲ್ಲಿ ಚಿತ್ರಕಲೆ, ಹಸ್ತಕಲೆ, ಕರಾಟೆ, ಯೋಗ, ಮೆಹೆಂದಿ, ತಬಲಾ, ವೆಸ್ಟರ್ನ್ ಡ್ಯಾನ್ಸ್ ಸೇರಿದಂತೆ ವಿವಿಧ ಸೃಜನಾತ್ಮಕ ಚಟುವಟಿಕೆಗಳ ಜೊತೆಗೆ ಅಥ್ಲೆಟಿಕ್ಸ್ ಟ್ರೈನಿಂಗ್ ನೀಡಲಾಗುತ್ತದೆ. ಈ ಶಿಬಿರದ ಶುಲ್ಕ 750 ಆಗಿದೆ.

ಇನ್ನು ಇಲ್ಲಿ ಡೇ ಕೇರ್ ಸೌಲಭ್ಯವೂ ಲಭ್ಯವಿದ್ದು, ಹಾಫ್ ಡೇ ಹಾಗೂ ಫುಲ್ ಡೇ ಆಯ್ಕೆಗಳು ಕೂಡ ಇವೆ. ಹೆಚ್ಚಿನ ಮಾಹಿತಿಗಾಗಿ 9113853728 ಸಂಪರ್ಕಿಸಬಹುದಾಗಿದೆ.

## ಹೊಸ ಬಾವಿ ಕೊರೆಯುತ್ತಿದ್ದ ವೇಳೆ ದುರಂತ; ಮೂವತ್ತು ಅಡಿ ಎತ್ತರದಿಂದ ಬಿದ್ದ ಮಣ್ಣು ತುಂಬಿದ ಕಬ್ಬಿಣದ ಬಕೆಟ್!

**ಕುತ್ತಾರು;** ಹೊಸ ಬಾವಿ ಕೊರೆಯುವ ಕಾಮಗಾರಿ ನಡೆಸುತ್ತಿದ್ದ ವೇಳೆ ಕ್ರೇನ್‌ನ ಕೊಕ್ಕೆಯಿಂದ ಬೇರ್ಪಟ್ಟ ಮಣ್ಣು ತುಂಬಿದ್ದ ಕಬ್ಬಿಣದ ಬಕೆಟ್ ಮೂವತ್ತು ಅಡಿ ಎತ್ತರದಿಂದ ತಲೆಯ ಮೇಲೆ ಬಿದ್ದ ಪರಿಣಾಮ ವಲಸೆ ಕಾರ್ಮಿಕನೋರ್ವರು ದಾರುಣವಾಗಿ ಸಾವನ್ನಪ್ಪಿದ ಘಟನೆ ಕುತ್ತಾರು ಪದವಿನ ಸಲಾತ್ ನಗರದಲ್ಲಿ ನಡೆದಿದೆ. 30ರ ಹರೆಯದ ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕು ಮಲ್ಲಾಪುರ ನಿವಾಸಿ ಶಿವಕುಮಾರ ಜಿ.ಕೆ ಮೃತಪಟ್ಟ ದುರ್ದೈವಿಯಾಗಿದ್ದಾರೆ.

ಉಳ್ಳಾಲ ತಾಲೂಕಿನ ಕುತ್ತಾರುವಿನ ಸಲಾತ್ ನಗರದ ಖಾಲಿ ಸೈಟೊಂದರಲ್ಲಿ ಹೊಸ ಬಾವಿ ಅಗೆಯುತ್ತಿದ್ದ ವೇಳೆ ದುರ್ಘಟನೆ ನಡೆದಿದೆ. ಒಟ್ಟು ಆರು ಜನ ಕೂಲಿ ಕಾರ್ಮಿಕರಲ್ಲಿ,ಶಿವಕುಮಾರ್ ಸೇರಿ ಮೂವರು ಕಾರ್ಮಿಕರು ಮೂವತ್ತು ಅಡಿ ಆಳ ಕೊರೆಯಲಾದ ಬಾವಿಯೊಳಗಡೆ ಕೆಲಸ ನಿರ್ವಹಿಸುತ್ತಿದ್ದರು. ಈ ವೇಳೆ ಕ್ರೇನ್ ಮೂಲಕ ಕಬ್ಬಿಣದ ಬಕೆಟಲ್ಲಿ ಮಣ್ಣನ್ನು ಮೇಲಕ್ಕೆತ್ತುತ್ತಿದ್ದ ಸಂದರ್ಭ ಕ್ರೇನಿನ ಕೊಕ್ಕೆಯಿಂದ ಬೇರ್ಪಟ್ಟ ಮಣ್ಣು ತುಂಬಿದ ಕಬ್ಬಿಣದ ಬಕೆಟ್ ನೇರವಾಗಿ ಕಾರ್ಮಿಕ ಶಿವ ಕುಮಾರ್ ಅವರ ತಲೆ ಮೇಲೆ ಬಿದ್ದಿದೆ.ಗಂಭೀರ ಗಾಯಗೊಂಡಿದ್ದ ಶಿವಕುಮಾರನನ್ನು ಮೇಲಕ್ಕೆತ್ತಿ ದೇರಳಕಟ್ಟೆಯ ಖಾಸಗಿ ಆಸ್ಪತ್ರೆಗೆ ಸಾಗಿಸಲಾದರೂ ದಾರಿ ಮಧ್ಯದಲ್ಲಿಯೇ ಅವರು ಮೃತಪಟ್ಟಿದ್ದಾರೆ.ಬಾವಿಯೊಳಗಿದ್ದ ಇತರ ಇಬ್ಬರು ಕಾರ್ಮಿಕರು ಸಣ್ಣ ಪುಟ್ಟ ಗಾಯಗಳೊಂದಿಗೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಶಿವಕುಮಾರ ಅವರ ಮೃತ ದೇಹವನ್ನು ಮರಣೋತ್ತರ ಪರೀಕ್ಷೆಗೆ ರವಾಣಿಸಲಾಗಿದೆ.

ಉಳ್ಳಾಲ ಪೊಲೀಸ್ ಠಾಣೆಯಲ್ಲಿ ಈ ಬಗ್ಗೆ ಪ್ರಕರಣ ದಾಖಲಾಗಿದೆ.

ಮೃತ ಶಿವಕುಮಾರ್ ವಿವಾಹಿತರಾಗಿದ್ದು ತನ್ನ ಪತ್ನಿ ಮತ್ತು ಮೂರು ವರ್ಷದ ಗಂಡು ಮತ್ತು ಒಂದು ವರ್ಷದ ಹೆಣ್ಣು ಮಗಳೊಂದಿಗೆ ತೊಕ್ಕೊಟ್ಟುವಿನ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು.ಗುರುವಾರದಂದು ಪತ್ನಿ ಮತ್ತು ಮಕ್ಕಳನ್ನ ಅವರು ಊರಿಗೆ ಕಳುಹಿಸಿ ಕೊಟ್ಟಿದ್ದರು ಎನ್ನಲಾಗಿದೆ. ಶಿವಕುಮಾರ್ ಅವರು ಎರಡು ವಾರಗಳ ಹಿಂದಷ್ಟೆ ತನ್ನ ಕಿರಿಯ ಮಗಳ ಮೊದಲ ಹುಟ್ಟುಹಬ್ಬವನ್ನು ಆಚರಿಸಿಕೊಂಡಿದ್ದರು ಎನ್ನಲಾಗಿದೆ.


## ಆಟೋ ಚಾಲಕರ ಸಂಕಷ್ಟ

↗ 1ನೇ ಪುಟದಿಂದ

ಹೆಚ್ಚಾಗುವುದರ ಜೊತೆಗೆ ಪೊಲೀಸರು ದಂಡ ವಿಧಿಸುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಇನ್ನೊಂದು ಸಮಸ್ಯೆ ಆನ್‌ಲೈನ್ ಟ್ಯಾಕ್ಸಿ ಸೇವೆಗಳ ಸ್ಪರ್ಧೆ. ಖಾಸಗಿ ಕಂಪನಿಗಳು ನಗರ ಪ್ರದೇಶಗಳಲ್ಲಿ ವ್ಯಾಪಕವಾಗಿ ಸೇವೆ ನೀಡುತ್ತಿರುವುದರಿಂದ ಸಾಂಪ್ರದಾಯಿಕ ಆಟೋ ಚಾಲಕರಿಗೆ ಪ್ರಯಾಣಿಕರು ಕಡಿಮೆಯಾಗುತ್ತಿದ್ದಾರೆ. ಇದರಿಂದ ಅವರ ಆದಾಯ ಕುಸಿತಗೊಳ್ಳುತ್ತಿದೆ. ರಾತ್ರಿ ವೇಳೆ ಸುರಕ್ಷತೆ ಸಮಸ್ಯೆ ಕೂಡ ಪ್ರಮುಖವಾಗಿದೆ. ವಿಶೇಷವಾಗಿ ಗ್ರಾಮಾಂತರ ಹಾಗೂ ಕಡಿಮೆ ಜನಸಂಚಾರ ಇರುವ ಪ್ರದೇಶಗಳಲ್ಲಿ ರಾತ್ರಿ ವೇಳೆಯಲ್ಲಿ ಸೇವೆ ನೀಡುವುದು ಚಾಲಕರಿಗೆ ಅಪಾಯಕಾರಿಯಾಗುತ್ತಿದೆ. ಈ ಕುರಿತು ಯಾವುದೇ ಸುರಕ್ಷತಾ ವ್ಯವಸ್ಥೆ ಇಲ್ಲದಿರುವುದು ಆತಂಕಕಾರಿ. ಹಣಕಾಸು ಸಂಕಷ್ಟಗಳು ಸಹ ಚಾಲಕರನ್ನು ಕಾಡುತ್ತಿವೆ. ಹೆಚ್ಚಿನವರು ಬ್ಯಾಂಕ್ ಸಾಲದ ಮೂಲಕ ಆಟೋ ಖರೀದಿಸಿರುವುದರಿಂದ ತಿಂಗಳ EMI, ವಾಹನ ನಿರ್ವಹಣೆ ವೆಚ್ಚ, ಇಂಧನ ವೆಚ್ಚ ಸೇರಿ ಆರ್ಥಿಕ ಒತ್ತಡ ಹೆಚ್ಚಾಗಿದೆ. ಆದಾಯ ಸ್ಥಿರವಾಗಿಲ್ಲದಿರುವುದು ಈ ಸಮಸ್ಯೆಯನ್ನು ಮತ್ತಷ್ಟು ಗಂಭೀರಗೊಳಿಸುತ್ತದೆ. ಆರೋಗ್ಯ ಮತ್ತು ವಿಮಾ ಸೌಲಭ್ಯಗಳ ಕೊರತೆ ಕೂಡ ಪ್ರಮುಖ ಅಂಶವಾಗಿದೆ. ದೀರ್ಘ ಸಮಯ ವಾಹನ ಚಲಾಯಿಸುವುದರಿಂದ ಬೆನ್ನುನೋವು, ದೈಹಿಕ ದಣಿವು, ಒತ್ತಡ ಮುಂತಾದ ಸಮಸ್ಯೆಗಳು ಕಾಣಿಸುತ್ತವೆ. ಆದರೆ ಚಾಲಕರಿಗೆ ಸೂಕ್ತ ಆರೋಗ್ಯ ವಿಮೆ ಅಥವಾ ನಿಯಮಿತ ಆರೋಗ್ಯ ತಪಾಸಣೆ ಸೌಲಭ್ಯಗಳು ಲಭ್ಯವಿಲ್ಲ. ಡಿಜಿಟಲ್ ಪಾವತಿ ವ್ಯವಸ್ಥೆಗಳ ಅಡಚಣೆಗಳು ಕೂಡ ಗಮನಾರ್ಹವಾಗಿವೆ. ಹಲವಾರು ಪ್ರಯಾಣಿಕರು ಡಿಜಿಟಲ್ ಪೇಮೆಂಟ್ ಬಳಸುತ್ತಿದ್ದರೂ, ಎಲ್ಲ ಚಾಲಕರಿಗೂ ತಂತ್ರಜ್ಞಾನ ತಿಳಿದಿಲ್ಲ ಅಥವಾ ಸರಿಯಾದ ಸೌಲಭ್ಯಗಳಿಲ್ಲದಿರುವುದರಿಂದ ಸಮಸ್ಯೆಗಳು ಎದುರಾಗುತ್ತಿವೆ. ಒಟ್ಟಿನಲ್ಲಿ, ಆಟೋ ರಿಕ್ಷಾ ಚಾಲಕರ ಸಮಸ್ಯೆಗಳು ಬಹುಮುಖವಾಗಿದ್ದು, ಸರ್ಕಾರ, ಸ್ಥಳೀಯ ಆಡಳಿತ ಹಾಗೂ ಸಮಾಜ ಒಟ್ಟಾಗಿ ಈ ಸಮಸ್ಯೆಗಳತ್ತ ಗಮನ ಹರಿಸಿದರೆ ಮಾತ್ರ ಶಾಶ್ವತ ಪರಿಹಾರ ಸಾಧ್ಯ.

# ಆರೀಫ್ ಕೊಲೆ ಪ್ರಕರಣ : ಏಳು ಮಂದಿ ಆರೋಪಿಗಳ ಬಂಧನ

**ಮಂಗಳೂರು:** ರೌಡಿ ಶೀಟರ್, ಕಿನ್ಯ ಅಜ್ಜಿನಡ್ಕ ನಿವಾಸಿ ಆರಿಫ್ ಕೊಲೆ ಪ್ರಕರಣಕ್ಕೆ ಸಂಬಂಧಿಸಿ ಏಳು ಮಂದಿ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.ಕೊಲೆ ಪ್ರಕರಣದ ಆರೋಪಿಗಳಾದ ರಿಫಾತ್ , ಜುಟ್ಟು ಅಶ್ಫಾಕ್, ಖಲೀಲ್, ಶಾಕಿರ್, ಇರ್ಫಾನ್ , ರಿಝ್ವಾನ್ ಹಾಗೂ ಕೊಲೆಕೃತ್ಯಕ್ಕೆ ಸಹಕರಿಸಿದ ಇರ್ಷಾದ್ ಬಂಧಿತ ಆರೋಪಿಗಳು ಎಂದು ಪೊಲೀಸರು ತಿಳಿಸಿದ್ದಾರೆ.ಬಂಧಿತರ ವಿಚಾರಣೆಯಿಂದ ಕೃತ್ಯದ ಭೀಕರತೆ ಹಾಗೂ ಅದರ ಹಿಂದಿರುವ ವ್ಯವಸ್ಥಿತ ಸಂಚು ಬಯಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಸುಧೀರ್ ಕುಮಾರ್ ರೆಡ್ಡಿ ತಿಳಿಸಿದ್ದಾರೆ. ಮಾ.27ರಂದು ಬೆಳಗ್ಗೆ ದಕ್ಕೆ ಮೀನು ಮಾರುಕಟ್ಟೆಗೆ ಬೈಕ್‌ನಲ್ಲಿ ತೆರಳುತ್ತಿದ್ದ ಆರಿಫ್‌ನನ್ನು ತೊಕ್ಕೊಟ್ಟು ಫ್ಲೈ ಓವರ್ ಬಳಿ ತಂಡವೊಂದು ಅಡ್ಡಗಟ್ಟಿ ಮಾರಕಾಸ್ತ್ರಗಳಿಂದ ಕೊಚ್ಚಿ ಹತ್ಯೆಗೈದು ಪರಾರಿಯಾಗಿರುವ ಪ್ರಕರಣವು ಪೊಲೀಸರಿಗೆ ಸವಾಲಾಗಿ ಪರಿಣಮಿಸಿತ್ತು.ರಿಫಾತ್, ಜುಟ್ಟು ಅಶ್ಫಾಕ್, ಖಲೀಲ್, ಶಾಕಿರ್, ಇರ್ಫಾನ್ , ರಿಝ್ವಾನ್ ಸೇರಿದಂತೆ ಆರು ಮಂದಿ ಆರೋಪಿಗಳು ಕಾರಿನಲ್ಲಿ ಆರಿಫ್‌ನ ಬೈಕನ್ನು ಹಿಂಬಾಲಿಸಿಕೊಂಡು ಹೋಗಿದ್ದರು. ತೊಕ್ಕೊಟ್ಟು ಫ್ಲೈ ಓವರ್ ಬಳಿ ನಿರ್ಜನ ಪ್ರದೇಶ ದಲ್ಲಿ ಆರಿಫ್ ಸಂಚರಿಸುತ್ತಿದ್ದ ಬೈಕ್‌ಗೆ ಆರೋಪಿಗಳು ಹಿಂದಿನಿಂದ ಕಾರನ್ನು ಢಿಕ್ಕಿ ಹೊಡೆದ ಪರಿಣಾಮವಾಗಿ ಆರಿಫ್ ಕೆಳಗೆ ಬೀಳುತ್ತಿದ್ದಂತೆ ಆತನ ಮೇಲೆ ಮಾರಕಾಸ್ತ್ರಗಳಿಂದ ಭೀಕರವಾಗಿ ಹಲ್ಲೆ ನಡೆಸಿ ಸ್ಥಳದಿಂದ ಪರಾರಿಯಾಗಿದ್ದರು. ಕೊಲೆಯ ಹಿಂದೆ ದೊಡ್ಡ ಜಾಲ ಕೆಲಸ ಮಾಡಿರುವುದನ್ನು ಪೊಲೀಸರು ಪತ್ತೆ ಹಚ್ಚಿದ್ದಾರೆ. ಆರೋಪಿಗಳಿಗೆ ಕೊಲೆಗಿಂತ ಮೊದಲು ತಂಗಲು ವ್ಯವಸ್ಥೆ ಇರ್ಷಾದ್ ಮಾಡಿಕೊಟ್ಟಿದ್ದಲ್ಲದೆ, ಅವರನ್ನು ಕೃತ್ಯ ನಡೆದ ಸ್ಥಳಕ್ಕೆ ಕರೆದೊಯ್ಯುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಪೂರ್ವ ದ್ವೇಷವೇ ಕೊಲೆಗೆ ಕಾರಣ ಎಂದು ಪೊಲೀಸರ ತನಿಖೆಯಿಂದ ತಿಳಿದುಬಂದಿದೆ.ಕೊಲೆಗೆ ಬಳಸಲಾದ ಬಾಡಿಗೆ ಕಾರನ್ನು ಸುಹೈಲ್ ವ್ಯವಸ್ಥೆ ಮಾಡಿದ್ದು, ಕಾರನ್ನು ರಿಫಾತ್‌ಗೆ ನೀಡಿ ಈತ ಸೌದಿ ಅರೇಬಿಯಾಗೆ



ಪರಾರಿಯಾಗಿದ್ದಾನೆ ಎಂದು ತಿಳಿದುಬಂದಿದೆ.ಅರ್ಶದ್ ಎಂಬಾತ ಈ ತಂಡಕ್ಕೆ ಶಸ್ತ್ರಾಸ್ತ್ರಗಳನ್ನು ಒದಗಿಸಿದ್ದನು. ಪೊಲೀಸರ ಚಲನವಲನದ ಮೇಲೆ ನಿಗಾ ಇರಿಸಿ, ಆರೋಪಿಗಳಿಗೆ ಕ್ಷಣ ಕ್ಷಣದ ಮಾಹಿತಿ ನೀಡುತ್ತಿದ್ದನು. ಅಲ್ಲದೆ ಆರೋಪಿಗಳು ತಲೆಮರೆಸಿಕೊಂಡಿದ್ದ ಅವಧಿಯಲ್ಲಿ ಅವರಿಗೆ ಹಣಕಾಸು ಮತ್ತು ವಾಹನದ ವ್ಯವಸ್ಥೆ ಮಾಡಿದ್ದನು ಎನ್ನಲಾಗಿದೆ.

ಡಿಜಿಟಲ್ ತಾಂತ್ರಿಕ ನೆರವು: ತಾಂತ್ರಿಕವಾಗಿ ಪೊಲೀಸರ ಕಣ್ಣು ತಪ್ಪಿಸಲು ಅಶ್ವೀರ್ ಎಂಬಾತ ನೆರವಾಗಿದ್ದನು. ಈತ ದುಬೈನಿಂದ ಒಟಿಪಿ ಪಡೆದು ಆರೋಪಿಗಳಿಗೆ ಅಂತರ್ ರಾಷ್ಟ್ರೀಯ ವಾಟ್ಸಾಪ್ ಸಂಖ್ಯೆಗಳನ್ನು ಸಕ್ರಿಯಗೊಳಿಸಿ ಕೊಟ್ಟಿದ್ದನು. ಒಂದು ನಂಬರ್ ಪೊಲೀಸರ ಗಮನಕ್ಕೆ ಬರುತ್ತಿದ್ದಂತೆಯೇ ಮತ್ತೊಂದು ನಂಬರ್ ನೀಡಿ ಸಂವಹನ ಮುಂದುವರಿಯುವಂತೆ ನೋಡಿಕೊಂಡಿದ್ದನು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.ವಿದೇಶದಿಂದ ಆರ್ಥಿಕ ನೆರವು: ವಿದೇಶದಲ್ಲಿರುವ ಮುಸ್ತಫಾ ಮತ್ತು ಅಶ್ವೀರ್ ಆರೋಪಿಗಳ ತಲೆಮರೆಸಿಕೊಳ್ಳಲು ವಸತಿ ಮತ್ತು ಪ್ರಯಾಣದ ವೆಚ್ಚಕ್ಕೆ ಬೇಕಾದ ಹಣಕಾಸಿನ ನೆರವು ನೀಡುತ್ತಿದ್ದರು ಎಂಬುದು ತನಿಖೆಯಿಂದ ದೃಢಪಟ್ಟಿದೆ. ಹತ್ಯಾ ಪ್ರಕರಣದಲ್ಲಿ ಇನ್ನೂ ಅನೇಕರು ಶಾಮೀಲಾಗಿರುವ ಸಂಶಯವಿದೆ. ತಲೆಮರೆಸಿಕೊಂಡಿರುವ ಉಳಿದ ಆರೋಪಿಗಳಿಗಾಗಿ ಬಲೆ ಬೀಸಲಾಗಿದ್ದು, ಶೀಘ್ರದಲ್ಲೇ ಅವರನ್ನು ಬಂಧಿಸಲಾಗುವುದು ಎಂದು ಪೊಲೀಸ್ ಆಯುಕ್ತರು ತಿಳಿಸಿದ್ದಾರೆ.

# ಆಟೋ ಗ್ಯಾಸ್ ಕೊರತೆ: ವದಂತಿಗಳಿಗೆ ಕಿವಿಗೊಡದಿರಿ: ಇಲಾಖೆ ಸ್ಪಷ್ಟನೆ


**ಮಂಗಳೂರು:** ರಾಜ್ಯದ ವಿವಿಧ ಆಟೋಗ್ಯಾಸ್ ಬಂಕ್‌ಗಳಲ್ಲಿ ಅನಿಲದ ದಾಸ್ತಾನು ಕೊರತೆಯಿದೆ ಎಂಬ ತಪ್ಪು ಮಾಹಿತಿಯ ಆಧಾರದ ಮೇಲೆ ಕೆಲವು ದಿನಗಳಿಂದ ಆಟೋ ಮಾಲಕರು ಮತ್ತು ಚಾಲಕರು ಬಂಕ್‌ಗಳ ಮುಂದೆ ಸರತಿ ಸಾಲಿನಲ್ಲಿ ನಿಲ್ಲುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆ. ಈ ಕುರಿತು ಕೆಲವು ಮಾಧ್ಯಮಗಳಲ್ಲಿ ಪ್ರಕಟ ವಾಗಿರುವ ವರದಿಗಳು ಕೇವಲ ವದಂತಿಗಳಾಗಿದೆ. ಹಾಗಾಗಿ ಸಾರ್ವಜನಿಕರು ಈ ಬಗ್ಗೆ ಆತಂಕಪಡುವ ಅಗತ್ಯವಿಲ್ಲ ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯು ಸ್ಪಷ್ಟಪಡಿಸಿದೆ.ಕೆಲವು ಖಾಸಗಿ ಆಟೋ ಗ್ಯಾಸ್ ಸರಬರಾಜು ಸಂಸ್ಥೆಗಳಲ್ಲಿ ಮಾತ್ರ ಅಲ್ಪಮಟ್ಟಿನ ಕೊರತೆ ಕಂಡುಬಂದಿದೆ. ಇದನ್ನು ಸರಿಪಡಿಸಲು ಸರಕಾರಿ ಸ್ವಾಮ್ಯದ ತೈಲ ಕಂಪನಿಗಳಾದ ಇಂಡಿಯನ್ ಆಯಿಲ್, ಭಾರತ್ ಪೆಟ್ರೋಲಿಯಂ ಮತ್ತು ಹಿಂದೂಸ್ತಾನ್ ಪೆಟ್ರೋಲಿಯಂ ಮೂಲಕ ಹೆಚ್ಚಿನ ಪ್ರಮಾಣದ ಅನಿಲವನ್ನು ಪೂರೈಕೆ ಮಾಡಲಾಗುತ್ತಿದೆ.

ಈ ಮೂರು ಸಂಸ್ಥೆಗಳು ಸರಾಸರಿ 56.67 ಮೆಟ್ರಿಕ್ ಟನ್ ಆಟೋಗ್ಯಾಸ್ ಸರಬರಾಜು ಮಾಡುತ್ತಿದ್ದವು. ಪ್ರಸಕ್ತ ಬೇಡಿಕೆಯನ್ನು ಪೂರೈಸಲು ಸರಬರಾಜು ಪ್ರಮಾಣವನ್ನು ಗಣನೀಯವಾಗಿ ಹೆಚ್ಚಿಸಲಾಗಿದೆ. ಅಂದರೆ ಸದ್ಯ ಪ್ರತಿದಿನ ಸರಾಸರಿ 83.58 ಮೆಟ್ರಿಕ್ ಟನ್ ಗ್ಯಾಸ್ ಚಿಲ್ಲರೆ ಮಾರಾಟ ಮಳಿಗೆಗಳಿಗೆ ಪೂರೈಸಲಾಗುತ್ತಿದೆ. *ಕಳೆದ ಐದು ದಿನಗಳ ಪೂರೈಕೆ ವಿವರ: ಎ.2ರಿಂದ 6ರವರೆಗಿನ ಅಂಕಿ ಅಂಶಗಳನ್ನು ಗಮನಿಸಿದರೆ ಪೂರೈಕೆಯಲ್ಲಿ ಸ್ಥಿರತೆ ಇರುವುದು ಕಂಡು ಬಂದಿದೆ. ಎ.2ರಂದು 87.78 ಮೆಟ್ರಿಕ್ ಟನ್, ಎ.3ರಂದು 86.05 ಮೆಟ್ರಿಕ್ ಟನ್, ಎ.4ರಂದು 84.80 ಮೆಟ್ರಿಕ್ ಟನ್, ಎ.5ರಂದು ಗರಿಷ್ಠ 94.11 ಮೆಟ್ರಿಕ್ ಟನ್ ಹಾಗೂ ಎ.6ರಂದು 83.58 ಮೆಟ್ರಿಕ್ ಟನ್ ಅನಿಲವನ್ನು ಈ ಮೂರು ಪ್ರಮುಖ ಸಂಸ್ಥೆಗಳು ಯಶಸ್ವಿಯಾಗಿ ಪೂರೈಕೆ ಮಾಡಿವೆ. ಆದ್ದರಿಂದ ರಾಜ್ಯದ ಆಟೋ ಮಾಲಕರು ಮತ್ತು ಚಾಲಕರು ಇಂತಹ ಯಾವುದೇ ಸುಳ್ಳು ವದಂತಿಗಳನ್ನು ನಂಬಬಾರದು ಮತ್ತು ಆತಂಕಕ್ಕೊಳಗಾಗಿ ಬಂಕ್‌ಗಳ ಮುಂದೆ ಸಾಲುಗಟ್ಟಿ ನಿಲ್ಲಬಾರದು. ಅನಿಲ ಪೂರೈಕೆ ವ್ಯವಸ್ಥಿತವಾಗಿ ನಡೆಯುತ್ತಿದ್ದು, ಸಾರ್ವಜನಿಕರು ಸಹಕರಿಸಬೇಕು ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯು ಪ್ರಕಟನೆಯಲ್ಲಿ ತಿಳಿಸಿದೆ.

# ಬೇಸಿಗೆ ರಜೆ: ಮಕ್ಕಳ ಸಂತೋಷದ ಜೊತೆ ಸುರಕ್ಷತೆಯೂ ಅಗತ್ಯ

**ಪ್ರವೀಣ್ ಶೆಟ್ಟಿ ಮೇಗಿನಮನೆ ಲೈಫ್ ಟಿಪ್ಸ್**






ಬೇಸಿಗೆ ಕಾಲ ಪ್ರಾರಂಭವಾಗುತ್ತಿದ್ದಂತೆಯೇ ಶಾಲಾ ವಿದ್ಯಾರ್ಥಿಗಳಿಗೆ ಅತ್ಯಂತ ನಿರೀಕ್ಷಿತವಾದ ರಜೆ ಸಿಗುತ್ತದೆ. ಈ ರಜೆ ಮಕ್ಕಳಿಗೆ ವಿಶ್ರಾಂತಿ, ಆಟ–ಮನರಂಜನೆ ಮತ್ತು ಹೊಸ ಅನುಭವಗಳನ್ನು ನೀಡುವ ಸುವರ್ಣಾವಕಾಶವಾಗಿದ್ದರೂ, ಇಂದಿನ ತೀವ್ರ ಬಿಸಿಲಿನ ಹಿನ್ನೆಲೆಯಲ್ಲಿ ಇದು ಕೆಲವೊಂದು ಅಪಾಯಗಳನ್ನೂ ಒಳಗೊಂಡಿದೆ. ಹವಾಮಾನ ಬದಲಾವಣೆಯ ಪರಿಣಾಮವಾಗಿ ವರ್ಷದಿಂದ ವರ್ಷಕ್ಕೆ ತಾಪಮಾನ ಏರಿಕೆಯಾಗುತ್ತಿದ್ದು, ಅದರ ಪರಿಣಾಮ ಮಕ್ಕಳ ಆರೋಗ್ಯದ ಮೇಲೆ ನೇರವಾಗಿ ಬೀಳುತ್ತಿದೆ. ಈ ಹಿನ್ನೆಲೆಯಲ್ಲಿ ಪೋಷಕರು ಮತ್ತು ಸಮಾಜದ ಎಲ್ಲ ವರ್ಗದವರೂ ಮಕ್ಕಳ ಸುರಕ್ಷತೆ ಕುರಿತು ಹೆಚ್ಚು ಜಾಗೃತರಾಗುವುದು ಅಗತ್ಯವಾಗಿದೆ.

ಇತ್ತೀಚಿನ ದಿನಗಳಲ್ಲಿ ಮಧ್ಯಾಹ್ನ ಸಮಯದಲ್ಲಿ ಬಿಸಿಲಿನ ತೀವ್ರತೆ ಹೆಚ್ಚಾಗಿ ಕಂಡುಬರುತ್ತಿದೆ. 35ರಿಂದ 40 ಡಿಗ್ರಿವರೆಗೆ ತಾಪಮಾನ ಏರಿಕೆಯಾಗುವುದು ಸಾಮಾನ್ಯವಾಗಿದ್ದು, ಈ ಸಮಯದಲ್ಲಿ ಹೊರಗೆ ಹೋಗುವುದು ವಿಶೇಷವಾಗಿ ಮಕ್ಕಳಿಗೆ ಅಪಾಯಕಾರಿ. ಸೂರ್ಯನ ಕಿರಣಗಳಿಗೆ ಹೆಚ್ಚು ಸಮಯ ಒಳಗಾದರೆ ದೇಹದಲ್ಲಿ ನೀರಿನ ಕೊರತೆ ಉಂಟಾಗುತ್ತದೆ. ಇದರಿಂದ ತಲೆಸುತ್ತು, ತಲೆನೋವು, ದೌರ್ಬಲ್ಯ, ಚರ್ಮದ ಸಮಸ್ಯೆಗಳು ಮತ್ತು ಕೆಲವೊಮ್ಮೆ ಹೀಟ್ ಸ್ಟ್ರೋಕ್‌ನಂತಹ ಗಂಭೀರ ಸಮಸ್ಯೆಗಳಿಗೂ ಕಾರಣವಾಗಬಹುದು. ಮಕ್ಕಳಿಗೆ ಈ ಅಪಾಯಗಳ ಅರಿವು ಕಡಿಮೆ ಇರುವುದರಿಂದ ಅವರು ಆಟದ ಹುಮ್ಮಸ್ಸಿನಲ್ಲಿ ತಮ್ಮ ಆರೋಗ್ಯವನ್ನು ನಿರ್ಲಕ್ಷಿಸುವ ಸಾಧ್ಯತೆ ಹೆಚ್ಚಿದೆ.

ಆದ್ದರಿಂದ ಪೋಷಕರು ಮಕ್ಕಳ ದಿನಚರಿಯಲ್ಲಿ ಕೆಲವು ಬದಲಾವಣೆಗಳನ್ನು ತರಬೇಕು. ಮಧ್ಯಾಹ್ನ 11 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ಮಕ್ಕಳನ್ನು ಹೊರಗೆ ಆಟವಾಡಲು ಬಿಡದೇ ಮನೆಯೊಳಗೆ ಸುರಕ್ಷಿತವಾಗಿ ಇರಿಸುವುದು ಉತ್ತಮ. ಬೆಳಿಗ್ಗೆ ಅಥವಾ ಸಂಜೆ ಸಮಯದಲ್ಲಿ ಮಾತ್ರ ಹೊರಾಂಗಣ ಚಟುವಟಿಕೆಗಳಿಗೆ ಅವಕಾಶ ನೀಡಬೇಕು. ಜೊತೆಗೆ ಮಕ್ಕಳಿಗೆ ಹೆಚ್ಚು ಪ್ರಮಾಣದಲ್ಲಿ ನೀರು ಕುಡಿಯುವ ಅಭ್ಯಾಸ ಬೆಳೆಸುವುದು ಅತ್ಯಂತ ಮುಖ್ಯ. ಮಜ್ಜಿಗೆ, ತೆಂಗಿನಕಾಯಿ ನೀರು, ನಿಂಬೆಹಣ್ಣು ಜ್ಯೂಸ್‌ಗಳಂತಹ ಪಾನೀಯಗಳು ದೇಹವನ್ನು ತಂಪಾಗಿಡುತ್ತವೆ ಮತ್ತು ದೇಹದ ನೀರಿನ ಸಮತೋಲನವನ್ನು ಕಾಪಾಡುತ್ತವೆ.

ಆಹಾರದ ವಿಷಯದಲ್ಲಿಯೂ ವಿಶೇಷ ಗಮನ ಅಗತ್ಯವಿದೆ. ಹಗುರವಾದ, ಪೌಷ್ಟಿಕ ಆಹಾರವನ್ನು ಮಕ್ಕಳಿಗೆ ನೀಡಬೇಕು. ಹಣ್ಣುಗಳು, ತರಕಾರಿ ಮತ್ತು ತಾಜಾ ಆಹಾರ ಪದಾರ್ಥಗಳು ದೇಹಕ್ಕೆ ಶಕ್ತಿ ನೀಡುತ್ತವೆ. ಹೆಚ್ಚು ಎಣ್ಣೆಯ, ಮಸಾಲೆಯ ಆಹಾರಗಳನ್ನು ಸಾಧ್ಯವಾದಷ್ಟು ಕಡಿಮೆ ಮಾಡುವುದು ಒಳಿತು. ಜೊತೆಗೆ ಸಡಿಲವಾದ ಮತ್ತು ಹಗುರ ಬಣ್ಣದ ಬಟ್ಟೆಗಳನ್ನು ಧರಿಸುವುದರಿಂದ ಬಿಸಿಲಿನ ಪರಿಣಾಮ ಕಡಿಮೆಯಾಗುತ್ತದೆ. ಹೊರಗೆ ಹೋಗುವ ಸಂದರ್ಭಗಳಲ್ಲಿ ಟೋಪಿ ಅಥವಾ ಕಣ್ಣಕಟ್ಟುಗಳನ್ನು ಬಳಸುವುದರಿಂದ ಸೂರ್ಯನ ನೇರ ಕಿರಣಗಳಿಂದ ರಕ್ಷಣೆ ದೊರೆಯುತ್ತದೆ.

ರಜೆ ಸಮಯವನ್ನು ಕೇವಲ ಆಟವಾಡುವುದರಲ್ಲಿ ಮಾತ್ರ ಕಳೆಯದೇ, ಮಕ್ಕಳ ಸೃಜನಾತ್ಮಕ ಬೆಳವಣಿಗೆಗೂ ಬಳಸಿಕೊಳ್ಳುವುದು ಉತ್ತಮ. ಪುಸ್ತಕ ಓದುವ ಅಭ್ಯಾಸ ಬೆಳೆಸುವುದು, ಚಿತ್ರಕಲೆ, ಸಂಗೀತ, ನೃತ್ಯ, ಯೋಗ ಮುಂತಾದ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ಮಕ್ಕಳ ಮನಸ್ಸಿಗೆ ಚೈತನ್ಯ ನೀಡುತ್ತದೆ. ಕುಟುಂಬದೊಂದಿಗೆ ಸಮಯ ಕಳೆಯುವುದು ಕೂಡ ಮಕ್ಕಳಲ್ಲಿ ಒಳ್ಳೆಯ ಸಂಸ್ಕಾರ ಮತ್ತು ಸಂಬಂಧಗಳನ್ನು ಬೆಳೆಸುತ್ತದೆ. ಇಂತಹ ಚಟುವಟಿಕೆಗಳು ಮಕ್ಕಳಿಗೆ ಮನರಂಜನೆಯ ಜೊತೆಗೆ ಜೀವನಪಾಠವನ್ನೂ ಕಲಿಸುತ್ತವೆ.

ಬೇಸಿಗೆ ಸಮಯದಲ್ಲಿ ಸಣ್ಣ ನಿರ್ಲಕ್ಷ್ಯವೂ ದೊಡ್ಡ ಸಮಸ್ಯೆಗೆ ಕಾರಣವಾಗಬಹುದು. ಮಕ್ಕಳಲ್ಲಿ ಅತಿಯಾದ ದಾಹ, ತಲೆಸುತ್ತು, ದೇಹ ಬಿಸಿ ಆಗುವುದು ಅಥವಾ ಅಸ್ವಸ್ಥತೆ ಕಂಡುಬಂದರೆ ತಕ್ಷಣವೇ ತಂಪಾದ ಸ್ಥಳಕ್ಕೆ ಕರೆದೊಯ್ದು ನೀರು ನೀಡಬೇಕು ಮತ್ತು ಅಗತ್ಯವಿದ್ದರೆ ವೈದ್ಯರನ್ನು ಸಂಪರ್ಕಿಸಬೇಕು. ಸಮಯೋಚಿತ ಕ್ರಮದಿಂದ ದೊಡ್ಡ ಅಪಾಯವನ್ನು ತಪ್ಪಿಸಬಹುದು.

ಒಟ್ಟಿನಲ್ಲಿ ಬೇಸಿಗೆ ರಜೆ ಮಕ್ಕಳಿಗೆ ಸಂತೋಷದ ಸಮಯವಾಗಿದ್ದರೂ, ಸುರಕ್ಷತೆ ಮತ್ತು ಆರೋಗ್ಯದ ಬಗ್ಗೆ ಜಾಗೃತಿ ಅತ್ಯಗತ್ಯವಾಗಿದೆ. ಪೋಷಕರ ಜವಾಬ್ದಾರಿ, ಸರಿಯಾದ ಮಾರ್ಗದರ್ಶನ ಮತ್ತು ಮುನ್ನೆಚ್ಚರಿಕೆ ಕ್ರಮಗಳಿಂದ ಮಕ್ಕಳ ರಜೆಯನ್ನು ಆರೋಗ್ಯಕರ, ಸುರಕ್ಷಿತ ಮತ್ತು ಸಾರ್ಥಕವಾಗಿಸಬಹುದು. ಮಕ್ಕಳ ನಗು ಮತ್ತು ಆರೋಗ್ಯವೇ ನಮ್ಮ ಸಮಾಜದ ಭವಿಷ್ಯ ಎಂಬುದನ್ನು ಮನಗಂಡು ಎಲ್ಲರೂ ಜವಾಬ್ದಾರಿಯಿಂದ ನಡೆದುಕೊಂಡರೆ, ಈ ಬೇಸಿಗೆ ರಜೆ ನಿಜವಾಗಿಯೂ ಸಂತೋಷದ ಹಬ್ಬವಾಗಲಿದೆ.

# ಎ.ಜೆ.ಶೇಖರ್

## ಶ್ರಮ, ಸೇವೆ ಮತ್ತು ಸಂಸ್ಕಾರದ ಬದುಕಿನ ಪ್ರೇರಣಾದಾಯಕ ನಾಯಕ



**ತೊಕ್ಕೊಟ್ಟು:** ತಂದೆ ಕೀರ್ತಿಶೇಷ ಎ. ಜಯಣ್ಣ ಅವರಿಂದ ರೂಪುಗೊಂಡ ಮೌಲ್ಯಗಳು, ಶಿಸ್ತು ಮತ್ತು ಸೇವಾಭಾವವನ್ನು ಜೀವನದ ಮಾರ್ಗದರ್ಶಕವಾಗಿ ತೆಗೆದುಕೊಂಡು ಮುಂದೆ ಸಾಗುತ್ತಿರುವ ವ್ಯಕ್ತಿತ್ವವೇ ಎ.ಜೆ ಶೇಖರ್. ತಂದೆಯವರು ಹಾಕಿಕೊಟ್ಟ ಹಾದಿಯನ್ನೇ ತಮ್ಮ ಜೀವನದ ದಿಕ್ಕಾಗಿ ಆರಿಸಿಕೊಂಡು, ವ್ಯಾಪಾರ ಕ್ಷೇತ್ರದಲ್ಲೂ ಹಾಗೂ ಸಮಾಜ ಸೇವೆಯಲ್ಲೂ ವಿಶಿಷ್ಟ ಗುರುತು ಮೂಡಿಸಿರುವ ಶೇಖರ್ ಅವರು, ಮಂಗಳೂರಿನ ಕೇಂದ್ರ ಮಾರುಕಟ್ಟೆಯಲ್ಲಿ "ಎ.ಜೆ ವೆಜಿಟೇಬಲ್ಸ್" ಎಂಬ ಹೆಸರಿನಿಂದ ಪ್ರಸಿದ್ಧರಾಗಿದ್ದಾರೆ.

ಮಂಗಳೂರು ಸೆಂಟ್ರಲ್ ಮಾರುಕಟ್ಟೆ ಮತ್ತು ಕಲ್ಲಾಪು ಗ್ಲೋಬಲ್ ಮಾರುಕಟ್ಟೆ ಎಂದರೆ ಬೆಳಗಿನ ಜಾವವೇ ಚಟುವಟಿಕೆಯಿಂದ ಕಂಗೊಳಿಸುವ ಸ್ಥಳ. ಅಲ್ಲಿ ನಸುಕು 2.30ರಿಂದಲೇ ಆರಂಭವಾಗುವ ತರಕಾರಿ ವ್ಯಾಪಾರದಲ್ಲಿ ತೊಡಗಿಸಿಕೊಂಡಿರುವ ಶೇಖರ್ ಅವರು, ನಿದ್ರೆ ಮರೆತು ಶ್ರಮಪಟ್ಟು ಬೆಳೆದ ಶ್ರಮಜೀವಿ ಸಾಧಕ. ವ್ಯಾಪಾರವು ಕೇವಲ ಉದ್ಯೋಗವಲ್ಲ, ಅದು ಕುಟುಂಬದ ಪರಂಪರೆ ಮತ್ತು ಜೀವನದ ಧರ್ಮ ಎನ್ನುವ ನಿಲುವಿನಲ್ಲಿ ಅವರು ಕೆಲಸ ಮಾಡುತ್ತಿದ್ದಾರೆ. ಮಾರುಕಟ್ಟೆಯಲ್ಲೇ ದೊಡ್ಡ ಹೆಸರು ಗಳಿಸಿರುವ ಅವರು, ಸಹ ವ್ಯಾಪಾರಿಗಳಿಂದಲೂ ಗೌರವಿಸಲ್ಪಡುವ ವ್ಯಕ್ತಿ.

ಅವರ ಜೀವನದ ಯಶಸ್ಸಿನಲ್ಲಿ ಪತ್ನಿಯ ಪಾತ್ರವೂ ಅಷ್ಟೇ ಮಹತ್ವದ್ದು. ಸಹೃದಯಿ ಪತ್ನಿಯಾಗಿ, ಪತಿಯ ಎಲ್ಲಾ ಕಾರ್ಯಗಳಲ್ಲಿ ಬಲಗೈಯಾಗಿ ನಿಂತು, ಪ್ರತಿ ಹೆಜ್ಜೆಯಲ್ಲೂ ಬೆಂಬಲ ನೀಡಿದವರು. ಕುಟುಂಬದ ಬೆಂಬಲವೇ ಶೇಖರ್ ಅವರ ಸಾಧನೆಗೆ ಬಲವಾಗಿದ್ದು, ಅದೇ ಅವರ ಯಶಸ್ಸಿನ ಮೂಲವಾಗಿದೆ.

ವ್ಯಾಪಾರದ ಜೊತೆಗೆ ಧಾರ್ಮಿಕ ಕ್ಷೇತ್ರದಲ್ಲಿಯೂ ಶೇಖರ್ ಅವರು ಸಕ್ರಿಯರಾಗಿದ್ದಾರೆ. ಕಾಪಿಕಾಡು ಶ್ರೀ ಉಮಾಮಹೇಶ್ವರಿ ದೇವಸ್ಥಾನದ ಆಡಳಿತ ಮೊಕ್ತೇಸರರಾಗಿ ಸೇವೆ ಸಲ್ಲಿಸುತ್ತಿರುವ ಅವರು, ದೇವಸ್ಥಾನದ ಸರ್ವಾಂಗೀಣ ಅಭಿವೃದ್ಧಿಗೆ ಪ್ರಮುಖ ಪಾತ್ರವಹಿಸಿದ್ದಾರೆ. ಧಾರ್ಮಿಕ ಕಾರ್ಯಕ್ರಮಗಳು, ವರ್ಷಾಚರಣೆಗಳು ಹಾಗೂ ವಿಶೇಷ ಉತ್ಸವಗಳನ್ನು ಯಶಸ್ವಿಯಾಗಿ ನಡೆಸಲು ಅವರ ನೇತೃತ್ವ ಮಹತ್ವದ್ದಾಗಿದೆ. ಇತ್ತೀಚೆಗೆ ನಡೆದ ಕಾಪಿಕಾಡು ಶ್ರೀ ಕ್ಷೇತ್ರದ ಬ್ರಹ್ಮಕಲಶೋತ್ಸವವು ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಅತ್ಯಂತ ಅದ್ಧೂರಿಯಾಗಿ ನಡೆದಿದ್ದು, ಅದರಲ್ಲಿ ಅವರ ಸಂಘಟನಾ ಶಕ್ತಿ ಸ್ಪಷ್ಟವಾಗಿ ಗೋಚರಿಸಿದೆ.

ದೈವಾರಾಧನೆಯತ್ತ ವಿಶೇಷ ಭಕ್ತಿ ಹೊಂದಿರುವ ಶೇಖರ್ ಅವರು, ತೊಕ್ಕೊಟ್ಟು ಕಾಪಿಕಾಡಿನ ತಮ್ಮ ಮನೆಯಲ್ಲಿ ನಡೆಯುವ ಕಲ್ಲುರ್ಟಿ ಪಂಜುರ್ಲಿ ದೈವದ ಕೋಲವನ್ನು ವಿಭಿನ್ನವಾಗಿ ಮತ್ತು ಭಕ್ತಿಭಾವದಿಂದ ಆಚರಿಸುತ್ತಾರೆ. ಬಾಲ್ಯದಿಂದಲೇ ತಂದೆಯವರೊಂದಿಗೆ ದೈವಾರಾಧನೆಯಲ್ಲಿ ತೊಡಗಿಸಿಕೊಂಡು ಬಂದ ಅವರು, ಇಂದಿಗೂ ಆ ಪರಂಪರೆಯನ್ನು ಗೌರವದಿಂದ ಮುಂದುವರಿಸುತ್ತಿದ್ದಾರೆ.

ಸಾಮಾಜಿಕ ಸೇವೆಯಲ್ಲಿಯೂ ಅವರು ಸದಾ ಮುಂಚೂಣಿಯಲ್ಲಿದ್ದಾರೆ. ನಿರಾಶ್ರಿತರಿಗೆ ಆಶ್ರಯ ಒದಗಿಸುವುದು, ಅನಾರೋಗ್ಯ ಪೀಡಿತರಿಗೆ ನೆರವಾಗುವುದು, ಬಡವರಿಗೆ ಸಹಾಯ ಮಾಡುವುದು ಇವೆಲ್ಲವನ್ನು ಪ್ರಚಾರವಿಲ್ಲದೆ ಮೌನವಾಗಿ ನೆರವೇರಿಸುವ ದಾನಶೀಲತೆ ಅವರದ್ದು. ಕೊರೊನಾ ಸಂದರ್ಭದಲ್ಲಿ ಸಹ ಅನೇಕ ಮಂದಿಗೆ ಸಹಾಯಹಸ್ತ ಚಾಚಿದ ಅವರು, ಸಂಕಷ್ಟದಲ್ಲಿರುವವರ ಧ್ವನಿಯಾಗಿ ನಿಂತಿದ್ದಾರೆ.

ಕ್ರೀಡಾಭಿಮಾನಿಯಾಗಿ, ತಂದೆಯವರ ಕಬಡ್ಡಿ ಪ್ರೀತಿಯನ್ನು ಸ್ಮರಿಸುವ ಸಲುವಾಗಿ, ಸತತ ಎರಡು ವರ್ಷಗಳ ಕಾಲ ಕೊಲ್ಯ ಹಾಗೂ ಮಂಗಳೂರಿನಲ್ಲಿ ಕೀರ್ತಿಶೇಷ ಎ. ಜಯಣ್ಣ ಸ್ಮರಣಾರ್ಥ ಕಬಡ್ಡಿ ಪಂದ್ಯಾಟವನ್ನು ಆಯೋಜಿಸುತ್ತಿರುವುದು ಅವರ ಮತ್ತೊಂದು ವಿಶೇಷತೆ. ಕ್ರೀಡೆಗಳ ಉತ್ತೇಜನದ ಮೂಲಕ ಯುವಕರಲ್ಲಿ ಉತ್ಸಾಹ ತುಂಬುವ ಕೆಲಸವನ್ನು ಅವರು ಮಾಡುತ್ತಿದ್ದಾರೆ.

ಇದರ ಜೊತೆಗೆ ಸಹ್ಯಾದ್ರಿ ಕೋಪರೇಟಿವ್ ಸೊಸೈಟಿಯ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿರುವ ಶೇಖರ್ ಅವರು, ಜನರ ಸಮಸ್ಯೆಗಳಿಗೆ ಸ್ಪಂದಿಸುವಲ್ಲಿ ಸದಾ ಮುಂದಿದ್ದಾರೆ. ಸಮಾಜದ ಎಲ್ಲ ವರ್ಗಗಳಿಗೂ ಸಹಕಾರ ನೀಡುವ ಮನೋಭಾವದಿಂದ ಅವರು ಜನಮನ ಗೆದ್ದಿದ್ದಾರೆ.

ಒಟ್ಟಿನಲ್ಲಿ, ಎ.ಜೆ ಶೇಖರ್ ಅವರು ಶ್ರಮ, ಧಾರ್ಮಿಕ ನಿಷ್ಠೆ, ಕುಟುಂಬ ಮೌಲ್ಯಗಳು ಹಾಗೂ ಸಮಾಜ ಸೇವೆಗಳನ್ನು ಸಮತೋಲನದಿಂದ ಸಾಗಿಸುತ್ತಿರುವ ವ್ಯಕ್ತಿತ್ವ. ತಂದೆಯವರ ಆದರ್ಶಗಳನ್ನು ಮುಂದುವರಿಸುತ್ತಾ, ತಮ್ಮದೇ ಆದ ಗುರುತು ಮೂಡಿಸಿರುವ ಅವರು, ಮುಂದಿನ ದಿನಗಳಲ್ಲಿ ಇನ್ನಷ್ಟು ಎತ್ತರಗಳನ್ನು ಸಾಧಿಸಲಿ, ಎಲ್ಲರ ಬಾಳಿನಲ್ಲಿ ಬೆಳಕಾಗಲಿ ಎಂಬುದು ಅವರ ಅಭಿಮಾನಿಗಳ ಹಾರೈಕೆ.

# ಗ್ರಾಮೀಣ ಆರೋಗ್ಯ ಅಭಿವೃದ್ಧಿಗೆ ಹೆಜ್ಜೆ: ಕಿನ್ಯದಲ್ಲಿ ಹೊಸ ಕಟ್ಟಡಕ್ಕೆ ಶಿಲಾನ್ಯಾಸ



**ಕಿನ್ಯ;** ಕಿನ್ಯದ ಗೋಲ್ಡನ್ ಹೆಲ್ತ್ ಫೌಂಡೇಶನ್ ಆರೋಗ್ಯ ಮತ್ತು ವೈದ್ಯಕೀಯ ಸೇವಾ ಸಂಸ್ಥೆಯ ಆಶ್ರಯದಲ್ಲಿ ಕಿನ್ಯದಲ್ಲಿ ಗ್ರಾಮೀಣ ದತ್ತಿ ಆರೋಗ್ಯ ಕೇಂದ್ರದ ನೂತನ ಕಟ್ಟಡಕ್ಕೆ ಶಿಲಾನ್ಯಾಸ ನೆರವೇರಿದೆ.

ಕಾರ್ಯಕ್ರಮದಲ್ಲಿ ಸ್ಪೀಕರ್ ಯು.ಟಿ.ಖಾದರ್ ಭಾಗಿಯಾಗಿ ಮಾತನಾಡಿ, ರೋಗ ಬಂದ ಬಳಿಕ ಔಷಧಿ ನೀಡುವ ಬದಲು ರೋಗ ಬರದಂತೆ ತಡೆಯುವ ಜನಜಾಗೃತಿ ಕಾರ್ಯಕ್ರಮ ನಮ್ಮಿಂದ ಆಗಬೇಕು ಎಂದರು.

ಕಣಚೂರು ಮೆಡಿಕಲ್ ಕಾಲೇಜು ಚೇರ್‌ಮ್ಯಾನ್ ಕಣಚೂರು ಮೋನು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಆರೋಗ್ಯಕ್ಕೆ ಸಂಬಂಧಪಟ್ಟ ಸಂಸ್ಥೆ ಕಟ್ಟುವವರಿಗೆ ಅದನ್ನು ನಿರ್ವಹಣೆ ಮಾಡುವ ಮಹತ್ವದ ಜವಾಬ್ದಾರಿ ಇದೆ. ಆರೋಗ್ಯ ಸಂಸ್ಥೆಯಲ್ಲಿ ಬೆಡ್, ಪರೀಕ್ಷೆ ವ್ಯವಸ್ಥೆ, ವೈದ್ಯರು ಇರಬೇಕಾಗುತ್ತದೆ. ಇದನ್ನು ಕಣಚೂರು ಸಂಸ್ಥೆ ಪೂರೈಸುತ್ತದೆ ಎಂದು ಭರವಸೆ ನೀಡಿದರು.

ಅಸ್ಸೆಯದ್ ಅಮೀರ್ ತಂಙಳ್ ಶಿಲಾನ್ಯಾಸ ನೆರವೇರಿಸಿದರು. ಕಿನ್ಯ ಕೇಂದ್ರ ಜುಮಾ ಮಸೀದಿ ಮುದರ್ರಿಸ್ ಮುಸ್ತಫ ಅನ್ಸಾರಿ ದುಆ ನೆರವೇರಿಸಿದರು.

ಆಶ್ರಫ್ ಕರ್ನಿರೆ, ಯಕ್ಷಗಾನ ಅಕಾಡೆಮಿ ಸದಸ್ಯ ಕೃಷ್ಣಪ್ಪ ಪೂಜಾರಿ ಮಾತನಾಡಿದರು. ಗೋಲ್ಡನ್ ಹೆಲ್ತ್ ಫೌಂಡೇಶನ್ ಅದ–ಕ್ಷ ಹಾಜಿ ಮೂಸ ಅಬ್ಬಾಸ್ ಕುರಿಯಕಾರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ಡಾ.ಇಕ್ಬಾಲ್ ಕಿನ್ಯ, ಡಾ.ಅಫ್ರಾ ಇಸ್ಮಾಯೀಲ್ ಅವರನ್ನು ಸನ್ಮಾನಿಸಲಾಯಿತು.

ಅಸ್ಸೆಯದ್ ಶಿಹಾಬ್ ತಂಙಳ್ ಅಲ್ ಬುಖಾರಿ ಕಿನ್ಯ, ಮೇಲ್ತೆನೆ ಗೌರವಾಧ್ಯಕ್ಷ ಆಲಿಕುಂಞಿ ಪಾರೆ, ಎಚ್.ಎನ್. ಗ್ರೂಪ್ ಮಾಲಕ ಅಬ್ದುಲ್ ಹಮೀದ್, ಯೆನೆಪೊಯ ವೈದ್ಯಕೀಯ ಸಂಯೋಜಕ ಅಬ್ದುಲ್ ರಝಾಕ್, ಉದ್ಯಮಿ ಯು.ಬಿ.ಮುಹಮ್ಮದ್ ಉಳ್ಳಾಲ,ಗೋಲ್ಡನ್ ಹೆಲ್ತ್ ಫೌಂಡೇಶನ್ ಗೌರವ ಸಲಹೆಗಾರ ಹಾಜಿ ಕೆ.ಸಿ.ಇಸ್ಮಾಯೀಲ್ ಕಿನ್ಯ, ಎನ್.ಎಸ್.ಕರೀಂ, ಕಿನ್ಯ ಗ್ರಾಪಂ ಮಾಜಿ ಉಪಾಧ್ಯಕ್ಷ ಸಿರಾಜ್ ಕಿನ್ಯ, ಮಲರಾಯ ದೇವಸ್ಥಾನದ ಪ್ರಧಾನ ಅರ್ಚಕ ರವಿ ಪೂಜಾರಿ, ಎಸ್‌ಡಿಪಿಐ ಮುಖಂಡ ಝಾಹಿದ್ ಮಲಾರ್, ನಾರಾಯಣ ಗುರು ಯುವ ಸಂಚಲನ ಅಧ್ಯಕ್ಷ ಜಯಂತ್ ಪೂಜಾರಿ, ಇಂಜಿನಿಯರ್ ಇಮ್ರಾನ್, ಫಾರೂಕ್ ಕಿನ್ಯ ಎನ್.ಕೆ.ಮುಹಮ್ಮದ್, ಸಾಧುಕುಂಞಿ ಸಾಗ್ ಬಾಗ್, ಸಾಮಾಜಿಕ ಮುಖಂಡ ಎಂ.ಎಂ. ಮುಹಮ್ಮದ್ ಬಶೀರ್ ಕಿನ್ಯ ಉಪಸ್ಥಿತರಿದ್ದರು.

# ಕುಡಿಯುವ ನೀರಿನ ಸಮಸ್ಯೆ ನಿವಾರಣೆಗೆ ತುರ್ತು ಸಭೆ: ಯು.ಟಿ.ಖಾದರ್ ಸೂಚನೆ



**■ ಕುಡಿಯುವ ನೀರಿನ ಸಮಸ್ಯೆ ಬಹುಮಟ್ಟಿಗೆ ಕಡಿಮೆಯಾಗಿದ್ದು, ಶೇ.100ರ ಅನುಷ್ಠಾನದತ್ತ ಕ್ರಮ ಕೈಗೊಳ್ಳಲಾಗುತ್ತಿದೆ**

**ಪಡೀಲ್;** ಮಂಗಳೂರಿನ ಪಡೀಲ್‌ನ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿರುವ ಶಾಸಕರ ಸಭಾಂಗಣದಲ್ಲಿ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳೊಂದಿಗೆ ಕುಡಿಯುವ ನೀರಿನ ಸಮಸ್ಯೆ ಕುರಿತು ವಿಶೇಷ ತುರ್ತು ಸಭೆ ನಡೆಯಿತು.

ಸಭೆಯನ್ನು ಉದ್ದೇಶಿಸಿ ಮಾತನಾಡಿದ ವಿಧಾನಸಭಾಧ್ಯಕ್ಷರಾದ ಯು.ಟಿ. ಖಾದರ್, ಜನಸಾಮಾನ್ಯರಿಗೆ ಯಾವುದೇ ರೀತಿಯ ಕುಡಿಯುವ ನೀರಿನ ಅಭಾವ ಉಂಟಾಗದಂತೆ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ಸೂಚಿಸಿದರು.

ಕುಡಿಯುವ ನೀರಿನ ಯೋಜನೆಗಳಿಗೆ ಸಂಬಂಧಿಸಿದಂತೆ ಎಲ್ಲಾ ಪಿಡಿಓಗಳು, ಆಡಳಿತಾಧಿಕಾರಿಗಳು, ಜಲ್ ಜೀವನ್ ಮಿಷನ್ (ಜೆಜೆಎಂ) ಹಾಗೂ ಮಲ್ಟಿ ಸ್ಕೀಂ ಇಂಜಿನಿಯರ್‌ಗಳು ಕಾರ್ಯಕ್ಷಮವಾಗಿ ಕೆಲಸ ನಿರ್ವಹಿಸುವಂತೆ ಸೂಚನೆ ನೀಡಲಾಯಿತು.

ಜಿಲ್ಲಾ ಪಂಚಾಯತ್ ಗ್ರಾಮೀಣಾಭಿವೃದ್ಧಿ ಇಲಾಖೆಯ ಮೂಲಕ ಜಲ್ ಜೀವನ್ ಮಿಷನ್ ಯೋಜನೆಯಡಿ ಹಲವೆಡೆ ಪೈಪ್‌ಲೈನ್ ಕಾಮಗಾರಿ ನಡೆಯುತ್ತಿದ್ದು, ಬಹುಗ್ರಾಮ ಕುಡಿಯುವ ನೀರಿನ ಯೋಜನೆಯಡಿ ನೇತ್ರಾವತಿ ನದಿಯಿಂದ ನೇರ ಪೈಪ್‌ಲೈನ್ ಮೂಲಕ ನೀರು ಪೂರೈಕೆ ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಓವರ್‌ಹೆಡ್ ಟ್ಯಾಂಕ್‌ಗಳ ನಿರ್ಮಾಣಕ್ಕೆ ಆದ್ಯತೆ ನೀಡಲಾಗುತ್ತಿದ್ದು, 56 ಟ್ಯಾಂಕ್‌ಗಳಿಗೆ ನೇರ ಸಂಪರ್ಕ ಒದಗಿಸುವ ಯೋಜನೆ ರೂಪಿಸಲಾಗಿದೆ. ಯಾವುದೇ ತೊಂದರೆಗಳು ಉಂಟಾದಲ್ಲಿ ತಕ್ಷಣ ಟಾಸ್ಕ್‌ಫೋರ್ಸ್ ಮೂಲಕ ಸಮಸ್ಯೆ ಪರಿಹರಿಸಲು ಸೂಚಿಸಲಾಗಿದೆ.

ಈಗಾಗಲೇ ಕುಡಿಯುವ ನೀರಿನ ಸಮಸ್ಯೆ ಬಹುಮಟ್ಟಿಗೆ ಕಡಿಮೆಯಾಗಿದ್ದು, ಶೇ.100ರ ಅನುಷ್ಠಾನದತ್ತ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಅವರು ತಿಳಿಸಿದರು.

ಬಹುಗ್ರಾಮ ಯೋಜನೆಯ ಸುಮಾರು ಶೇ.80ರಷ್ಟು ಕಾಮಗಾರಿ ಪೂರ್ಣಗೊಂಡಿದ್ದು, ತಾತ್ಕಾಲಿಕ ನೇರ ಸಂಪರ್ಕಗಳ ಮೂಲಕ ಕೆಲವೆಡೆ ನೀರು ಪೂರೈಕೆ ಮಾಡಲಾಗುತ್ತಿದೆ. ಟ್ಯಾಂಕ್, ಪೈಪ್‌ಲೈನ್ ಮತ್ತು ಮೀಟರ್ ವ್ಯವಸ್ಥೆಗಳ ಕುರಿತು ಸಭೆಯಲ್ಲಿ ವಿಸ್ತೃತ ಚರ್ಚೆ ನಡೆಸಲಾಗಿದ್ದು, ಪ್ರಿನ್ಸಿಪಲ್ ಸೆಕ್ರೆಟರಿ ಹಾಗೂ ಸಂಬಂಧಿತ ಅಧಿಕಾರಿಗಳ ಮೂಲಕ ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜಿ.ಪಂ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ವಿನಾಯಕ್ ನರ್ವಡೆ, ಮುಡಾ ಅಧ್ಯಕ್ಷ ಸದಾಶಿವ ಉಳ್ಳಾಲ್, ನಗರ ವ್ಯಾಪ್ತಿಯ ಪಿಡಿಓ ಸಂತೋಷ್ ಉಪಸ್ಥಿತರಿದ್ದರು.

### ಬಸ್ ತಂಗುದಾಣಗಳ ಕೊರತೆ | ರಸ್ತೆ ಅಗಲೀಕರಣಗೊಳಿಸಿ ಬಸ್ ತಂಗುದಾಣಗಳನ್ನೇ ಮರೆತ ಅಧಿಕಾರಿಗಳು

# ಬಿರುಬಿಸಿಲಿನಲ್ಲೂ ಬಸ್ಸಿಗಾಗಿ ಪ್ರಯಾಣಿಕರ ಕಾಯಬೇಕಾದ ಪರಿಸ್ಥಿತಿ





**ಉಳ್ಳಾಲ:** ಉಳ್ಳಾಲ ಭಾಗದಲ್ಲಿ ಬಸ್ ತಂಗುದಾಣಗಳ ಕೊರತೆ ಹಾಗೂ ಅಸ್ತವ್ಯಸ್ಥೆಯಿಂದ ಸಾರ್ವಜನಿಕರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಅಸೈಗೋಳಿ ಜಂಕ್ಷನ್‌ನಲ್ಲಿ ರಸ್ತೆ ಅಗಲೀಕರಣದ ವೇಳೆ ತೆರವುಗೊಳಿಸಲಾದ ಬಸ್‌ಸ್ಟ್ಯಾಂಡ್ ಇಂದಿಗೂ ಪುನರ್‌ನಿರ್ಮಾಣವಾಗಿಲ್ಲ. ವಾಹನ ಸಂಚಾರ ಪುನರಾರಂಭವಾದರೂ ಪ್ರಯಾಣಿಕರಿಗೆ ಆಶ್ರಯದ ವ್ಯವಸ್ಥೆ ಇಲ್ಲದಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ. ಬಿರುಬಿಸಿಲಿನಲ್ಲೂ ಪ್ರಯಾಣಿಕರು ರಸ್ತೆಯ ಬದಿಯಲ್ಲಿ ನಿಂತು ಬಸ್‌ಗಾಗಿ ಕಾಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದ್ದು, ವಿಶೇಷವಾಗಿ ವೃದ್ಧರು, ಮಹಿಳೆಯರು ಮತ್ತು ವಿದ್ಯಾರ್ಥಿಗಳು ಹೆಚ್ಚಿನ ತೊಂದರೆ ಅನುಭವಿಸುತ್ತಿದ್ದಾರೆ.

ಅಲ್ಲದೆ, ಕೆಲವು ಕಡೆಗಳಲ್ಲಿ ತಂಗುದಾಣಗಳ ಬಳಿ ಅಗತ್ಯ ಸೌಲಭ್ಯಗಳ ಕೊರತೆ ಕೂಡ ಕಾಣಿಸುತ್ತಿದೆ. ಕುಳಿತುಕೊಳ್ಳಲು ಆಸನಗಳಿಲ್ಲದಿರುವುದು, ಮಳೆ–ಬಿಸಿಲಿನಿಂದ ರಕ್ಷಣೆಗಾಗಿ ಷೆಡ್‌ಗಳಿಲ್ಲ, ನಿರಂತರ ಧೂಳಿನಿಂದ ಸಾರ್ವಜನಿಕರ ಆರೋಗ್ಯದ ಮೇಲೂ ದುಷ್ಪರಿಣಾಮ ಬೀರುತ್ತಿದೆ. ಮುಡಿಪು ಜಂಕ್ಷನ್‌ನಿಂದ ತೊಕ್ಕೊಟ್ಟು ಜಂಕ್ಷನ್‌ವರೆಗೂ ಮೂರು ನಾಲ್ಕು ಸರಿಯಾದ ಬಸ್‌ತಂಗುದಾಣಗಳಷ್ಟೇ ಇವೆ. ಅದನ್ನು ಹೊರತೂ ಪಡಿಸಿದರೆ ಬೇರೆಲ್ಲಾ ಬಸ್‌ಸ್ಟ್ಯಾಂಡ್‌ಗಳು ಅಷ್ಟಕಷ್ಟೆ.. ಕೆಲ ಪ್ರದೇಶದಲ್ಲಿ ಒಂದು ಭಾಗದಲ್ಲಿ ತಂಗುದಾಣವಿದ್ದೂ, ಈ ಸಂದರ್ಭ ಪ್ರಯಾಣಿಕರು ಬಸ್ಸಿಗಾಗಿ ಆತುರತೆಯಿಂದ ರಸ್ತೆ ದಾಟುವ ವೇಳೆ ಅವಘಡಗಳು ಹೆಚ್ಚಾಗುತ್ತಿದೆ. ಆದ ಕಾರಣ ಎರಡು ಭಾಗದಲ್ಲೂ ಬಸ್ ತಂಗುದಾಣಗಳಿದ್ದರೇ ಉತ್ತಮ ಎಂಬುವುದು ಸಾರ್ವಜನಿಕರ ಅಭಿಪ್ರಾಯ.

ಇದರಿಂದಾಗಿ ಬಸ್ ಸೇವೆಗಳ ಬಳಕೆ ಕಡಿಮೆಯಾಗುತ್ತಿರುವುದರ ಜೊತೆಗೆ, ಖಾಸಗಿ ವಾಹನಗಳ ಅವಲಂಬನೆ ಹೆಚ್ಚುತ್ತಿದೆ. ಇದು ಸಂಚಾರ ದಟ್ಟಣೆಯನ್ನೂ ಹೆಚ್ಚಿಸುವ ಸಾಧ್ಯತೆ ಇದೆ. ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಸುಧಾರಿಸುವುದು ಅತ್ಯಗತ್ಯವಾಗಿದ್ದು, ತಂಗುದಾಣಗಳನ್ನು ಸುಸಜ್ಜಿತಗೊಳಿಸಲು ತ್ವರಿತ ಕ್ರಮ ಕೈಗೊಳ್ಳಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ತೊಕ್ಕೊಟ್ಟು ಮೂಲಕ ಮಂಗಳೂರು, ತಲಪಾಡಿ, ಉಳ್ಳಾಲ ಭಾಗಕ್ಕೆ ಪ್ರಯಾಣಿಸುವ ಪ್ರಯಾಣಿಕರು ಅಂಗಡಿಗಳ ಮುಂಭಾಗದಲ್ಲಿ ನಿಲ್ಲಬೇಕಾಗಿದ್ದು, ಬಸ್‌ಗಳು ರಿಕ್ಷಾಗಳ ಪಕ್ಕದಲ್ಲೇ ನಿಲ್ಲಿಸುವ ಅನಿವಾರ್ಯತೆ ಉಂಟಾಗಿದೆ. ಇದರಿಂದ ಪ್ರಯಾಣಿಕರು ಹಾಗೂ ರಿಕ್ಷಾ ಚಾಲಕರು ಇಬ್ಬರೂ ಸಮಸ್ಯೆ ಎದುರಿಸುತ್ತಿದ್ದಾರೆ.

**ಅಧಿಕಾರಿಗಳ ಮೌನ**

ಸಮಸ್ಯೆಗಳು ಹೆಚ್ಚುತ್ತಿದ್ದರೂ ಸಂಬಂಧಪಟ್ಟ ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳದಿರುವುದು ಸಾರ್ವಜನಿಕರ ಅಸಮಾಧಾನಕ್ಕೆ ಕಾರಣವಾಗಿದೆ. ತ್ವರಿತವಾಗಿ ತಂಗುದಾಣಗಳ ನಿರ್ಮಾಣ ಹಾಗೂ ಮೂಲಸೌಕರ್ಯ ಒದಗಿಸಲು ಕ್ರಮ ಕೈಗೊಳ್ಳಬೇಕೆಂದು ಜನರು ಒತ್ತಾಯಿಸಿದ್ದಾರೆ.

**ಪಾದಚಾರಿಗಳ ಸಂಕಷ್ಟ**

ತೊಕ್ಕೊಟ್ಟು ಓವರ್‌ಬ್ರಿಡ್ಜ್ ಕೆಳಭಾಗದಲ್ಲಿ ಬಸ್‌ಗಳ ಅವ್ಯವಸ್ಥಿತ ನಿಲುಗಡೆಯಿಂದ ಪಾದಚಾರಿಗಳಿಗೆ ರಸ್ತೆ ದಾಟುವುದು ಕಷ್ಟವಾಗಿದೆ. ಒಂದು ಕಡೆ ರಿಕ್ಷಾದವರು, ಮತ್ತೊಂದೆಡೆ ಬಸ್ಸಿಗಾಗಿ ಕಾಯುವ ಪ್ರಯಾಣಿಕರು, ಇನ್ನೊಂದೆಡೆ ವೇಗವಾಗಿ ಬರುವ ಬಸ್ಸಳು ಇವುಗಳ ಮಧ್ಯೆ ಪಾದಚಾರಿಗಳು ನಡೆದಾಡಲು, ರಸ್ತೆ ದಾಟಲು ಹರಸಾಹಸಪಡುವಂತಾಗಿದೆ. ಮಳೆಗಾಲದಲ್ಲಂತೂ ಕೊಡೆಗಳನ್ನು ಹಿಡಿದುಕೊಂಡು ಹೋಗುವ ಪಾದಚಾರಿಗಳ ಸಂಕಷ್ಟವನ್ನು ಹೇಳತೀರದ್ದಾಗಿದೆ.

# ಕೊಣಾಜೆ: ದೇವರಾಜ ಅರಸು ನಿಲಯದ 'ರಜತ ಸಂಭ್ರಮ'



**ಕೊಣಾಜೆ:** ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಡಿ.ದೇವರಾಜ ಅರಸು ಮೆಟ್ರಿಕ್ ನಂತರದ ಸ್ನಾತಕೋತ್ತರ ವಿದ್ಯಾರ್ಥಿ ನಿಲಯದ ರಜತ ಸಂಭ್ರಮದ ಹಾಸ್ಟೆಲ್ ಡೇ ಅನರ್ಘ್ಯ–2026 ಕಾರ್ಯಕ್ರಮ ವಿಜೃಂಭಣೆಯಿಂದ ನಡೆಯಿತು.

ಚಿತ್ರನಟ, ಹಿರಿಯ ರಂಗಭೂಮಿ ಕಲಾವಿದ ಅರವಿಂದ ಬೋಳಾರ್ ಕಾರ್ಯಕ್ರಮ ಉದ್ಘಾಟಿಸಿದರು. ಬಳಿಕ ಮಾತನಾಡಿದ ಇವರು, ಬೇರೆ ಬೇರೆ ಮನೆಯಿಂದ ಬಂದರೂ ಇಲ್ಲಿ ಒಂದೇ ಕುಟುಂಬದ ಸದಸ್ಯರಂತೆ ವಿದ್ಯಾರ್ಥಿಗಳು ಜೊತೆಯಾಗಿರುವುದು ವಿಶೇಷವಾದ ಅನುಭವವನ್ನು ನೀಡುತ್ತದೆ.ವಿದ್ಯಾ ಸಂಸ್ಥೆಗಳು ದೇವಸ್ಥಾನದಂತೆ ಶ್ರೇಷ್ಠ ಎಂದರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾಧಿಕಾರಿ ಬಿಂದಿಯಾ ನಾಯಕ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ ಶ್ರದ್ಧೆಯಿಂದ ಕೆಲಸ ಮಾಡಿದಾಗ ಯಶಸ್ಸು ಸಾಧಿಸಲು ಸಾಧ್ಯವಿದೆ. ಏನನ್ನು ಯೋಚಿಸುತ್ತೇವೆಯೋ ಅದೇ ಆಗುತ್ತೇವೆ.ಆ ನಿಟ್ಟಿನಲ್ಲಿ ವಿದ್ಯಾರ್ಥಿಗಳ ಪ್ರಯತ್ನ ಇರಲಿ ಎಂದು ಆಶಿಸಿದರು.

ಮಂಗಳೂರು ವಿಶ್ವವಿದ್ಯಾಲಯ ಕಾಲೇಜಿನ ಕನ್ನಡ ವಿಭಾಗದ ಪ್ರಾಧ್ಯಾಪಕ ಡಾ. ಮಾಧವ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಮಾತನಾಡಿ ವಿದ್ಯಾರ್ಥಿಗಳು ಆತ್ಮವಿಶ್ವಾಸದಿಂದ ಜೀವನ ನಡೆಸಿ ನಮ್ಮ ಗುರಿಯನ್ನು ಸಾಧಿಸ ಬೇಕೆಂದರು.

ಈ ಸಂದರ್ಭ ಸಾಧಕ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು. ನಿಲಯ ಪಾಲಕಿ ಭವಾನಿ ಹಾಗೂ ಅಡುಗೆ ಸಿಬ್ಬಂದಿಗಳನ್ನು ಗೌರವಿಸಲಾಯಿತು. ರಜತ ಸಂಭ್ರಮದ ಸ್ಮರಣ ಸಂಚಿಕೆಯನ್ನು ಬಿಡುಗಡೆಗೊಳಿಸಲಾಯಿತು. ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.

ನಿಲಯದ ವಿದ್ಯಾರ್ಥಿಗಳು ಅನಿಸಿಕೆ ವ್ಯಕ್ತ ಪಡಿಸಿದರು. ಅಸೈಗೋಳಿ ಪೊಲೀಸ್ ಠಾಣೆಯ ಉಪನಿರೀಕ್ಷಕ ನಾಗರಾಜ್, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮಂಗಳೂರು ತಾಲೂಕು ವಿಸ್ತರಣಾಧಿಕಾರಿ ಸಂಗಮೇಶ್, ಮಂಗಳೂರು ಹಾಪ್ ಕಾಮ್ಸ್ ನಿರ್ದೇಶಕ ರವಿ ಕುಮಾರ್ ಶೆಟ್ಟಿ, ರಾಯಿ ಶಾಲೆಯ ಶಿಕ್ಷಕ ಸಿದ್ದಪ್ಪ ದೊಡ್ಡ ಕರಿಯಪ್ಪ, ಕೊಣಾಜೆ ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷೆ ಗೀತಾ ಕುಂದರ್, ಕೊಣಾಜೆ ಅಲ್ಪಸಂಖ್ಯಾತರ ವಿದ್ಯಾರ್ಥಿ ನಿಲಯದ ನಿಲಯ ಪಾಲಕಿ ಲಸ್ಸೀನಾ, ಪ್ರಮುಖರಾದ ಜಯಾನಂದ ಶೆಟ್ಟಿ ಕೊಣಾಜೆ, ವಿವಿಧ ವಿದ್ಯಾರ್ಥಿ ನಿಲಯದ ನಿಲಯ ಪಾಲಕರಾದ ಕೃಷ್ಣರಾಜ್, ರಾಧೇಶ್ ತೊರ್ಕೆ, ಪುಷ್ಪಲತಾ, ಶಶಿಕಲಾ ಶೆಟ್ಟಿ, ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ನಿಲಯ ಪಾಲಕಿ ಭವಾನಿ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. 25 ವರ್ಷಗಳ ಅವಧಿಯಲ್ಲಿ ನಿಲಯ ಬೆಳೆದು ಬಂದ ಹಾದಿಯನ್ನು ತಿಳಿಸಿದರು. ವಿದ್ಯಾರ್ಥಿನಿರಾದ ಮೋಕ್ಷ ವಂದಿಸಿ, ಭೂಮಿಕಾ ಕಾರ್ಯಕ್ರಮ ನಿರೂಪಿಸಿದರು. ಬಳಿಕ ನಿಲಯದ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

# ಹಿಂದೂ ಯುವಸೇನೆ ಕೆರೆಬೈಲ್ ಕೊರಗಜ್ಜ ಶಾಖೆಯ ಬೆಳ್ಳಿ ಹಬ್ಬ ಪ್ರಯುಕ್ತ ವಿವಿಧ ಆಟೋಟ ಸ್ಪರ್ಧೆ



**ಉಳ್ಳಾಲ;** ಹಿಂದೂ ಯುವಸೇನೆ ಕೆರೆಬೈಲ್ ಕೊರಗಜ್ಜ ಶಾಖೆಯ 25ನೇ ವಾರ್ಷಿಕೋತ್ಸವದ ಬೆಳ್ಳಿಹಬ್ಬ ಹಾಗೂ ಬಿಸು ಪರ್ಬದ ಪ್ರಯುಕ್ತ ಕೆರೆಬೈಲಿನ ನಾಗರಕ್ತೇಶ್ವರಿ ಸಾನಿಧ್ಯದ ಬಳಿಯ ಮೈದಾನದಲ್ಲಿ ವಿವಿಧ ಆಟೋಟ ಸ್ಪರ್ಧೆಗಳು ಯಶಸ್ವಿಯಾಗಿ ನಡೆಯಿತು.

ಆಟೋಟ ಸ್ಪರ್ಧೆಕ್ಕೆ ಪತಂಜಲಿ ಯೋಗ ಶಿಕ್ಷಣ ಸಮಿತಿ ಕರ್ನಾಟಕ ನೇತ್ರಾವತಿ ವಲಯದ ಸಂಯೋಜಕರಾದ ಜಯರಾಮ್ ಚೆಂಬುಗುಡ್ಡೆ ಅವರು ಚಾಲನೆ ನೀಡಿದರು.

ಹಿಂದೂಯುವಸೇನೆಕೇಂದ್ರೀಯ ಮಂಡಳಿಯ ಗೌರವಾಧ್ಯಕ್ಷರಾದ ಭಾಸ್ಕರಚಂದ್ರ ಶೆಟ್ಟಿ,ಅಧ್ಯಕ್ಷರಾದ ಯಶೋಧರ ಚೌಟ,ಸಂಘಟನಾ ಕಾರ್ಯದರ್ಶಿ ನವೀನ್ ಚಂದ್ರ ಎಕ್ಕೂರು,ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸೇವಾ ಪ್ರತಿನಿಧಿ ಅನುಸೂಯ, ಧರ್ಮ ಸಾಕ್ಷಿ ಒಕ್ಕೂಟದ ಅರುಣ್, ಕೆರೆಬೈಲ್ ಕೊರಗ ತನಿಯ ಸೇವಾ ಸಮಿತಿಯ ಕೋಶಾಧಿಕಾರಿ ರಾಜ ಮೆಸ್ತ್ರಾಂ, ಹಿಂದೂ ಯುವಸೇನೆ ಕೊರಗಜ್ಜ ಶಾಖೆಯ ಅಧ್ಯಕ್ಷರಾದ ನಾರಾಯಣ.ಬಿ ಹಾಗೂ ಗೌರವಾಧ್ಯಕ್ಷರಾದ ಲೋಕೇಶ್ ಶೆಟ್ಟಿ ಮೊದಲಾದವರು ಉಪಸ್ಥಿತರಿದ್ದರು.

ಮಕ್ಕಳು, ಮಹಿಳೆಯರು ಹಾಗೂ ಪುರುಷರಿಗಾಗಿ ವಿವಿಧ ಕ್ರೀಡಾ ಸ್ಪರ್ಧೆಗಳು ನಡೆಯಿತು. ಮಹಿಳೆಯರಿಗಾಗಿ ಆಯೋಜಿಸಲಾದ ಬೀಡಿ ಕಟ್ಟುವ ಸ್ಪರ್ಧೆಯು ವಿಶೇಷ ಆಕರ್ಷಣೆಯಾಗಿತ್ತು. ದಿನೇಶ್ ಶೆಟ್ಟಿ ಚೆಂಬುಗುಡ್ಡೆ ಕಾರ್ಯಕ್ರಮ ನಿರೂಪಿಸಿದರು.

ಹಿಂದೂ ಯುವಸೇನೆ ಕೆರೆಬೈಲ್ ಕೊರಗಜ್ಜ ಶಾಖೆಯ ಇಪ್ಪತ್ತೈದನೇ ವಾರ್ಷಿಕೋತ್ಸವದ ಅಂಗವಾಗಿ ಏ.4ರಂದು ಬೃಹತ್ ರಕ್ತದಾನ ಶಿಬಿರ, ಏ.5ರಿಂದ 12ರವರೆಗೆ ಸಂಧ್ಯಾ ಭಜನೆ, ಏ.13ರಂದು ಆಶ್ಲೇಷ ಬಲಿ ನಡೆಯಲಿದೆ.

## ನಿಧನ ಸುದ್ದಿ

### ಕಂಬಳಪದವಿನಲ್ಲಿ ಅಪಘಾತ: ಬೈಕ್‌ಗೆ ಲಾರಿ ಡಿಕ್ಕಿ: ಸವಾರ ಮೃತ್ಯು

**ಕೊಣಾಜೆ:** ಬೈಕೊಂದಕ್ಕೆ ಲಾರಿಯೊಂದು ಡಿಕ್ಕಿ ಹೊಡೆದು ಸವಾರ ಸಾವನ್ನಪ್ಪಿದ ಘಟನೆ ಕೊಣಾಜೆ ಠಾಣಾ ವ್ಯಾಪ್ತಿಯ ಕಂಬಳಪದವು ಬಳಿ ನಡೆದಿದೆ.



ನಡುಪದವಿನ ಸುಶಾಂತ್ (23 ) ಮೃತಪಟ್ಟ ದುರ್ದೈವಿಯಾಗಿದ್ದಾರೆ. ಡಿಕ್ಕಿ ಹೊಡೆದ ರಭಸಕ್ಕೆ ಬೈಕ್ ಸವಾರ ರಸ್ತೆಗೆ ಎಸೆಯಲ್ಪಟ್ಟಿದ್ದು, ಈ ಸಂದರ್ಭದಲ್ಲಿ ತಲೆಗೆ ಗಂಭೀರವಾದ ಗಾಯವಾಗಿದೆ. ಕೂಡಲೇ ಆತನನ್ನು ದೇರಳಕಟ್ಟೆಯ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದ್ದರೂ ಚಿಕಿತ್ಸೆ ಫಲಕಾರಿಯಾಗದೆ ಕೊನೆಯುಸಿರೆಳೆದಿದ್ದಾರೆ. ಲಾರಿ ಚಾಲಕ ಬೈಕ್‌ಗೆ ಡಿಕ್ಕಿ ಹೊಡೆದರೂ ಲಾರಿಯನ್ನು ನಿಲ್ಲಿಸದೆ ಪರಾರಿಯಾಗಿದ್ದು, ಸಾರ್ವಜನಿಕರು ಆಕ್ರೋಶಗೊಂಡಿದ್ದರು. ಬಳಿಕ ಪೊಲೀಸರು ಲಾರಿಯನ್ನು ಪತ್ತೆಹಚ್ಚಿ ವಶಪಡಿಸಿಕೊಂಡಿದ್ದು, ತನಿಖೆ ಮುಂದುವರಿಸಿದ್ದಾರೆ.

### ಕೊಣಾಜೆ ಪ್ರೌ.ಶಾಲಾ ಎಸ್‌ಡಿಎಂಸಿ ಸದಸ್ಯರಾಗಿದ್ದ ಸೂಫಿಕುಂಞಿ ಕೆ.ಎಂ. ಕೋಡಿಜಾಲ್ ನಿಧನ

**ಕೊಣಾಜೆ:** ಕೊಣಾಜೆ ಪ್ರೌಢಶಾಲೆಯ ಎಸ್‌ಡಿಎಂಸಿ ಹಾಗೂ ಕೋಡಿಜಾಲ್ ಜುಮಾ ಮಸೀದಿಯ ಆಡಳಿತ ಸಮಿತಿ ಸದಸ್ಯರಾಗಿದ್ದ ಕೊಣಾಜೆ ಗ್ರಾಮದ ಕೋಡಿಜಾಲ್ ನಿವಾಸಿ ಸೂಫಿಕುಂಞಿ ಕೆ.ಎಂ. ಕೋಡಿಜಾಲ್(63) ಅನಾರೋಗ್ಯ ಸಮಸ್ಯೆಯಿಂದ ನಿಧನರಾಗಿದ್ದಾರೆ. ಇವರ ಪುತ್ರಿ ಫಾತಿಮಾ ಶಿರ್ಝಾ



ಕೊಣಾಜೆ ಪ್ರೌಢಶಾಲೆಯಲ್ಲಿ 10ನೇ ತರಗತಿಯ ವಿದ್ಯಾರ್ಥಿನಿಯಾಗಿದ್ದು ಎಸೆಸ್ಸೆಲ್ಸಿ ಪರೀಕ್ಷೆ ಇದ್ದ ಹಿನ್ನೆಲೆಯಲ್ಲಿ ಆಕೆ ಪರೀಕ್ಷೆಗೆ ತೆರಳಿದ ಬಳಿಕ ಮೃತದೇಹವನ್ನು ಮನೆಗೆ ತರಲಾಗಿದೆ. ಈ ಬಗ್ಗೆ ಮಾಹಿತಿ ತಿಳಿದ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕಿ ಮೀನಾ ಗಾಂವ್ಕರ್ ಅವರು ಶಿರ್ಝಾ ಪರೀಕ್ಷೆ ಬರೆದ ಕೂಡಲೇ ಮನೆಗೆ ಕಳುಹಿಸಿ ಮಾನವೀಯತೆ ಮೆರೆದಿದ್ದಾರೆ. ತಂದೆ ಆಗಲಿಕೆ ಸುದ್ದಿ ತಿಳಿದು ಆಘಾತಗೊಂಡಿದ್ದಳು.

ಕುಂಞ ಅವರು ಹೃದಯ ಸಂಬಂಧಿ ಸಮಸ್ಯೆಯಿಂದ ನಾಲ್ಕು ದಿನಗಳ ಹಿಂದೆ ಆಸ್ಪತ್ರೆಗೆ ದಾಖಲಾಗಿದ್ದರು. ಎರಡು ದಿನಗಳ ಹಿಂದೆ ಶಸ್ತ್ರಚಿಕಿತ್ಸೆ ಮಾಡಲಾಗಿತ್ತು. ಆದರೆ ಮಂಗಳವಾರ ನಸುಕಿನ ಜಾವ ಮೃತಪಟ್ಟಿದ್ದಾರೆ.

ಮೃತರು ಪತ್ನಿ, ಗಂಡು ಮತ್ತು ಇಬ್ಬರು ಹೆಣ್ಣು ಮಕ್ಕಳನ್ನು ಅಗಲಿದ್ದಾರೆ.

### ಉದ್ಯಮಿ, ಕೊಡುಗೈದಾನಿ ಯು.ಎನ್.ಅಬ್ದುಲ್ ರಝಾಕ್ ಹಾಜಿ ನಿಧನ

**ಆಝಾದ್ ನಗರ:** ಉದ್ಯಮಿ, ಕೊಡುಗೈದಾನಿ, ಸಮಾಜ ಸೇವಕ, ಶಿಕ್ಷಣ ಪ್ರೇಮಿ ಉಳ್ಳಾಲದ ಆಝಾದ್ ನಗರ ನಿವಾಸಿ ಯು.ಎನ್. ಅಬ್ದುಲ್ ರಝಾಕ್ ಹಾಜಿ (80) ನಗರದ ಖಾಸಗಿ ಆಸ್ಪತ್ರೆಯಲ್ಲಿ ಹೃದಯಾಘಾತದಿಂದ ನಿಧನರಾದರು.



ಅವರು ಪತ್ನಿ, ನಾಲ್ಕು ಮಂದಿ ಪುತ್ರರು ಮತ್ತು ನಾಲ್ಕು ಮಂದಿ ಪುತ್ರಿಯರು ಹಾಗೂ ಅಪಾರ ಬಂಧುಬಳಗವನ್ನು ಅಗಲಿದ್ದಾರೆ. ಫಹಾದ್ ಫಿಶ್ ಮಿಲ್ ನಡೆಸುತ್ತಿದ್ದ ಅಬ್ದುಲ್ ರಝಾಕ್ ಹಾಜಿ ಸಲಫಿ ಚಳುವಳಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು.

ಸೌತ್ ಕರ್ನಾಟಕ ಸಲಫಿ ಮೂವ್ಮೆಂಟ್ ಹಾಗೂ ಮಂಗಳೂರಿನ ಇಬ್ರಾಹೀಂ ಖಲೀಲ್ ಮಸ್ಜಿದ್ ಹಾಗೂ ಉಳ್ಳಾಲದ ಇಸ್ಲಾಹಿ ಸ್ಕೂಲ್ ಮತ್ತು ಕಲ್ಲಾಪಿನ ಪೀಸ್ ಸ್ಕೂಲ್‌ನ ಸ್ಥಾಪಕ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು.

ಕೊಡುಗೈ ದಾನಿಯಾಗಿದ್ದ ಅಬ್ದುಲ್ ರಝಾಕ್ ಹಾಜಿ ಸಮಾಜ ಸೇವೆಯಲ್ಲಿ ಸಕ್ರಿಯರಾಗಿದ್ದರು. ಶಿಕ್ಷಣದ ಬಗ್ಗೆ ಅಪಾರ ಒಲವು ಇತ್ತು. ಅದಕ್ಕಾಗಿ ಆರ್ಥಿಕವಾಗಿ ಹಿಂದುಳಿದ ಮಕ್ಕಳಿಗೆ ನೆರವು ನೀಡುವುದರಲ್ಲಿ ಸದಾ ಮುಂಚೂಣಿಯಲ್ಲಿದ್ದರು.

## ಎಂಸಿಸಿ ಬ್ಯಾಂಕ್ ಅಭೂತಪೂರ್ವ ದಾಖಲೆ

# ರೂ.13 ಕೋಟಿ ನಿವ್ವಳ ಲಾಭ : ಸಹಕಾರಿ ರತ್ನ ಅನಿಲ್ ಲೋಬೊ

ಮಂಗಳೂರು: ಶತಮಾನೋತ್ತರ ಇತಿಹಾಸವಿರುವ ಮಂಗಳೂರಿನ ಎಂಸಿಸಿ ಬ್ಯಾಂಕ್ (ದಿ ಕೆನರಾ ಕ್ಯಾಥೋಲಿಕ್ ಸೆಂಟ್ರಲ್ ಕೋ–ಆಪರೇಟಿವ್ ಬ್ಯಾಂಕ್ ಲಿ.) 2025–26ನೇ ಹಣಕಾಸು ವರ್ಷದಲ್ಲಿ ಅಭೂತಪೂರ್ವ ಆರ್ಥಿಕ ಪ್ರಗತಿ ಸಾಧಿಸಿದೆ. ಬ್ಯಾಂಕ್ ಈ ವರ್ಷ 13 ಕೋಟಿ ರೂಪಾಯಿಗಳ ನಿವ್ವಳ ಲಾಭ ದಾಖಲಿಸಿದ್ದು, ಒಟ್ಟು ವ್ಯವಹಾರದಲ್ಲಿ ಶೇ. 23ರಷ್ಟು ವೃದ್ಧಿ ಸಾಧಿಸಿದೆ ಎಂದು ಬ್ಯಾಂಕಿನ ಅಧ್ಯಕ್ಷರಾದ 'ಸಹಕಾರಿ ರತ್ನ' ಅನಿಲ್ ಲೋಬೋ ಅವರು ತಿಳಿಸಿದರು. ಮಂಗಳೂರಿನ ಬ್ಯಾಂಕ್ ಸಭಾಂಗಣದಲ್ಲಿ ಮಂಗಳವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬ್ಯಾಂಕಿನ ಆರ್ಥಿಕ ಸ್ಥಿತಿಗತಿ ಮತ್ತು ಭವಿಷ್ಯದ ವಿಸ್ತರಣಾ ಯೋಜನೆಗಳ ಸಮಗ್ರ ಚಿತ್ರಣವನ್ನು ನೀಡಿದರು. ಮೂರು ಪಟ್ಟು ಹೆಚ್ಚಾದ ವ್ಯವಹಾರದ ವಹಿವಾಟು 2018ರಲ್ಲಿ ಪ್ರಸ್ತುತ ಆಡಳಿತ ಮಂಡಳಿ ಅಧಿಕಾರ ವಹಿಸಿಕೊಂಡಾಗ ಬ್ಯಾಂಕಿನ ಒಟ್ಟು ವ್ಯವಹಾರ 500 ಕೋಟಿ ರೂಪಾಯಿ ಇತ್ತು. ಆದರೆ, ಕಳೆದ ಎಂಟು ವರ್ಷಗಳ ಅವಧಿಯಲ್ಲಿ ಇದು ಮೂರು ಪಟ್ಟು ಹೆಚ್ಚಾಗಿ ಮಾರ್ಚ್ 31, 2026ರ ಅಂತ್ಯಕ್ಕೆ 1,525 ಕೋಟಿ ರೂಪಾಯಿಗಳಿಗೆ ತಲುಪಿದೆ. ಇದು ಬ್ಯಾಂಕಿನ 114 ವರ್ಷಗಳ ಇತಿಹಾಸದಲ್ಲೇ ಅತಿ ದೊಡ್ಡ ದಾಖಲೆಯಾಗಿದೆ. ಈ ಅವಧಿಯಲ್ಲಿ ನಿವ್ವಳ ಎನ್‌ಪಿಎ ಪ್ರಮಾಣವನ್ನು ಗಣನೀಯವಾಗಿ ಇಳಿಕೆ ಮಾಡಲಾಗಿದ್ದು, ಪ್ರಸ್ತುತ ಇದು ಶೇ. 1.25ರಷ್ಟಿದೆ ಎಂದು ಅವರು ಮಾಹಿತಿ ನೀಡಿದರು. ಆರ್ಥಿಕ ಪ್ರಗತಿಯ ಮುಖ್ಯಾಂಶಗಳು: ಲಾಭಾಂಶ: 2025–26ನೇ ಸಾಲಿನಲ್ಲಿ 13 ಕೋಟಿ ರೂ. ಲಾಭ (ತೆರಿಗೆ ಪೂರ್ವ). ಠೇವಣಿ: 872.88 ಕೋಟಿ ರೂ. ಠೇವಣಿ ಸಂಗ್ರಹವಾಗಿದ್ದು, ಕಳೆದ ವರ್ಷಕ್ಕಿಂತ ಶೇ. 23.74ರಷ್ಟು ಏರಿಕೆ ಕಂಡಿದೆ. ಸಾಲ ವಿತರಣೆ: 652.06 ಕೋಟಿ ರೂ. ಸಾಲ ನೀಡಲಾಗಿದ್ದು, ಶೇ. 21.79ರಷ್ಟು ಪ್ರಗತಿ ಸಾಧಿಸಲಾಗಿದೆ. ಬಂಡವಾಳ: ದುಡಿಯುವ ಬಂಡವಾಳ 1008.97 ಕೋಟಿ ರೂ.ಗಳಿಗೆ ಏರಿಕೆಯಾಗಿದ್ದು, ಶೇ. 21.52ರಷ್ಟು ವೃದ್ಧಿಯಾಗಿದೆ. ಸಿಆರ್‌ಎಆರ್ (ಅಖಂಖ): ಇದು ಶೇ. 17ರಷ್ಟಿದ್ದು, ನಿಗದಿಪಡಿಸಿದ ಶೇ. 12ರ ಮಾನದಂಡಕ್ಕಿಂತ ಹೆಚ್ಚಿದೆ. ಶಾಖಾ ವಿಸ್ತರಣೆ ಮತ್ತು ಆಧುನಿಕ ಸೇವೆಗಳು ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ ಮತ್ತು ಉಡುಪಿಗೆ ಸೀಮಿತವಾಗಿದ್ದ ಬ್ಯಾಂಕ್ ಈಗ ರಾಜ್ಯಾದ್ಯಂತ ತನ್ನ ವ್ಯಾಪ್ತಿಯನ್ನು ವಿಸ್ತರಿಸುತ್ತಿದೆ. ಹೊಸ ಶಾಖೆಗಳು: ಜೂನ್ ಅಂತ್ಯದೊಳಗೆ ದೇರಳಕಟ್ಟೆಯಲ್ಲಿ 22ನೇ ಶಾಖೆ ಹಾಗೂ ಆಗಸ್ಟ್‌ನಲ್ಲಿ ಉಡುಪಿ ಜಿಲ್ಲೆಯ ಕಟಪಾಡಿಯಲ್ಲಿ 23ನೇ ಶಾಖೆ ಆರಂಭವಾಗಲಿದೆ. ಮುಂದಿನ ವರ್ಷದ ಅಂತ್ಯದೊಳಗೆ ವಾಮಂಜೂರು ಮತ್ತು ಮಂಗಳೂರಿನ ಸಿಲ್ವರ್ ಶಾಖೆ ಸೇರಿದಂತೆ ಒಟ್ಟು 25 ಶಾಖೆಗಳ ಗುರಿ ಹೊಂದಲಾಗಿದೆ. ಒಟ್ಟು ಎಟಿಎಂಗಳ ಸಂಖ್ಯೆ 15ಕ್ಕೆ ಏರಿದೆ. ಬ್ಯಾಂಕ್ ಸಂಪೂರ್ಣವಾಗಿ ಕೋರ್ ಬ್ಯಾಂಕಿಂಗ್‌ನಡಿ ಕಾರ್ಯನಿರ್ವಹಿಸುತ್ತಿದೆ.



> ಹೊಸ ಶಾಖೆಗಳು: ಜೂನ್ ಅಂತ್ಯದೊಳಗೆ ದೇರಳಕಟ್ಟೆಯಲ್ಲಿ 22ನೇ ಶಾಖೆ ಹಾಗೂ ಆಗಸ್ಟ್‌ನಲ್ಲಿ ಉಡುಪಿ ಜಿಲ್ಲೆಯ ಕಟಪಾಡಿಯಲ್ಲಿ 23ನೇ ಶಾಖೆ ಆರಂಭವಾಗಲಿದೆ. ಮುಂದಿನ ವರ್ಷದ ಅಂತ್ಯದೊಳಗೆ ವಾಮಂಜೂರು ಮತ್ತು ಮಂಗಳೂರಿನ ಸಿಲ್ವರ್ ಶಾಖೆ ಸೇರಿದಂತೆ ಒಟ್ಟು 25 ಶಾಖೆಗಳ ಗುರಿ ಹೊಂದಲಾಗಿದೆ.

# ಎನ್‌ಐಟಿಕೆ ವರದಿ ಜಿಲ್ಲಾಡಳಿತಕ್ಕೆ ಸಲ್ಲಿಕೆ, ಕ್ರಮ ಯಾವಾಗ?

**ಮಂಜನಾಡಿ ಅಶ್ವಿನಿ ಪ್ರಕರಣ**

ಎರಡು ಮುದ್ದಾದ ಮಕ್ಕಳ ಮುಗ್ಧ ನಗು ಶಾಶ್ವತವಾಗಿ ಮರೆಯಾದ ಆ ಮನೆಯಲ್ಲಿ ಇಂದು ಕೇವಲ ಕಣ್ಣೀರಿನ ಶಬ್ದ ಮಾತ್ರ ಉಳಿದಿದೆ. ತನ್ನ ಎರಡೂ ಕಾಲುಗಳನ್ನು ಕಳೆದುಕೊಂಡ ತಾಯಿ ಅಶ್ವಿನಿ ಇನ್ನು ಮುಂದೆ ಎದ್ದು ನಡೆಯಲಾರಳು, ತನ್ನ ಮಡಿಲಿಗೆ ಮಕ್ಕಳು ಬರುವ ಸುಖವನ್ನೂ ಕಳೆದುಕೊಂಡಳು. ಮಾವನ ಒಂದು ಕಾಲು ತುಂಡಾಗಿದೆ, ಅತ್ತೆಯ ದೇಹ ಮಣ್ಣಿನಡಿಯಲ್ಲಿ ಶಾಶ್ವತವಾಗಿ ಅಡಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಮಂಜನಾಡಿ ಗ್ರಾಮದ ಉರುಮನೆಯಲ್ಲಿ ಮೇ 30 2025 ರಂದು ಸಂಭವಿಸಿದ ಈ ಭೂಸ್ಖಲನ ದುರಂತ ಒಂದು ಕುಟುಂಬವನ್ನು ಅಕ್ಷರಶಃ ಸಮಾಧಿ ಮಾಡಿದೆ. ಮೂವರು ಸಾವು, ಇಬ್ಬರು ಶಾಶ್ವತ ಅಂಗವೈಕಲ್ಯ ಇದು ಅಂಕಿ ಅಂಶವಲ್ಲ, ಇದು ಜೀವಂತ ಶೋಕದ ಕಥನ. ಈ ಹೃದಯ ವಿದ್ರಾವಕ ಘಟನೆಯ ತಾಂತ್ರಿಕ ತನಿಖಾ ವರದಿಯನ್ನು ರಾಷ್ಟ್ರೀಯ ತಂತ್ರಜ್ಞಾನ ಸಂಸ್ಥೆ ಸುರತ್ಕಲ್ ಸಿವಿಲ್ ಇಂಜಿನಿಯರಿಂಗ್ ವಿಭಾಗವು ಜಿಲ್ಲಾಡಳಿತಕ್ಕೆ ರವಾನಿಸಿದೆ. ವರದಿಯ ತೀರ್ಮಾನ ಸ್ಪಷ್ಟವಾಗಿದೆ ಸುಮಾರು ಎಪ್ಪತ್ತು ಅಡಿ ಗುಡ್ಡವನ್ನು ಅಗೆದು ನಿರ್ಮಿಸಲಾದ ಅವೈಜ್ಞಾನಿಕ ರಸ್ತೆಯೇ ಈ ದುರಂತಕ್ಕೆ ಪ್ರಮುಖ ಕಾರಣ. ಭಾರೀ ಮಳೆ ಕೇವಲ ವೇಗವರ್ಧಕವಾಗಿ ಕಾರ್ಯನಿರ್ವಹಿಸಿತು. ನೀರು ಹಾಯಿಸುವ ವ್ಯವಸ್ಥೆಯ ಕೊರತೆ, ಇಳಿಜಾರಿನ ಕೆಳಭಾಗದಲ್ಲಿ ಮಣ್ಣಿನ ತೊಡಕು, ಮನೆ ಮತ್ತು ರಸ್ತೆ ನಿರ್ಮಾಣಕ್ಕಾಗಿ ಸ್ವಾಭಾವಿಕ ಸ್ಥಿರತೆಯನ್ನು ಹಾಳುಮಾಡಲಾಯಿತು. ಭೂಕುಸಿತವು ಒಂದೇ ಕಾರಣದಿಂದಾಗಲಿಲ್ಲ, ಭಾರೀ ಮಳೆ ಮತ್ತು ಮಾನವ ನಿರ್ಮಿತ ನಿರ್ಲಕ್ಷ್ಯದ ಸಂಯೋಗವೇ ಈ ದುರಂತಕ್ಕೆ ಕಾರಣ ಎಂದು ಎಂಟಿಕೆ ತಜ್ಞರು ಸ್ಪಷ್ಟಪಡಿಸಿದ್ದಾರೆ. ಆದರೆ ಈ ವರದಿಯಲ್ಲಿಯೂ ಕೆಲವು ಪ್ರಶ್ನೆಗಳು ಉತ್ತರಿಸದೆ ಉಳಿದಿವೆ. ಮನೆ ಮತ್ತು ಅವೈಜ್ಞಾನಿಕ ರಸ್ತೆಯ ನಡುವಿನ ನಿಖರ ದೂರವೇನು? ಸಂಪೂರ್ಣ ಮಾನವ ಶ್ರಮ ನಿರ್ಮಿತ ರಸ್ತೆಯ ಬಗ್ಗೆ ಸಮರ್ಪಕ ನಮೂದು ಏಕಿಲ್ಲ? ಇಂಜಿನಿಯರಿಂಗ್ ಸಂಸ್ಥೆಯ ವರದಿಯಲ್ಲಿ ಇಂಜಿನಿಯರಿಂಗ್ ವೈಫಲ್ಯದ ಪೂರ್ಣ ವಿವರಗಳು ಏಕೆ ಮರೆಯಾಗಿವೆ? ಗ್ರಾಮಸ್ಥರ ಪ್ರಶ್ನೆಗಳು ಅಂತ್ಯವಿಲ್ಲದವು, ಆದರೆ ಉತ್ತರಗಳು ಮಾತ್ರ ಬರುತ್ತಿಲ್ಲ. ವಿಧಿ ತಜ್ಞರ ಪ್ರಕಾರ, ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 105 ನಿರ್ಲಕ್ಷ್ಯದಿಂದ ಮರಣಕ್ಕೆ ಕಾರಣವಾದ ಪ್ರಕರಣದಲ್ಲಿ ಮೂರು ವರ್ಷಗಳವರೆಗೆ ಕಾರಾವಾಸದ ಶಿಕ್ಷೆಯನ್ನು ವಿಧಿಸಬಹುದು. ಸೆಕ್ಷನ್ 106 ನಿರ್ಲಕ್ಷ್ಯದಿಂದ ಗಂಭೀರ ಅಂಗವೈಕಲ್ಯಕ್ಕೆ ಕಾರಣವಾದರೆ ಎರಡು ವರ್ಷಗಳ ಕಾರಾವಾಸ ಮತ್ತು ದಂಡವನ್ನು ನಿಗದಿಪಡಿಸುತ್ತದೆ. ಇನ್ನೂ ಮುಂದೆ ಹೋದರೆ, ಭಾರತೀಯ ಸಾಕ್ಷ್ಯ ಅಧಿನಿಯಮದ ಅಡಿಯಲ್ಲಿ ಅಧಿಕೃತ ನಿರ್ಲಕ್ಷ್ಯ ಸಾಬೀತಾದರೆ ಹೆಚ್ಚಿನ ಕ್ರಿಮಿನಲ್ ಹೊಣೆಗಾರಿಕೆಯೂ ಸಾಧ್ಯವಿದೆ.



ಆದರೆ ಎಂಟಿಕೆ ವರದಿ ಜಿಲ್ಲಾಡಳಿತದ ಕೈಸೇರಿದ ನಂತರವೂ ಇನ್ನೂ ಯಾವುದೇ ಪ್ರಥಮ ಮಾಹಿತಿ ವರದಿ ದಾಖಲಾಗಿಲ್ಲ, ಯಾವುದೇ ತಾಂತ್ರಿಕ ಸಾಕ್ಷ್ಯಾಧಾರ ಸಂಗ್ರಹವಾಗಿಲ್ಲ, ಯಾವುದೇ ಅಧಿಕಾರಿ ವಿರುದ್ಧ ಕಾನೂನು ಕ್ರಮ ಆರಂಭವಾಗಿಲ್ಲ. ಗ್ರಾಮಸ್ಥರ ಕೋರಿಕೆಯನ್ನು ಕೇಳಿ. ಆ ಕುಟುಂಬದ ಬಳಿ ನಿಂತು, ಅವರ ದುಃಖವನ್ನು ಹಂಚಿಕೊಳ್ಳಬೇಕೆಂದು ಗ್ರಾಮಸ್ಥರು ಜಿಲ್ಲಾಧಿಕಾರಿಯವರನ್ನು ಬೇಡಿಕೊಳ್ಳುತ್ತಿದ್ದಾರೆ. ಕೇವಲ ಸಹಾನುಭೂತಿಯ ಪತ್ರದಿಂದಾಗಬಾರದು, ಅಪರಾಧಿಗಳ ವಿರುದ್ಧ ಕಾನೂನಿನ ಕತ್ತಿ ಜಾರಬೇಕು ಎಂದು ಅವರು ಹೇಳುತ್ತಾರೆ. ಈ ರಸ್ತೆ ಕಾಮಗಾರಿಗೆ ಅನುಮತಿ ನೀಡಿದ ಅಧಿಕಾರಿಯಾರು? ಮಣ್ಣಿನ ಸ್ಥಿತಿ ಪರೀಕ್ಷಿಸದೆ, ಇಳಿಜಾರಿನ ಸ್ಥಿರತೆಯನ್ನು ಲೆಕ್ಕಿಸದೆ, ಎಪ್ಪತ್ತು ಅಡಿ ಗುಡ್ಡವನ್ನು ಕತ್ತರಿಸಿದ ಆ ಇಂಜಿನಿಯರ್ ವಿರುದ್ಧ ಸೆಕ್ಷನ್ 105 ಮತ್ತು 106ರ ಅಡಿಯಲ್ಲಿ ದೂರು ದಾಖಲಿಸಬೇಕೆಂದು ಗ್ರಾಮಸ್ಥರು ಮತ್ತು ಕುಟುಂಬಸ್ಥರು. ನ್ಯಾಯ ತಡವಾದರೂ ಅನ್ಯಾಯವಾಗಬಾರದು ಎಂಬುದು ಅವರ ಮಾತು. ವರದಿ ಮಾತ್ರ ಬಂದು ಸಾಕಾಗದು, ಅದರ ಮೇಲೆ ಕಣ್ಣೀರಿನ ಅಕ್ಷರಗಳಲ್ಲಿ ಬರೆದ ಕಾನೂನು ಹೋರಾಟಕ್ಕೆ ಕ್ರಮ ಸಿಕ್ಕಾಗ ಮಾತ್ರ ಆ ಕುಟುಂಬಕ್ಕೆ ಸ್ವಲ್ಪ ಸಮಾಧಾನ ಸಿಗಬಹುದು. ನಮ್ಮ ಮಕ್ಕಳು ಸತ್ತುಹೋದರು, ನಮ್ಮ ಕಾಲುಗಳು ಹೋದವು, ಈಗ ನಮ್ಮ ನ್ಯಾಯವಾದರೂ ಬದುಕಬೇಕು ಎಂಬುದು ಆ ಕುಟುಂಬದ ಕರುಣಾಜನಕ ಮನವಿಯಾಗಿದೆ. ಜಿಲ್ಲಾಧಿಕಾರಿಯವರಿಗೆ ಗ್ರಾಮಸ್ಥರ ಸಂದೇಶವು ಸ್ಪಷ್ಟವಾಗಿದೆ ಸ್ಥಳಕ್ಕೆ ಭೇಟಿ ನೀಡಿ, ಸ್ವತಃ ದುಃಖದ ಗಾತ್ರವನ್ನು ಅಳೆಯಿರಿ, ನಿರ್ಲಕ್ಷ್ಯಕ್ಕೆ ಕಾರಣರಾದವರ ವಿರುದ್ಧ ಕ್ರಿಮಿನಲ್ ಕಾನೂನು ಪ್ರಕ್ರಿಯೆ ಆರಂಭಿಸಿ. ಇದು ಕೇವಲ ಒಂದು ಕುಟುಂಬದ ಬೇಡಿಕೆಯಲ್ಲ, ಇಡೀ ಮಂಜನಾಡಿ ಗ್ರಾಮದ ಸಾಮೂಹಿಕ ಪ್ರಾರ್ಥನೆಯಾಗಿದೆ. ನ್ಯಾಯ ತಡವಾದರೂ, ಅನ್ಯಾಯವಾಗಬಾರದು. ಕ್ರಮ ಯಾವಾಗ ಎಂಬ ಪ್ರಶ್ನೆಗೆ ಜಿಲ್ಲಾಡಳಿತ ಉತ್ತರಿಸಬೇಕಾದ ಸಮಯ ಈಗಲೇ ಆಗಿದೆ.

### ಮಂಜೇಶ್ವರ ಮಂಡಲದ ಯುಡಿಎಫ್ ಅಭ್ಯರ್ಥಿ ಎಕೆಎಂ ಅಶ್ರಫ್‌ರವರಿಗೆ ಇಡುಗಂಟು ಹಸ್ತಾಂತರಿಸಿದ ಅರ್ಜುನ್ ತಾಯಿ ಶೀಲಾ



**ಕಾಸರಗೋಡು:** ಶಿರೂರು ಭೂಕುಸಿತದಲ್ಲಿ ನಾಪತ್ತೆಯಾದ ಅರ್ಜುನ್ ಅವರ ತಾಯಿ ಶೀಲಾ ಅವರು ಮಂಜೇಶ್ವರ ಮಂಡಲದ ಯುಡಿಎಫ್ ಅಭ್ಯರ್ಥಿ ಎಕೆಎಂ ಅಶ್ರಫ್ ಅವರಿಗೆ ನಾಮಪತ್ರ ಸಲ್ಲಿಕೆಯೊಂದಿಗೆ ಪಾವತಿಸಬೇಕಾದ ಇಡುಗಂಟನ್ನು ನೀಡಿ ಆಶೀರ್ವದಿಸಿದ್ದಾರೆ.

ನಾಮಪತ್ರ ಸಮರ್ಪಣೆಗಿಂತ ಪೂರ್ವಭಾವಿಯಾಗಿ ಎಕೆಎಂ ಅಶ್ರಫ್ ಪಾಣಕ್ಕಾಡ್ ತಂಙಳ್ ಆಶೀರ್ವಾದಕ್ಕೆ ತೆರಳಿದ್ದರು. ಮರಳಿ ಬರುವ ದಾರಿ ಮಧ್ಯೆ ಕೋಝಿಕೋಡ್ ಕನ್ನಾಡಿಕ್ಕಲ್‌ನಲ್ಲಿ ವಾಸಿಸುವ ಅರ್ಜುನ್ ತಾಯಿಯನ್ನೂ ಭೇಟಿಯಾಗಿದ್ದರು. ಈ ವೇಳೆ ಅರ್ಜುನ್ ಅಮ್ಮ ಅಶ್ರಫ್ ಅವರಿಗೆ ಇಡುಗಂಟು ನೀಡಿದರು. ಉತ್ತರ ಕರ್ನಾಟಕದ ಶಿರೂರಿನಲ್ಲಿ ಭೂಕುಸಿತ ನಡೆದು ಲಾರಿ ಸಹಿತ ಹೊಳೆಯಲ್ಲಿ ನೀರುಪಾಲಾದ ಅರ್ಜುನ್ ಪತ್ತೆಗೆ ಒಂದೂವರೆ ತಿಂಗಳ ಕಾರ್ಯಾಚರಣೆ ನಡೆದಿತ್ತು.

ಕೇರಳ ಕರ್ನಾಟಕದ ಮಧ್ಯವರ್ತಿಯಂತೆ ಶಾಸಕ ಎಕೆಎಂ ಅಶ್ರಫ್ ಶಿರೂರಿನಲ್ಲಿದ್ದರು. ಆ ಸಂದರ್ಭವನ್ನು ಕೇರಳದ ದೃಶ್ಯ ಮಾಧ್ಯಮಗಳು ಬಿತ್ತರಿಸಿದ್ದವು. ಸತತ ನಲುವತ್ತಕ್ಕೂ ಅಧಿಕ ದಿನದ ಹುಡುಕಾಟದಿಂದ ಶಿರೂರು ಹೊಳೆಯಲ್ಲಿ ಅರ್ಜುನನ ಅಸ್ಥಿ ಅವಶೇಷಗಳು ಸಿಕ್ಕಿದ್ದುವು. ಅದನ್ನು ಕೇರಳದುದ್ದಕ್ಕೂ ಅರ್ಜುನ್ ಅಂತ್ಯಾಜಲಿ ಪಯಣದ ಮೂಲಕ ಕೊಂಡೊಯ್ದು ಅರ್ಜುನ್ ಅಮ್ಮನಿಗೆ ಒಪ್ಪಿಸಲಾಗಿತ್ತು. ಈ ಘಟನೆ ಬಳಿಕ ಅರ್ಜುನ್ ಕುಟುಂಬದ ಜತೆ ಅಶ್ರಫ್ ಆತ್ಮೀಯರಾಗಿದ್ದಾರೆ.

## ಕಾಪಿಕಾಡ್: ಕಾಪಿಕಾಡು ಶ್ರೀ ಉಮಾಮಹೇಶ್ವರಿ ಕ್ಷೇತ್ರಕ್ಕೆ ಕರ್ನಾಟಕ ಬ್ಯಾಂಕ್ ವತಿಯಿಂದ ವಾಟರ್ ಡಿಸ್ಪೆನ್ಸರ್ ಕೊಡುಗೆ

# ದೇವಾಲಯಕ್ಕೆ ಕುಡಿಯುವ ನೀರಿನ ಡಿಸ್ಪೆನ್ಸರ್–ಕರ್ನಾಟಕ ಬ್ಯಾಂಕ್ ಸಹಾಯ

**ಉಳ್ಳಾಲ:** ಸಾಮಾಜಿಕ ಕಳಕಳಿಯ ಉದ್ದೇಶದಿಂದ ಎಲ್ಲಾ ಹಣಕಾಸು ಸಂಸ್ಥೆಗಳು,ಖಾಸಗಿ ಸಂಸ್ಥೆಗಳು ಸಹ ಸಿಎಸ್ ಆರ್ ಕಾನೂನಿನಡಿ ತಮ್ಮ ವ್ಯವಹಾರದ ಲಾಭಾಂಶದ ಒಂದಂಶವನ್ನು ಸಮಾಜಕ್ಕೆ ನೀಡುವುದು ಕಡ್ಡಾಯ ಜವಬ್ದಾರಿಯಾಗಿದೆ. ಕರ್ನಾಟಕ ಬ್ಯಾಂಕ್ ಸ್ಥಾಪನೆಗೊಂಡು 102 ವರುಷಗಳಾಗಿದ್ದು, ಸಿಎಸ್ ಆರ್ ಕಾನೂನು ಜಾರಿಯಾಗುವ ಮೊದಲೇ ಪ್ರತೀ ವರುಷವೂ ತನ್ನ ಲಾಭಾಂಶದ ಸ್ವಲ್ಪ ಭಾಗವನ್ನ ಸಮಾಜಕ್ಕೆ ವಿನಿಯೋಗಿಸುತ್ತಾ ಬಂದಿದೆಯೆಂದು ಕರ್ನಾಟಕ ಬ್ಯಾಂಕ್ ತೆಊಕ್ಕೊಟ್ಟು ಶಾಖಾ ಪ್ರಬಂಧಕರಾದ ದೀಪಕ್ ಎಸ್.ಜಿ ಹೇಳಿದರು.

ತೊಕ್ಕೊಟ್ಟು ಕಾಪಿಕಾಡುವಿನ ಉಮಾಪುರಿ ಶ್ರೀ ಉಮಾಮಹೇಶ್ವರಿ ಕ್ಷೇತ್ರಕ್ಕೆ ಕರ್ನಾಟಕ ಬ್ಯಾಂಕಿನ ಸಿಎಸ್ ಆರ್ ನಿಧಿಯಡಿ ನೀಡಲಾದ ವಾಟರ್ ಡಿಸ್ಪೆನ್ಸರನ್ನು(ನೀರಿನ ವಿತರಕ ಯಂತ್ರ) ಬುಧವಾರದಂದು ಉಮಾಮಹೇಶ್ವರಿ ದೇವಸ್ಥಾನದಲ್ಲಿ ನಡೆದ ಧೃಢ ಕಲಶೋತ್ಸವ ಸಂದರ್ಭದಲ್ಲಿ ಕ್ಷೇತ್ರದ ಆಡಳಿತ ಮೊಕ್ತೇಸರರಾದ ಎ.ಜೆ.ಶೇಖರ್ ಅವರಿಗೆ ಹಸ್ತಾಂತರಿಸಿ ಅವರು ಮಾತನಾಡಿದರು.ವಿಶೇಷವಾಗಿ ಶಿಕ್ಷಣ,ಸಂಸ್ಕೃತಿ,ಕುಡಿಯುವ ನೀರಿನ ವ್ಯವಸ್ಥೆಗಾಗಿ ಕರ್ನಾಟಕ ಬ್ಯಾಂಕ್ ನಿರಂತರವಾಗಿ ಸಹಾಯ ಹಸ್ತ ನೀಡುವ ಮೂಲಕ ಕೆರೆಯ ನೀರನ್ನ ಕೆರೆಗೆ ಚೆಲ್ಲುವ ಕಾರ್ಯ ನಡೆಸಿದೆ. ಉಮಾಮಹೇಶ್ವರಿ ಕ್ಷೇತ್ರದವರು ನಮ್ಮನ್ನು ಸಂಪರ್ಕಿಸಿದಾಗ ಅಮೃತ ಸಮಾನವಾದ ಶುದ್ಧ ನೀರನ್ನ ಭಕ್ತಾಧಿಗಳಿಗೆ ವಿತರಿಸುವ ಸಲುವಾಗಿ ಧೃಡ ಕಲಶೋತ್ಸವದ ಶುಭ ಸಂದರ್ಭದಲ್ಲೇ ಹೊಸತಾದ ವಾಟರ್ ಡಿಸ್ಪೆನ್ಸರನ್ನು ಬಹಳ ಸಂತೋಷದಿಂದ ಕ್ಷೇತ್ರಕ್ಕೆ ನೀಡಲಾಗಿದೆಯೆಂದರು.



> ■ ಕರ್ನಾಟಕ ಬ್ಯಾಂಕ್ ಸ್ಥಾಪನೆಗೊಂಡು 102 ವರುಷಗಳಾಗಿದ್ದು, ಸಿಎಸ್ ಆರ್ ಕಾನೂನು ಜಾರಿಯಾಗುವ ಮೊದಲೇ ಪ್ರತೀ ವರುಷವೂ ತನ್ನ ಲಾಭಾಂಶದ ಸ್ವಲ್ಪ ಭಾಗವನ್ನ ಸಮಾಜಕ್ಕೆ ವಿನಿಯೋಗಿಸುತ್ತಾ ಬಂದಿದೆ

ಶ್ರೀ ಉಮಾಮಹೇಶ್ವರಿ ಕ್ಷೇತ್ರದ ಆಡಳಿತ ಮೊಕ್ತೇಸರರಾದ ಎ.ಜೆ.ಶೇಖರ್, ಆಡಳಿತ ಮಂಡಳಿ ಪ್ರ.ಕಾ. ದಿನೇಶ್.ಕೆ. ಅತ್ತಾವರ, ಕೋಶಾಧಿಕಾರಿ ಟಿ.ರಘುರಾಮ ಶೆಟ್ಟಿ, ಮೊಕ್ತೇಸರರುಗಳಾದ ಈಶ್ವರ್ ಉಳ್ಳಾಲ್, ನಿರ್ಮಲ ಕುಂಞ, ಮಹಾಲಿಂಗ, ಡಾ.ರಾಮಕೃಷ್ಣ ಶೆಟ್ಟಿ, ಕೂಸಪ್ಪ ಗಟ್ಟಿ, ಬ್ರಹ್ಮಕಲಶೋತ್ಸವ ಸಮಿತಿ ಕಾರ್ಯಾಧ್ಯಕ್ಷರಾದ ಸುರೇಶ್ ಭಟ್ನಗರ, ಪ್ರಧಾನ ಕಾರ್ಯದರ್ಶಿ ಗೋಪಿನಾಥ್ ಕಾಪಿಕಾಡು, ಉಮಾಮಹೇಶ್ವರಿ ಸೇವಾ ಸಮಿತಿಯ ಗೌರವಾಧ್ಯಕ್ಷರಾದ ಸುರೇಂದ್ರ ನಾಯಕ್, ಅಧ್ಯಕ್ಷರಾದ ದಿನೇಶ್ ರೈ ಕಳ್ಳಿಗೆ,ಪ್ರಧಾನ ಕಾರ್ಯದರ್ಶಿ ಗಣೇಶ್ ಕಾಪಿಕಾಡ್, ಪ್ರಮುಖರಾದ ಆನಂದ ಶೆಟ್ಟಿ ಭಟ್ನಗರ, ಸಂಜೀವ ಶೆಟ್ಟಿ ಪಿಲಾರ್, ಮೋಹನ್ ದಾಸ್ ಕಾಪಿಕಾಡ್, ಶಿವರಾಮ್ ಕಾಪಿಕಾಡು, ಚರಣ್ ಮೊದಲಾದವರು ಉಪಸ್ಥಿತರಿದ್ದರು.



# ಮುಡಿಪು ಉತ್ಸವ ಸಮಿತಿ, ಯು.ಟಿ.ಫರೀದ್ ಫೌಂಡೇಶನ್ ಟ್ರಸ್ಟ್ (ರಿ.) ಹಾಗೂ ಕೃಷಿಕ ಸಮಾಜ ಉಳ್ಳಾಲ ತಾಲೂಕು

ಇದರ ಜಂಟಿ ಆಶ್ರಯದಲ್ಲಿ

ವಿವಿಧ ಸಂಘ ಸಂಸ್ಥೆಗಳ ಮತ್ತು ಸರಕಾರಿ ಇಲಾಖೆಗಳ ಸಹಭಾಗಿತ್ವದಲ್ಲಿ



ಮಾನ್ಯ ಶಾಸಕರಾದ ಯು.ಟಿ.ಖಾದರ್‌ರವರ ಸಾರಥ್ಯದಲ್ಲಿ

ಲ| ದೇವದಾಸ್ ಭಂಡಾರಿಯವರ ನೇತೃತ್ವದಲ್ಲಿ





**ದಿನಾಂಕ: ಏಪ್ರಿಲ್ 24, 25, 26ರಂದು**

**ಸ್ಥಳ: ಶ್ರೀ ಕೃಷ್ಣ ಧ್ಯಾನ ಮಂದಿರ, ಮುಡಿಪು**

ಮಾನ್ಯ ಶಾಸಕರಾದ ಯು.ಟಿ. ಖಾದರ್ ಅವರ ಸಾರಥ್ಯದಲ್ಲಿ ಹಾಗೂ ಲಯನ್ಸ್ ನಾಯಕ ಲ. ದೇವದಾಸ್ ಭಂಡಾರಿಯವರ ನೇತೃತ್ವದಲ್ಲಿ ಮುಡಿಪು ಉತ್ಸವ ಸಮಿತಿ, ಯು.ಟಿ. ಫರೀದ್ ಫೌಂಡೇಶನ್ ಟ್ರಸ್ಟ್ (ರಿ.) ಮತ್ತು ಕೃಷಿಕ ಸಮಾಜ ಉಳ್ಳಾಲ ತಾಲೂಕುಗಳ ಜಂಟಿ ಆಶ್ರಯದಲ್ಲಿ "ಮುಡಿಪು ಉತ್ಸವ 2026" ಭಾರೀ ಸಂಭ್ರಮದಿಂದ ಏಪ್ರಿಲ್ 24, 25 ಮತ್ತು 26ರಂದು ಮುಡಿಪುವಿನ ಶ್ರೀ ಕೃಷ್ಣ ಧ್ಯಾನ ಮಂದಿರದಲ್ಲಿ ನಡೆಯಲಿದೆ.

ಸಾಮಾಜಿಕ, ಕೃಷಿ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಸಮನ್ವಯವಾಗಿರುವ ಈ ಮಹೋತ್ಸವದಲ್ಲಿ ಆಹಾರ ಮೇಳ, ಕೃಷಿ ಮೇಳ, ಕರು ಮೇಳ, ಬೃಹತ್ ಆರೋಗ್ಯ ತಪಾಸಣಾ ಶಿಬಿರ, ವಿಚಾರ ಸಂಕಿರಣ, ಸಾಂಸ್ಕೃತಿಕ ಉತ್ಸವ, ಗುಡ್ಡಕಾಡು ಓಟ, ಗಾಳಿಪಟ ಪ್ರದರ್ಶನ ಸೇರಿದಂತೆ ಅನೇಕ ವೈವಿಧ್ಯಮಯ ಕಾರ್ಯಕ್ರಮಗಳು ಆಯೋಜಿಸಲಾಗಿದೆ. ಹಿರಿಯ ಕೃಷಿಕರು ಹಾಗೂ ಕೃಷಿ ಸಾಧಕರಿಗೆ ಗೌರವ ಸಮರ್ಪಣೆ ಕೂಡ ಈ ಉತ್ಸವದ ಪ್ರಮುಖ ಆಕರ್ಷಣೆಯಾಗಲಿದೆ.

ಮುಡಿಪು ಪ್ರದೇಶದಲ್ಲಿ ಆಕರ್ಷಕ ಧ್ಯಾನ ಮಂದಿರವನ್ನು ನಿರ್ಮಿಸಿದ ಮದನ್ ಮೋಹನ್ ನಾಯಕ್ ಅವರಿಗೆ ವಿಶೇಷ ಸನ್ಮಾನ ಕಾರ್ಯಕ್ರಮವೂ ನಡೆಯಲಿದ್ದು, ಈ ಭಾಗದ ಅಭಿವೃದ್ಧಿಗೆ ಅವರ ಕೊಡುಗೆಯನ್ನು ಸ್ಮರಿಸಲಾಗುತ್ತದೆ.



ಕಾರ್ಯಕ್ರಮಗಳ ಅಂಗವಾಗಿ ಏಪ್ರಿಲ್ 22ರಂದು ಗುಡ್ಡಕಾಡು ಓಟ ಮತ್ತು ಸ್ವಚ್ಛತಾ ಅಭಿಯಾನಕ್ಕೆ ಚಾಲನೆ ನೀಡಲಾಗುತ್ತದೆ. ಏಪ್ರಿಲ್ 24ರಂದು ಚಿತ್ರಕಲೆ ಮತ್ತು ಭರತನಾಟ್ಯ ಸ್ಪರ್ಧೆಗಳು ನಡೆಯಲಿದ್ದು, ಏಪ್ರಿಲ್ 25ರಂದು ಯಕ್ಷಗಾನ, ಕರು ಪ್ರದರ್ಶನ ಮತ್ತು ಗಾಳಿಪಟ ಉತ್ಸವ ಪ್ರೇಕ್ಷಕರನ್ನು ರಂಜಿಸಲಿವೆ.

ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ತಜ್ಞ–ರಿಂದ ವಿಚಾರ ಸಂಕಿರಣ, ಕೃಷಿ ಯಂತ್ರೋಪಕರಣಗಳ ಪ್ರದರ್ಶನ ಮತ್ತು ಮಾರಾಟ, ಕೀಟನಾಶಕ ಹಾಗೂ ನೀರಾವರಿ ಸಲಕರಣೆಗಳ ಪ್ರದರ್ಶನ, ಸಾವಯವ ಬೀಜಗಳ ಮಾರಾಟ, ತೋಟಗಾರಿಕಾ ಇಲಾಖೆಗಳಿಂದ ಮಾಹಿತಿ ಮಳಿಗೆಗಳು ಮತ್ತು ಹೂ–ಹಣ್ಣು ಗಿಡಗಳ ನರ್ಸರಿ ಪ್ರದರ್ಶನಗಳು ನಡೆಯಲಿವೆ. ಜೊತೆಗೆ ಸೋಲಾರ್ ಉಪಕರಣಗಳ ಪ್ರದರ್ಶನವೂ ಉತ್ಸವದ ವಿಶೇಷತೆಯಾಗಿದೆ.

ಆರೋಗ್ಯ ಸೇವೆಗಳ ಭಾಗವಾಗಿ ಪ್ರಸಾದ್ ನೇತ್ರಾಲಯದಿಂದ ಕಣ್ಣಿನ ತಪಾಸಣೆ, ಸಂಜಯ್ ಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆ, ಯೆನೆಪೋಯ ಆಸ್ಪತ್ರೆ (ಕ್ಯಾನ್ಸರ್ ತಪಾಸಣೆ) ಹಾಗೂ ಕರಾವಳಿ ಆಸ್ಪತ್ರೆ ವತಿಯಿಂದ ವಿವಿಧ ವೈದ್ಯಕೀಯ ತಪಾಸಣೆ ಶಿಬಿರಗಳು ನಡೆಯಲಿವೆ.

ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿಯೂ ವೈವಿಧ್ಯತೆ ಕಾಣಲಿದ್ದು, ಇಂಚರ ಗ್ರೂಪ್ ಬೆಂಗಳೂರು ಝೀ ಟಿವಿ ಕಲಾವಿದರಿಂದ ಸಂಗೀತ ರಸಮಂಜರಿ, ಲಕುಮಿ ತಂಡದ ಕಲಾವಿದರಿಂದ ತುಳು ಹಾಸ್ಯ ನಾಟಕ "ಆಂಟೀ ಅಂಕಲ್" ಪ್ರೇಕ್ಷಕರಿಗೆ ಮನರಂಜನೆ ನೀಡಲಿದೆ. ಏಪ್ರಿಲ್ 26ರಂದು ಮೆಗಾ ಮ್ಯಾಜಿಕ್ ಸ್ಟಾರ್ ಕುದ್ರೋಳಿ ಗಣೇಶ್ ಹಾಗೂ ಬಳಗದವರಿಂದ "ಮಸ್ತ್ ಮ್ಯಾಜಿಕ್" ಪ್ರದರ್ಶನ ನಡೆಯಲಿದೆ.

ಸಮಗ್ರವಾಗಿ, ಕೃಷಿ, ಆರೋಗ್ಯ, ಸಂಸ್ಕೃತಿ ಮತ್ತು ಮನರಂಜನೆಯ ಸಮ್ಮಿಳನವಾಗಿರುವ "ಮುಡಿಪು ಉತ್ಸವ 2026" ಉಳ್ಳಾಲ ತಾಲೂಕಿನಲ್ಲಿ ಒಂದು ವಿಶಿಷ್ಟ ಹಬ್ಬದ ವಾತಾವರಣವನ್ನು ಸೃಷ್ಟಿಸುವುದರಲ್ಲಿ ಸಂಶಯವಿಲ್ಲ.


ವಿಶ್ವ ಹಿಂದೂ ಪರಿಷತ್ ಮಂಗಳೂರು

ವಿಶ್ವಶ್ರೀ ಹಿಂದೂ ರುದ್ರಭೂಮಿ ರಸ್ತೆ ಕದ್ರಿ, ಮಂಗಳೂರು

ಹಿಂದೂ ಸಮಾಜದ ಐಕ್ಯತೆ ಮತ್ತು ಲೋಕ ಕಲ್ಯಾಣಾರ್ಥವಾಗಿ

6ನೇ ವರ್ಷದ

ಕುತ್ತಾರು ಕೊರಗಜ್ಜನ ಆದಿಕ್ಷೇತ್ರಕ್ಕೆ

ನಮ್ಮ ನಡೆ



ಏಪ್ರಿಲ್ 12, 2026 ಆದಿತ್ಯವಾರ

ಬೆಳಗ್ಗೆ 6.00 ಗಂಟೆಗೆ ಶ್ರೀ ಕ್ಷೇತ್ರ ಕದ್ರಿಯಿಂದ ಬೃಹತ್ ಪಾದಯಾತ್ರೆ

ಬೆಳಗ್ಗೆ 8.30ಕ್ಕೆ ಸಾಮೂಹಿಕ ಪ್ರಾರ್ಥನೆ

ಬೆಳಗ್ಗೆ 9.00 ಕ್ಕೆ ಧಾರ್ಮಿಕ ಸಭೆ ಕುತ್ತಾರು ದೆಕ್ಕಾಡಿನ ಶ್ರೀ ಕೊರಗಜ್ಜನ ಆದಿಕ್ಷೇತ್ರದ ಬಳಿ

ಧಾರ್ಮಿಕ ಉಪನ್ಯಾಸ : ಕೃಷ್ಣ ಆಡಿಗ ಧಾರ್ಮಿಕ ಮುಖಂಡರು



ಹೆಚ್ಚಿನ ಮಾಹಿತಿಗಾಗಿ ಸ್ಕ್ಯಾನ್ ಮಾಡಿ

9740887653

ಹಿಂದೂ ವಿರೋಧಿ ಕೃತ್ಯಗಳು ಮಾಯವಾಗಿ ಸಮಸ್ತ ಹಿಂದೂ ಸಮಾಜದ ಐಕ್ಯತೆ ಜೊತೆಗೆ ಲೋಕ ಕಲ್ಯಾಣಾರ್ಥದ ಸದುದ್ದೇಶದಿಂದ ಕದ್ರಿ ಶ್ರೀ ಮಂಜುನಾಥನ ಕ್ಷೇತ್ರದಿಂದ ದೆಕ್ಕಾಡಿನ

ಶ್ರೀ ಕೊರಗಜ್ಜನ ಆದಿಕ್ಷೇತ್ರದವರೆಗೆ ಪಾದಯಾತ್ರೆ

ಶ್ರೀ ಪಂಜಂದಾಯ ದೈವದ ವರಪ್ರಸಾದದಿಂದ, ಶ್ರೀ ಕೊರಗತನಿಯ ದೈವವು ಪಡೆದ 7 ಆದಿಸ್ಥಳಗಳು




ಶ್ರೀಕೊರಗಜ್ಜ ಆದಿಕ್ಷೇತ್ರಕ್ಕೆ ಪಾದಯಾತ್ರೆಗೆ ಶುಭಕೋರುವ

ಬಿ.ಶ್ರೀಧರ ಶೆಟ್ಟಿ ಮಾಗಣತ್ತಡಿ

ಅನುವಂಶಿಕ ಆಡಳಿತ ಮೊಕ್ತೇಸರರು, ಶ್ರೀ ಪಂಜಂದಾಯ ಬಂಟ, ವೈದ್ಯನಾಥ ಆದಿ ಕೊರಗತನಿಯ ಕ್ಷೇತ್ರ


Ullalavani, Published by Ravi Bangera, Printed at DIGANTA MUDRANA LTD 5-184/185 NEAR INDUSTRIAL AREA YEYYADI MANGALARE, DAKSHINA KANNADA, KARNATAKA - 575008. News Editor: Mohan Kuthar.
Editorial Office at : Appachi Complex, Kuthar, Munnur Post, Someshwar Village, Ullal Tq - 575 017, Call : 9972528110. RNI:KNKAN/26/A0422. Email: ullalavani@gmail.com